
ಕಲ್ಯಾಣ ಕಿರಣ

ಬೆಲೆ : 3 ರೂ.

ಜೂನ್, 1994



ಕಲ್ಯಾಣ ಕಿರಣ

ಮಾಸ ಪತ್ರಿಕೆ, ಜೂನ್-1994, ಬಿಡಿ ಸಂಚಿಕೆ 3-00 ರೂ.

ಸಂಪುಟ : 24 ಸಂಚಿಕೆ : 1 ಬಸವ ಶಕೆ : 889

ವಾರ್ಷಿಕ ಚಂದಾ : 30 ರೂ. ಆಜೀವ ಸದಸ್ಯತ್ವ : 300-00

ಕಿರಣಗನ್ನಡಿ

ಮುಖಪುಟ : ಅಭಯ ಹಸ್ತದ ಬಸವಣ್ಣನವರು

ಹೊದ್ದಿಕೆಯ 4 ನೇ ಪುಟ : 7ನೇ ಶರಣ ಮೇಳದ ಧ್ವಜಾರೋಹಣ

ಬೆಂಗಳೂರು ವಿಳಾಸ : ಕಲ್ಯಾಣ ಕಿರಣ ಮಾಸ ಪತ್ರಿಕೆ, ಬಸವ ಮಂಟಪ, 2035, 2ನೇ ಬ್ಲಾಕ್, 20ನೇ ಮುಖ್ಯರಸ್ತೆ, ರಾಜಾಜಿನಗರ, ಬೆಂಗಳೂರು-10 ದೂರವಾಣಿ : 3325335

ಸಂಪುಟ : 24 ಸಂಚಿಕೆ : 1 ಬಸವ ಶಕೆ : 889 ಜೂನ್ : 1994

ಬಸವಣ್ಣನವರ ಅಪ್ರತಿಮ ಸಾಧನೆ

೧ ನಿರಾಕಾರದ ಮೂರ್ತಿಯು ಆಕಾರಕ್ಕೆ
೨ ತಂದೆಯಲ್ಲ ಬಸವಾ
೩ ಆಕಾರದ ಮೂರ್ತಿಯು ಹೃದಯ ಕಂಜದಲ್ಲಿ
೪ ವಾಸಗೊಂಡು ತೋರಿದೆಯಲ್ಲ ಬಸವಾ
೫ ಈ ಆಕಾರಕ್ಕೆ ತಂದು, ಭಕ್ತಿಯುನನುಗೈದು
೬ ದಿಗಂತದಲ್ಲಿ ಬೆಳೆದೆಯಲ್ಲ ಬಸವಾ
೭ ಇನ್ನಾಕಾರವ ನಿರಾಕಾರದಲ್ಲಿ ಅನುಗೊಳಿಸಬೇಕೆಂದು
೮ ಕಪಿಲ ಸಿದ್ಧ ಮಲ್ಲಿಕಾರ್ಜುನನ ಹೃದಯದಲ್ಲಿ
೯ ಮರೆಯಾದೆಯಲ್ಲ ಬಸವಾ. –ಸಿ. ವ. ೧೨೮೮

೧–೨ ಪರಮಾತ್ಮನು ನಿರಾಕಾರನು, ನಿರವಯವನು. ಇಂಥ ಪರಮಾತ್ಮನನ್ನು ಪೂಜಿಸಬೇಕಾದರೆ ಸಾಕಾರ ರೂಪು ಬೇಕು ಎಂದು ವಿಶ್ವದ ಆಕಾರದಲ್ಲಿ ಚುಳುಕಾಗಿ ಮಾಡಿ, ಕರಕಮಲದಲ್ಲಿಟ್ಟು ಪೂಜಿಸ ಹೇಳಿದರು.

೩–೪ ಕುರುಹು ಕೇವಲ ಕುರುಹಿಗಾಗಿ ಅಲ್ಲ ; ಅರುಹು ಪಡೆಯಲು ಕುರುಹು ಒಂದು ಸಾಧನ. ಪರಮಾತ್ಮನನ್ನು ಸಂಪಾದಿಸಿಕೊಳ್ಳುವುದೇ ಗುರಿ. ಇದಕ್ಕೆ ಕುರುಹು ಒಂದು ಸಾಧನ ಮಾತ್ರ. ಆದ್ದರಿಂದ ಕುರುಹು ಅಂತಿಮವಾಗಿ ಅರುಹಿನ ಸುಪ್ರಕಾಶವನ್ನು ಹೃದಯದಲ್ಲಿ ನೆಲೆಗೊಳಿಸಬೇಕು ಎಂದು ತಿಳಿಸಿಕೊಟ್ಟರು.

೫–೬ ನಿರಾಕಾರ ಪರಮಾತ್ಮನನ್ನು ಕುರುಹಿಗೆ ತಂದು, ಈ ಮಹತ್ವಪೂರ್ಣ ಲಾಂಛನದಿಂದ ಭಕ್ತಿಯನ್ನು ಎಲ್ಲ ದಿಕ್ಕುಗಳಲ್ಲಿ ಹಬ್ಬಿಸಿದರು. ಪಾಷಂಡಿ ಭೂಮಿ ಭಕ್ತಿಯ ವರ್ಷಾಧಾರೆಯಿಂದ ಜೀವಂತಿಕೆ ತಳೆದು ವಚನ ವಾಙ್ಮಯದ ವಿಪುಲ ಬೆಳೆಯನ್ನು ಕೊಟ್ಟಿತು.

೭–೮–೯ ಮಾನವ ಆಕಾರದ ಶರೀರವನ್ನು ತೊರೆದು ಆತ್ಮವನ್ನು ನಿರಾಕಾರದಲ್ಲಿ ಅಡಗಿಸಬೇಕೆಂದು ಪರಮಾತ್ಮನ ಹೃದಯದಲ್ಲಿ ಮರೆಯಾದರು.

> ಇಂಥ ಬಸವಣ್ಣನವರು ಲಿಂಗೈಕ್ಯರಾದುದು ಶ್ರಾವಣ ಶುದ್ಧ ಪಂಚಮಿಯಂದು. ಬಸವ ಪಂಚಮಿ ಅಗಸ್ಟ 11 ರಂದು ಒದಗಿ ಬಂದಿದೆ. ಶ್ರಾವಣ ಪ್ರತಿಪದೆಯಿಂದ ಪಂಚಮಿಯವರೆಗೆ ಬಸವೇಶ್ವರ ಪೂಜಾವ್ರತವನ್ನು ಆಚರಿಸಿ, ವಚನ ಶಾಸ್ತ್ರವನ್ನು ಪಾರಾಯಣ ಮಾಡಬೇಕೆಂದು ಸೂಚಿಸುತ್ತೇವೆ.

ಕಲ್ಯಾಣ ಕಿರಣದ ಓದುಗರಲ್ಲಿ ಒಂದು ಕಿವಿ ಮಾತು ?

—ಮಾತಾಜಿ

ಓರ್ವ ಓದುಗರು ಪತ್ರ ಬರೆದಿದ್ದರು (ಗಿರೀಶ್ ಎಂದು ಅವರ ಹೆಸರು) ಕಲ್ಯಾಣ ಕಿರಣದಲ್ಲಿ ಮೊದಲು ಅಧ್ಯಾತ್ಮಿಕ ಲೇಖನಗಳು ಇರುತ್ತಿದ್ದವು. ಈಗ ವಾದ–ವಿವಾದ ಚರ್ಚೆ ಇರುತ್ತವೆ. ಮೊದಲಿನಂತೆಯೇ ಬರಲಿ ಎಂದು.

'ತಾಯಿಯಂತೆ ಮಕ್ಕಳು, ನೂಲಿನಂತೆ ಸೀರೆ' ಎಂಬ ಗಾದೆಯಂತೆ ನಮ್ಮ ಮನೋಭಾವದಂತೆಯೇ ಪತ್ರಿಕೆ ಸಿದ್ಧವಾಗುತ್ತದೆ. 1965-66 ರಲ್ಲಿ ನಾನು ಆಧ್ಯಾತ್ಮ ಜೀವನಕ್ಕೆ ಪಾದಾರ್ಪಣ ಮಾಡಿದಾಗ ಸಾಮಾಜಿಕ–ಐತಿಹಾಸಿಕ ವಿಷಯ ಚರ್ಚಿಸಲು ಸಿದ್ಧಳಿರಲಿಲ್ಲ ; ಬರಿ ಅಧ್ಯಾತ್ಮಿಕ ವಿಷಯದಲ್ಲಿ ಆಸಕ್ತಿ; ಧರ್ಮ ಪ್ರಚಾರದಲ್ಲಿ ಸಹ ಆಸಕ್ತಿ ಇರಲಿಲ್ಲ ; ಸಾಧನೆ ಮಾಡಿ ಮುಕ್ತಿಪಡೆದರೆ ಸಾಕು ಎಂಬ ಧೋರಣೆ ಇತ್ತು.

ವಿವಾಹವಾದ ಹೊಸದರಲ್ಲಿ ಹುಡುಗಿಗೆ ತನ್ನ ಕೇಂದ್ರ ಬಿಂದು ಪತಿ, ಪತಿಯ ಪ್ರೇಮ; ಅದರ ಗಳಿಕೆಗಾಗಿಯೇ ಅಲಂಕಾರ, ಕೆಲಸ ಎಲ್ಲ. ಮುಂದೆ ಮಕ್ಕಳಾದ ಮೇಲೆ ಪತಿಯ ಬಗ್ಗೆ ಪ್ರೇಮವಿರುವುದಾದರೂ ಮಕ್ಕಳ ಕಡೆಗೆ ಗಮನ ಜಾಸ್ತಿ ಹರಿಯುತ್ತೆ. ಅವು ಆರೋಗ್ಯವಾಗಿರಬೇಕು, ಸ್ವಚ್ಛವಿರಬೇಕು, ಚೆನ್ನಾಗಿ ಓದಬೇಕು, ಉಳಿದ ಮಕ್ಕಳ ಜೊತೆ ವಿದ್ಯೆಯಲ್ಲಿ ಸ್ಪರ್ಧಿಸಿ ಮುಂದೆ ಬರಬೇಕು, ಇದು ತಾಯಿಯ ಆಸೆ.

ದೀಕ್ಷೆ ಪಡೆದು ಸಾಧನೆ ಆರಂಭಿಸಿದಾಗ ಲಿಂಗಪೂಜೆ – ಅಧ್ಯಯನ – ಸಾಧನೆ ದಾರ್ಶನಿಕ ಸಾಹಿತ್ಯ ರಚನೆ ಇಷ್ಟರಲ್ಲೇ ನನ್ನ ಆಸಕ್ತಿ ; ಉಳಿದುದು ವ್ಯವಹಾರ ಅನ್ನಿಸುತ್ತಿತ್ತು. ಆದರೆ ಬರುಬರುತ್ತಾ ಸಮಾಜದ ಕಡೆ ಗಮನ ಹರಿಯಿತು. ಆರಂಭದಲ್ಲಿ ಅಕ್ಕಮಹಾದೇವಿಯ ಸಾಹಿತ್ಯ–ಸಾಧನೆ ಕಡೆಗೆ ಒಲವು ಇದ್ದುದರಿಂದ ಆ ದೃಷ್ಟಿಕೋನ ಬೆಳೆದಿರಬಹುದು. ಬಸವಣ್ಣನವರ ವಚನಗಳನ್ನು ಹೆಚ್ಚು ಓದ ತೊಡಗಿದಂತೆ ಸುತ್ತಲಿನ ಸಮಾಜದ ಬಗ್ಗೆ ಗಮನ ಹರಿಯಿತು. "ಕನ್ನಡಿಯ ನೋಡುವ ಅಣ್ಣಗಳಿರಾ ಜಂಗಮ (ಸಮಾಜ) ವ ನೋಡಿರೋ" ಎಂದು ಅಪ್ಪ ಬಸವಣ್ಣನವರು ಅಂಕುಶ ಇಡ ತೊಡಗಿದರು. ಆಗ ದೃಷ್ಟಿಕೋನದಲ್ಲಿ ಬದಲಾವಣೆ ಆರಂಭವಾಯಿತು.

ನಮ್ಮಲ್ಲಿ ಕೆಲವು ದಿನ ಓರ್ವ ಸಾಧಕ ಸ್ವಾಮಿಗಳು ತಂಗಿದ್ದರು. ಸ್ವಭಾವತಃ ಆಲಸಿ, ಉಟ್ಟ ಬಟ್ಟೆ ಕಮಟುಗಟ್ಟಿದ್ದರೂ ಎಂದೂ ತೊಳೆದುಕೊಂಡವರಲ್ಲ. ಬಟ್ಟೆ ತೊಳೆಯುವ ಸಮಯವೂ ವ್ಯರ್ಥವಾಗಬಾರದೆಂದು ಧ್ಯಾನಮಾಡುತ್ತಿದ್ದರು. ಇರುವ ಕೋಣೆಯನ್ನು ಒಂದು ದಿನವೂ ಗುಡಿಸಿಕೊಳ್ಳುವವರಲ್ಲ. ಕಸದಲ್ಲೇ ಯೋಗಾಸನ ಮಾಡಿ, ಪದ್ಮಾಸನ ಹಾಕಿ ಕುಳಿತು ಗಂಟೆಗಟ್ಟಳೆ ಧ್ಯಾನಮಾಡುವವರು. ಇಂತಹ ಅಧ್ಯಾತ್ಮಿಕತೆ ಕಂಡು ನಮಗೆ ಸೋಜಿಗವೆನಿಸತೊಡಗಿತು. ಕೋಣೆಯ ಸ್ವಚ್ಛತೆ,

ಬಳಸುವ ವಸ್ತುಗಳ ಸ್ವಚ್ಛತೆ, ದೇಹ ಸ್ವಚ್ಛತೆ ಮೊದಲು ಕಾಯ್ದುಕೊಂಡು ಅಂತ–ರಂಗದ ಶುದ್ಧಿಗೆ ನೆರವಾಗುವ ಧ್ಯಾನ ಮಾಡಬೇಕು ತಾನೆ ?

ಹಾಗೆಯೇ ಸಮಾಜದಲ್ಲಿ ತಾತ್ತ್ವಿಕ ಶುದ್ಧಿ, ವೈಚಾರಿಕ ಚಿಂತನೆ ಆಚಾರ ಸಂಪನ್ನತೆ ಮುಖ್ಯ. ಇದನ್ನು ಜನರಲ್ಲಿ ಬಿತ್ತದೆ, ಬೆಳೆಸದೆ ಬರೀ ವೈಯಕ್ತಿಕ ಮುಕ್ತಿಯ ಕಡೆ ಲಕ್ಷ್ಯವಿಡುವುದು ಒಂದು ಬಗೆಯ ಸ್ವಾರ್ಥ ಎನಿಸತೊಡಗಿತು. ಹೀಗಾಗಿಯೇ ತಾತ್ತ್ವಿಕ ಜಾಗೃತಿ, ಸಮಾಜ ಶುದ್ಧಿಗೆ ಅಗತ್ಯವಿರುವ ಬರವಣಿಗೆಗೆ ಈಗ ಒತ್ತುಕೊಡಲಾಗುತ್ತಿದೆ.

ಯೋಗ–ಅಧ್ಯಾತ್ಮಗಳು ಸಾಧನವೇ ವಿನಾ ಅವೇ ಗುರಿಯಲ್ಲ. ಎಂತಹ ವಿಪತ್ತು, ಸಂಕಷ್ಟಗಳ ಮಧ್ಯದಲ್ಲೂ ಚಿತ್ತಸಮತೆಯನ್ನು ಕಾಯ್ದುಕೊಳ್ಳುವುದನ್ನು ಯೋಗ ಅಧ್ಯಾತ್ಮಗಳು ಕಲಿಸಬೇಕು. ಪರಮಾತ್ಮನ ಕರುಣೆಯೂ ದೊರೆತು ಚಿತ್ತ–ಮನ ಬುದ್ಧಿಗಳ ಬ್ಯಾಟರಿಗಳು ಚಾರ್ಜ್ ಆಗಬೇಕು. ಈ ಸಿದ್ಧತೆಯೊಡನೆ ಸಮಾಜ ಪರಿವ-ರ್ತನೆ, ಶುದ್ಧೀಕರಣ ಕಾರ್ಯದಲ್ಲಿ ಸಾಧಕನು ನಿರತವಾಗಬೇಕು. ಆಗ ಅವನು ಬರುವ ಎಡರು ತೊಡರು. ಟೀಕೆ–ಟಿಪ್ಪಣಿಗಳನ್ನು ಆತ್ಮವಿಶ್ವಾಸದಿಂದ ಎದುರಿಸಬಲ್ಲನು.

ಯೋಗಿಯು ಸ್ವಾರ್ಥಿಯಾಗಬಾರದು

ಕೆಲವರು 24 ಗಂಟೆಯೂ ಧ್ಯಾನ ಕುರಿತೇ ಹೇಳುವರು, ಅದನ್ನೇ ಮಾಡುವರು. ಇವರಿಗೆ ಉಳಿದ ಯಾವ ಸಮಸ್ಯೆಗಳೂ ಕಣ್ಣಿಗೆ ಕಾಣುವುದೇ ಇಲ್ಲ ; ಕಿವಿಗೆ ಕೇಳುವುದೇ ಇಲ್ಲ. ಸಮಸ್ಯೆಗಳ ಮಧ್ಯೆ ಶಾಂತಿ ಕಂಡುಕೊಳ್ಳಲು ಧ್ಯಾನಾಸಕ್ತರಾಗುತ್ತಾರೆ. ಇದು ಸತ್ಯವಿದ್ದರೂ, ಅರ್ಧ ಸತ್ಯ ಮಾತ್ರ. ಯೋಗದಿಂದ ವೈಯಕ್ತಿಕ ಸಬಲತೆ ಪಡೆದು, ಸಮಾಜ ಪರಿವರ್ತನೆಗೆ ಸನ್ನದ್ಧರಾಗಬೇಕು.

ನಮ್ಮದೊಂದು ಮನೆ ಇದೆ. ಬಂದವರನ್ನೆಲ್ಲ ಸ್ವಾಗತಿಸಿ, ಇಂಬಿಟ್ಟುಕೊಳ್ಳುತ್ತದೆ. ಆದರೆ ಅದೀಗ ಕೊಳೆಯೂಗಿದೆ; ನಾರುತ್ತಿದೆ. ಅದನ್ನು ಸ್ವಚ್ಛಮಾಡಿ, ಆಹ್ಲಾದಕರವಾಗಿ ಮಾಡಿದರೆ ಆಶ್ರಯವಿಲ್ಲದ ಅಸಂಖ್ಯಾತರಿಗೆ ಆಶ್ರಯ ನೀಡುವುದಷ್ಟೆ. ಎಷ್ಟೋ ಜನ ಉಪಕೃತರಾಗುವರಷ್ಟೆ.

ಹಾಗೆಯೇ ಬಸವಣ್ಣ ಕಟ್ಟಿದ ಮಹಾಮನೆ ಅದ್ಭುತವಾಗಿದೆ. ಜಾತಿಮತ ಪಂಥ ಧರ್ಮಾತೀತವಾಗಿ ಎಲ್ಲರನ್ನು ಇಂಬಿಟ್ಟುಕೊಳ್ಳಬಲ್ಲುದಾಗಿದೆ. ಆದರೆ ಜಾತೀಯತೆ ಎಂಬ ಕಸ ಬಿದ್ದಿದೆ, ಬಹುದೇವತೋಪಾಸನೆಯ ಜಿರಳೆ–ಹಲ್ಲಿ ಹರಿದಾಡುತ್ತಿವೆ. ಮೂಢನಂಬಿಕೆಯ ಜೇಡ ಬಲೆಕಟ್ಟಿದೆ. ಮನೆ ತುಂಬಾ ಚೆನ್ನಾಗಿದೆ, ಗಟ್ಟಿ ಮುಟ್ಟಾಗಿದೆ. ಅಸಂಖ್ಯಾತರಿಗೆ ಆಶ್ರಯ ನೀಡಬಹುದಾದಷ್ಟು ವಿಶಾಲವಾಗಿದೆ. ಅದಕ್ಕೇ ಈಗ ವಚನ ಸಾಹಿತ್ಯದ ನೆರವಿನಿಂದ ಸಮಾಜವೆಂಬ ಮನೆಯನ್ನು ಅಂದಗೊಳಿಸೋಣ. ಜಾತೀಯತೆಯ ಕಸ ತೆಗೆದು, ಬಹುದೇವತೋಪಾಸನೆಯ ಹಲ್ಲಿ-ಜಿರಳೆ ಹೊರಹಾಕಿ ಮೂಢನಂಬಿಕೆಯ ಜೇಡರ ಬಲೆ ಕಿತ್ತು ಬಿಸುಟಿ, ತತ್ತ್ವಜ್ಞಾನದ ನೀರಿನಿಂದ ಒರೆಸೋಣ, ಜ್ಞಾನದ ದೀಪಗಳನ್ನು ಹಚ್ಚಿ, ಸದ್ಭಾವನೆಯ ಅಗರಬತ್ತಿ ಉರಿಸಿ, ಒಳಗಿರುವವರನ್ನು ನೆಮ್ಮದಿಯರಾಗಿಡೋಣ, ಹೊರಗಿನವರನ್ನೂ ಹರ್ಷದಿಂದ ಸ್ವಾಗತಿಸೋಣ.

ಕಲ್ಯಾಣ ಕಿರಣ ಸ್ವಚ್ಛತಾ ಕಾರ್ಯದಲ್ಲಿ ನಿರತವಾಗಿದೆ; ನೀವೂ ಕೈ ಹಚ್ಚಿರಿ.

ಆತ್ಮಹತ್ಯೆ, ಶಿಕ್ಷಾರ್ಹ ಅಪರಾಧವಲ್ಲ
ಸುಪ್ರೀಂ ಕೋರ್ಟ್ ತೀರ್ಪು

—ಮಾತಾಜಿ

ಭಾರತದ ಸರ್ವೋಚ್ಚ ನ್ಯಾಯಾಲಯವು ಒಂದು ಕ್ರಾಂತಿಕಾರಿ ತೀರ್ಪನ್ನಿತ್ತು "ಆತ್ಮಹತ್ಯೆಯು ಶಿಕ್ಷಾರ್ಹ ಅಪರಾಧವಲ್ಲ" ಎಂದು ಪರಿಗಣಿಸಿದೆ. ಆತ್ಮಹತ್ಯೆ ಎಂಬ ಪದ ವಿಶ್ಲೇಷಣೆ ಮಾಡೋಣ. ನಾನು ಎಷ್ಟೋ ದಿವಸಗಳಿಂದ ಚಿಂತನೆ ಮಾಡುತ್ತಿರುವೆ; 'ಆತ್ಮಹತ್ಯೆ'ಎಂಬ ಪದ ಸರಿಯೆ? ಭಾರತೀಯ ತತ್ತ್ವಶಾಸ್ತ್ರ–ಧರ್ಮಶಾಸ್ತ್ರಗಳು ಆತ್ಮವನ್ನು ಶಸ್ತ್ರವು ಛಿದ್ರಿಸಲಾರದು, ಬೆಂಕಿಯು ಸುಡಲಾರದು; ಆತ್ಮವು ಅವಿನಾಶಿ, ದೇಹ ಮಾತ್ರ ಅಂಗಿಯಂತೆ ಬದಲಾಗುತ್ತದೆ ಎಂದು ಸಾರಿಸಾರಿ ಹೇಳುತ್ತಿರುವಾಗ ಆತ್ಮಹತ್ಯೆ, ಆತ್ಮಾಹುತಿ ಎಂಬ ಪದಗಳು ಹೇಗೆ ರೂಢಿಯಲ್ಲಿ ಬಂದಿರಬಹುದು. ಆತ್ಮಹತ್ಯೆಗೆ ಬದಲು ಸ್ವಹತ್ಯೆ ಎಂದರೆ ಸರಿಯಾಗುವುದಲ್ಲವೆ ? ಎಂದು.

ಇಂಥ ಸ್ವಹತ್ಯೆಯನ್ನು ಯಾರಾದರೂ ಮಾಡಿಕೊಂಡರೆ, ಅವರೇನೋ ಇಹ ಲೋಕದ ಸಂಕಷ್ಟದಿಂದ ಪಾರಾಗಿ ಬಿಡುವರು. ಇದರ ತಾಪತ್ರಯ ಹತ್ತಿರದ ಬಂಧುಗಳನ್ನು ಸುತ್ತುವುದು. ಸ್ವಹತ್ಯೆಗೆ ಪ್ರಯತ್ನಿಸಿ, ಆಯುಶಸ್ವಿಯಾಗಿ ಉಳಿದು ಬಿಟ್ಟರಂತೂ ಅವರ ಪಾಡು ಯಾರಿಗೂ ಬೇಡ. ಇನ್ನಷ್ಟು ಅವಮಾನಿತರಾಗಿ ಬದುಕುವ ಘೋರ ವಾತಾವರಣ, ಪೋಲೀಸರ ಕಾಟ; ಕಾಯ್ದೆಯ ಭಯ.

ಈ ಸಂಕಷ್ಟದಿಂದ ಭಾರತದ ಸರ್ವೋಚ್ಚ ನ್ಯಾಯಾಲಯವು ಸ್ವಹತ್ಯೆಯನ್ನು ಪಾರು ಮಾಡಿದೆ. ಸ್ವಹತ್ಯೆ ಹೇಡಿತನ, ಪಲಾಯನವಾದ ಎಂಬುದೆಲ್ಲವೂ ಸತ್ಯವೆ. ಆದರೆ ಬದುಕನ್ನು ಎದುರಿಸಲೇ ಆರದ ನಿಸ್ಸಹಾಯಕರು, ವಾಸಿಯಾಗದಂತಹ ರೋಗಪೀಡಿತರು, ದುರ್ಬಲ ಮನಸ್ಕರು ಪರಿಹಾರ ಕಂಡುಕೊಳ್ಳುವುದು ಸ್ವಹತ್ಯೆಯಲ್ಲೇ, ಕ್ರೈಸ್ತಧರ್ಮವು ಆತ್ಮಹತ್ಯೆಯನ್ನು ದೇವರ ಇಚ್ಛೆಗೆ ವಿರುದ್ಧವಾದ ಪಾಪದ ಕ್ರಿಯೆ ಎನ್ನುತ್ತದೆ. ಭಾರತೀಯ ತತ್ತ್ವಶಾಸ್ತ್ರವೂ ಹಾಗೆಯೇ ಹೇಳುತ್ತದೆ. ಆದರೆ ಧರ್ಮವು ಇಚ್ಛಾಮರಣದ ಮೂಲಕ ಮಹಾಯೋಗಿಗಳಿಗೆ ಅವಕಾಶ ಕೊಟ್ಟಿದೆ. ಜೈನ ಧರ್ಮ–ಲಿಂಗವಂತ ಧರ್ಮಗಳು ಸಲ್ಲೇಖನ ವ್ರತ–ವಿಭೂತಿ ವೀಳ್ಯ ಸ್ವೀಕರಿಸುವವರಿಗೆ ಅನುಮತಿ ನೀಡಿ ಸ್ವಇಚ್ಛೆಯ ಸಾವಿಗೆ ಅಧಿಕೃತ ಮುದ್ರೆ ಒತ್ತಿವೆ ಎಂಬುದು ಸೋಜಿಗದ ಸಂಗತಿಯಾದರೂ ಸತ್ಯ.

ಆದರೆ ಸ್ವಹತ್ಯೆಗೆ ಯತ್ನಿಸುವ ಚಿಕ್ಕ ವಯಸ್ಸಿನ ಯುವಕ–ಯುವತಿಯರಿಗೆ ಸಾಂತ್ವನ, ಮಾರ್ಗದರ್ಶನ, ಪುನಶ್ಚೇತನ, ಮಾನಸಿಕ ತರಬೇತಿಗೆ ವ್ಯವಸ್ಥೆ ಮಾಡುವುದು ಮಾನವೀಯತೆಯ ಮೊದಲ ಕರ್ತವ್ಯವಾಗಿದೆ.

★ ★

ವಚನ ಮಥನ :

ಗಣ ಮೇಳಾಪದ ಮಹತ್ವ

—ಮಾತಾಜಿ

ಆದಿ ಅನಾದಿ ಎನ್ನದೆ ಬಸವಣ್ಣ ಗಣಮೇಳಾಪವಾಗಿ
ಅನಂತ ಯುಗಂಗಳಲ್ಲಿಯೂ ಸಕಲ ಲೋಕದಳು
ಚರಿಸುತ್ತಿಪ್ಪ ಸುಳುಹನರಿಯದೆ
ಸಕಲ ನಿಃಕಲರೆಲ್ಲ ಭ್ರಮೆಗೊಂಡು ಬೀಳುತ್ತೇಳುತ್ತಿರ್ದರು
ಇವರೆಲ್ಲರ ಮುಂದೆ ಆ ಗಣಂಗಳ ನಾನರಿದು ಬದುಕಿದೆನು
ಕಾಣಾ ಶ್ರೀ ಶೈಲ ಚನ್ನಮಲ್ಲಿಕಾರ್ಜುನಾ

೪೯. ಶಿ. ವ. ಸಂಪುಟ-೨೧

ಬಸವ ಧರ್ಮೀಯರ ಹಬ್ಬ–ಹುಣ್ಣಿಮೆ–ಉತ್ಸವ ಪುಸ್ತಕಕ್ಕೆ ಮುಖ ಪುಟ ಬರೆಸಬೇಕಿತ್ತು. ಆಗೊಂದು ಆಲೋಚನೆ ಸ್ಫುರಿಸಿತು. ನಮ್ಮ ಹಬ್ಬಗಳಿಗೆ ವೈಯಕ್ತಿಕ ಆನಂದಕ್ಕಿಂತಲೂ ಸಮುದಾಯಿಕ ಸಂಭ್ರಮದ ಸ್ವರೂಪ ಕೊಡಬೇಕು. ಎಲ್ಲರೂ ಕುಳಿತು ಪ್ರಾರ್ಥಿಸುವ, ಚಿಂತನೆ ಮಾಡುವ ಪರಿಪಾಠ ಬೆಳೆಯಬೇಕು ಎನ್ನಿಸಿ, ಕಲಾವಿದರಿಗೆ ಹೇಳಿ ಒಂದು ಚಿತ್ರ ಬರೆಯಲು ಸೂಚಿಸಿದೆ. ಎಲ್ಲರೂ ಸಾಮೂಹಿಕವಾಗಿ ಪ್ರಾರ್ಥಿಸುವ ಭಂಗಿಯಲ್ಲಿ ಕುಳಿತುಕೊಳ್ಳಬೇಕು, ಷಟ್ಕೋನ ಧ್ವಜವನ್ನು ಹಾರಿಸಿರಬೇಕು. ಧರ್ಮಪಿತ ಬಸವಣ್ಣನವರ ಚೈತನ್ಯ ಇವರೆಲ್ಲರ ಬೆನ್ನಿಗಿದ್ದು ಆಶೀರ್ವದಿಸಬೇಕು ಛಾಯಾ ರೂಪದಲ್ಲಿ ಬಸವಣ್ಣನವರ ಚೈತನ್ಯ ಚಿತ್ರಿಸಲ್ಪಡಬೇಕು.

ನಾನು ಹೇಳಿದ್ದನ್ನು ಗ್ರಹಿಸಿ ಕಲಾವಿದರೂ ಬರೆದರು. ನನಗೆ ಮೆಚ್ಚುಗೆಯಾಯಿತು. ಬಹಳ ಜನರು ಇದನ್ನು ಮೆಚ್ಚಿಕೊಂಡರು.

ಬಸವ ಮಂಟಪದಲ್ಲಿ ಪ್ರಾರ್ಥನಾ ನಂತರ ವಚನ ವಿಶ್ಲೇಷಣೆ ಮಾಡೋಣ ಎಂದು ಕರ್ನಾಟಕ ಸರ್ಕಾರ ಪ್ರಕಟಿಸಿರುವ ವಚನ ಸಂಪುಟವೊಂದನ್ನು ಆಯ್ಕೆ ಮಾಡಿಕೊಂಡು, ಸುಮ್ಮನೆ ಒಂದೆಡೆ ತೆರೆದೆ. ಹಿಂದೆ ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟಣೆಯಲ್ಲಿ ಮುದ್ರಣಗೊಂಡಿಲ್ಲದ ಒಂದು ವಚನ ಕಣ್ಣಿಗೆ ಬಿದ್ದಿತು. ವಚನ ಓದಿ ಮನಸ್ಸು ಕುಣಿದಾಡಿತು. ಏಕೆಂದರೆ ನನ್ನಲ್ಲಿ ಆ ಚಿತ್ರ ಬರೆಸುವಾಗ ಸ್ಫುರಿಸಿದ್ದ ಆಲೋಚನೆಗೆ ಅಕ್ಕನ ಅಧಿಕೃತ ಮುದ್ರೆ ಬಿದ್ದಿತು.

ಅಕ್ಕಮಹಾದೇವಿ ಹೇಳುತ್ತಾಳೆ, "ಗಣ ಮೇಳ ಎಲ್ಲಿ ನಡೆಯುವುದೋ ಅಲ್ಲಿ ದೇಶ (space) ಕಾಲ (time) ಕ್ಕೆ ಅತೀತವಾಗಿ ಬಸವಣ್ಣನವರ ಚೈತನ್ಯ ನೆಲೆಸಿರುವುದು (ಸಂಚರಿಸುವುದು). ಆದ್ದರಿಂದ ವ್ಯಕ್ತಿಯು ಗಣ ಸಂಬಂಧಿಯಾಗಬೇಕು, ಗಣ ಕೂಟ (holycongregation) ದಲ್ಲಿ ಭಾಗವಹಿಸಬೇಕು."

'ಅನಂತ ಯುಗ' ಎನ್ನುವುದು ಕಾಲಾತೀತತೆಯನ್ನು 'ಸಕಲ ಲೋಕ' ಎನ್ನುವುದು ಸೀಮಾತೀತತೆಯನ್ನು ಸಂಕೇತಿಸುತ್ತದೆ. ಗಣಮೇಳಾಪ ಎಂದರೆ ಸಮುದಾಯಿಕ ಧಾರ್ಮಿಕ ಚಟುವಟಿಕೆ. ಗಣಮೇಳಾಪವು 12 ನೆಯ ಶತಮಾನದಲ್ಲಿ ನಡೆಯಲಿ, 18 ರಲ್ಲಿ ನಡೆಯಲಿ, ಈಗ ನಡೆಯಲಿ ಅಲ್ಲಿ 'ಬಸವ ಚೈತನ್ಯ' ಇರುತ್ತದೆ. ಕರ್ನಾಟಕದಲ್ಲಿ ನಡೆಯಲಿ, ತಮಿಳುನಾಡಿನಲ್ಲಿ ನಡೆಯಲಿ, ಅಮೆರಿಕಾ–ಇಂಗ್ಲೇಂಡಿನಲ್ಲಿ ನಡೆಯಲಿ ಅಲ್ಲಿ ಬಸವ ಚೈತನ್ಯವಿರುತ್ತದೆ. ತನ್ನ ಗಣಂಗಳು (ಅನುಯಾಯಿಗಳು) ಎಲ್ಲಿ ಒಂದೆಡೆ ಸೇರಿ ಗಣ ಮೇಳಾಪ ಮಾಡುವರೋ ಅಲ್ಲಿ ಬಸವಣ್ಣನವರು ಸುಳಿಯುವರು.

ಕೆಲವರು ಬರೀ ಮಡಿ–ಆಚಾರ–ಶೀಲವಂತಿಕೆ ನೇಮಗಳಲ್ಲಿ ತೊಡಗಿದ ಕರ್ಮಠರು (ಸಕಲರು); ಇನ್ನು ಕೆಲವರು ಸಾಮಾಜಿಕ, ಸಮಷ್ಟಿ ಪ್ರಜ್ಞೆ ಇಲ್ಲದೆ ಬರೀ ನಿರಾಕಾರ ಉಪಾಸಕರೆಂದು ಬಹಿರಂಗದ ಆಚಾರ ನೇಮಗಳನ್ನು ಸಂಪೂರ್ಣವಾಗಿ ಕಡೆಗಣಿಸಿದವರು. ಉಭಯತರೂ ತಪ್ಪಿದವರೆ. ಆದ್ದರಿಂದ ಗಣ ಮೇಳಾಪದ ಮೂಲಕವೇ ವ್ಯಕ್ತಿಯು ಗಣಸಂಬಂಧಿಯಾಗಬೇಕು, ಚಿಂತನೆ ಮಾಡಬೇಕು, ಸಂದೇಹಗಳನ್ನು ಪರಿಹರಿಸಿಕೊಂಡು ಸತ್ಯವನ್ನರಿಯಬೇಕು, ಸಮುದಾಯ ಜೀವಿಯಾಗಬೇಕು.

ಕದಳಿಯಾತ್ರೆ - ದುರ್ಘಟನೆಯಿಂದ ಆಕಸ್ಮಿಕವಾಗಿ ಪಾರು

—ಮಾತಾಜಿ

ಹುಬ್ಬಳ್ಳಿಯ ಶರಣ. ಪ್ರಭು ಅಂಗಡಿಯವರು ದುರ್ಘಟನೆಯಿಂದ ರೋಮಾಂಚಕಾರಿಯಾದ ರೀತಿಯಲ್ಲಿ ಪಾರಾಗಿ ಬಂದುದನ್ನು ವಿವರಿಸಿ ಪತ್ರ ಬರೆದಿದ್ದಾರೆ. ಹೈದರಾಬಾದನ ಸಮ್ಮೇಳನವನ್ನು ಪೂರೈಸಿಕೊಂಡು, 23–5–94 ರಂದು ಹೈದರಾಬಾದ್ ಸಂದರ್ಶನ ಪೂರೈಸಿ, ದಿ. 24-5-94 ರಂದು 28 ಜನರು ಒಂದು ತಂಡವನ್ನು ರಚಿಸಿಕೊಂಡು ಶ್ರೀಶೈಲದತ್ತ ಪ್ರಯಾಣ ಮಾಡಿದರಂತೆ. ಹುಬ್ಬಳ್ಳಿಯವರು–10, ಬಾಗಲಕೋಟದವರು–8, ಕೊಪ್ಪಳದವರು-3, ಗದಗ–6, ಧಾರವಾಡ–1, ಹೈದರಾಬಾದಿನಿಂದ ಶ್ರೀಶೈಲದ ಮಾರ್ಗವಾಗಿ ಬಸ್ಸು–40–50 ಕಿಲೋ ಮೀಟರ್ ಬಂದಾಗ ಚಾಲಕನು ನಿಧಾನವಾಗಿ ಒಂದು ಕಡೆ ಬಸ್ ನಿಲ್ಲಿಸಿ, ಕೆಳಗೆ ಇಳಿದವನೇ ಎಚ್ಚರ ತಪ್ಪಿ ಬಿದ್ದುಬಿಟ್ಟನಂತೆ. ಬಸ್ಸು ಚಾಲನೆಯಲ್ಲಿದ್ದಾಗಲೇ ಎಚ್ಚರ ತಪ್ಪಿದ್ದರೆ ಏನು ಗತಿ ? ಆ ಬಸ್ಸಿನಲ್ಲಿದ್ದ ಓರ್ವ ವೈದ್ಯರು ಆಂಧ್ರದವರಿದ್ದು ತಕ್ಷಣವೇ ಗ್ಲೂಕೋಸ್ ಕೇಳಿದರಂತೆ. ಪ್ರಭುರವರ ಧರ್ಮಪತ್ನಿ ಸುಮಂಗಲಾ ತಮ್ಮಲ್ಲಿದ್ದ ಗ್ಲೂಕೋಸ್ ಕೊಟ್ಟಾಗ ವೈದ್ಯರು ಚಾಲಕನಿಗೆ ಕುಡಿಸಿದರಂತೆ. ಪ್ರಜ್ಞೆ ಮರಳಿತಂತೆ.

[ಬೆಳಗಾಂ ಪ್ರವಚನದ ಮುಕ್ತಾಯ ಸಮಾರಂಭದಂದು ಕೇಂದ್ರ ಸಚಿವ ಶ್ರೀ ಶಂಕರಾನಂದ ಅವರ ಪತ್ನಿ ಶರಣೆ, ಕಮಲಾದೇವಿ ಸಹ ಹೀಗೆ ವೇದಿಕೆಯ ಮೇಲೆ ಪ್ರಜ್ಞೆ ತಪ್ಪಿದರು, ಹಾಲು ಇದೆ ತಗೊಳ್ಳಿರಿ ಎಂದು ಎಷ್ಟು ಹೇಳಿದರೂ ಬೇಡ ಬೇಡ ಎಂದು ತಡೆದುಕೊಂಡು, ಕಡೆಗೆ ಎಚ್ಚರ ತಪ್ಪಿಬಿಟ್ಟರು.

ಮೇ 22 ರಂದು ... ಲೋಕಸಭಾ ಸದಸ್ ಶ್ರೀ ಬಾಗಾರೆಡ್ಡಿಯವರು ತಮಗೆ ತಲೆ ಚಕ್ರ ಬರುತ್ತಿದೆ ಎನ್ನುತ್ತಿದ್ದಂತೆಯೇ ನಾನು ರೈಸಟ್ರಾಲ್ ಎಂಬ ಪುನರ್ಜಲೀಕರಣ ಪುಡಿಯನ್ನು ನೀರಲ್ಲಿ ಕಲಸಿಕೊಟ್ಟಾಗ ಅವರು ಕೃತಜ್ಞತೆ ಸಲ್ಲಿಸಿದರು. ಮಧುಮೇಹ ರೋಗಿಗಳು ಸದಾ ಗ್ಲೂಕೋಸ್ ಅಥವಾ ಬಿಸ್ಕೀಟ್ ಮುಂತಾಗಿ ಇಟ್ಟುಕೊಳ್ಳುವ ಮುನ್ನೆಚ್ಚರಿಕೆ ವಹಿಸಬೇಕು. ಸಾಮಾನ್ಯ ಜನರಿಗೆ ರೋಗಿಗಳ ಪರಿಸ್ಥಿತಿ ಅರ್ಥವಾಗುವುದಿಲ್ಲ.]

ಸ್ವಲ್ಪ ಹೊತ್ತಿನಲ್ಲೇ ಚೇತರಿಸಿಕೊಂಡನಂತೆ ; ಪ್ರಯಾಣವು ಮುಂದೆ ಸಾಗಿತು.

ದಿ. 25–5–94 ರಂದು ಶರಣರ ಗುಂಪು ಬೆಳಿಗ್ಗೆ 3 ಕ್ಕೆ ಶ್ರೀಶೈಲದಲ್ಲಿ ಸ್ನಾನ–ಪೂಜೆ ಪೂರೈಸಿ, ಹೊರಟು ಪಾತಾಳ ಗಂಗೆಯಿಂದ ಎರಡು ದೋಣಿಗಳಲ್ಲಿ ಕದಳಿಯತ್ತ ಹೊರಟರಂತೆ. ಮಧ್ಯೆ ಅಕ್ಕಮ್ಮವಾಗುವಿನ ದಂಡೆಯಲ್ಲಿರುವ ಗವಿಗೆ ಬಂದಾಗ ಬೆಳಿಗ್ಗೆ 10 ಗಂಟೆಯಂತೆ. ಭಯಂಕರವಾದ ಬಿಸಿಲು ಇದ್ದುದರಿಂದ ಕೇವಲ 8 ಜನ ಮಾತ್ರ ಕದಳಿಗೆ ಸಿದ್ಧರಾದರಂತೆ. ಅಕ್ಕನ ಹಳ್ಳದಿಂದ 1 ಗಂಟೆಗೆ ಹೊರಟು ಕದಳಿಯ ಗವಿಯನ್ನು 3–15 ಕ್ಕೆ ತಲುಪಿದರಂತೆ. ಉಳಿದವರೆಲ್ಲ ಅಕ್ಕನ ಗವಿಯ ಬಳಿ ವಿಶ್ರಾಂತಿ ಪಡೆದಿದ್ದಾರೆ. ಅಲ್ಲಿ ಸ್ನಾನ–ಪೂಜೆ–ಪ್ರಾರ್ಥನೆ ಮಾಡಿ ನಾಲ್ಕು ಗಂಟೆಗೆ ಹೊರಟವರು ಅಕ್ಕನ ಹಳ್ಳದ ಬಳಿ ಸಂಜೆ 6 ಗಂಟೆಗೆ ಬಂದಿದ್ದಾರೆ. ಶುಭ್ರ ಆಕಾಶದಿಂದ ಕೂಡಿದ ಒಳ್ಳೆಯ ಹವೆ ಇದ್ದ ಕಾರಣ 7 ಗಂಟೆಗೆ ದೋಣಿಯಲ್ಲಿ ವಾಪಸ್ಸು ಶ್ರೀಶೈಲದತ್ತ ಹೊರಟಿದ್ದಾರೆ. ಆದರೆ 7–30 ರ ಸುಮಾರಿಗೆ ವಿಪರೀತ ಗಾಳಿ–ಮಳೆ–ಗುಡುಗು ಮಿಂಚು ಆರಂಭವಾಗಿ ಎಲ್ಲರೂ ತತ್ತರಿಸಿ ಬಿಟ್ಟಿದ್ದಾರೆ. ದಿಕ್ಕು ಕಾಣದೆ ಬಸವ ಗುರುವಿನ ನಾಮಸ್ಮರಣೆ ಆರಂಭಿಸಿದರಂತೆ. ಮಳೆಯು ವಿಪರೀತವಾಗಿ ದೋಣಿಯಲ್ಲಿ ನೀರು ತುಂಬುತ್ತಿತ್ತಂತೆ. ಅದನ್ನು ಬೇಗ ಬೇಗ ತುಂಬಿ ಹೊರ ಹಾಕುತ್ತ ಮುಂದೆ ಸಾಗಿ ರಂತೆ. ಹಿಂದಿನ ಬೋಟಿನವರು ಕಾಣದಾಗ ಇನ್ನಷ್ಟು ಗಾಬರಿ ಶುರುವಾಯಿತಂತೆ ರಾತ್ರಿ 12 ಗಂಟೆಗೆ ಪಾತಾಳಗಂಗೆ ದಡ ತಲುಪಿ, ಮಳೆಯಲ್ಲಿ ನೆನೆಯುತ್ತ ನಡುಗು ಛತ್ರವನ್ನು ತಲ್ಪಿದರಂತೆ. ಹಿಂದಿನ ಬೋಟಿನವರು ಬರದೆ ಇದ್ದಾಗ ಇನ್ನಷ್ಟು ಗಾಬ ಗೊಂಡರಂತೆ. ಹಿಂದಿನ ಬೋಟಿನಲ್ಲಿದ್ದವರನ್ನು ಗಾಳಿ–ಮಳೆ ಆರಂಭವಾಗುತ್ತಲ ಅಂಬಿಗನು ಒಂದು ಬಂಡೆಯ ಮೇಲೆ ಕುಳ್ಳಿರಿಸಿ, ಮಳೆಗಾಳಿ ನಿಲ್ಲುತ್ತಲೇ ಮತ್ತೆ ಪ್ರಯಾಣ ಮುಂದುವರಿಸಿದನಂತೆ. ಅವರು ಬೆಳಿಗ್ಗೆ 4 ಗಂಟೆಗೆ ಬಂದು ಛತ್ರವನ್ನು ತಲ್ಪಿದರಂತೆ. ಭಯಂಕರ ದುಃಸ್ವಪ್ನವೊಂದರಿಂದ ಪಾರಾದ ಅನುಭವವಾಯಿತಂ ಅಂತೂ ವಿಪತ್ತಿನಿಂದ ಪಾರು ಮಾಡಿದ್ದಕ್ಕೆ ದೇವನನ್ನು, ಬಸವಗುರುವನ್ನು ಕೊಂಡಾಡಿದರಂತೆ. ಇದರಿಂದ ಕೆಲವು ಪಾಠ ಕಲಿಯಬೇಕು. ರಾತ್ರಿಯ ವೇಳೆಯಲ್ಲಿ ನದಿಯ ಪ್ರಯಾಣ, ಅದೂ ಆಳವಾದ ಪಾತಾಳ ಗಂಗೆಯಲ್ಲಿ, ನಾಡದೋಣಿಯಲ್ಲಿ ಕೈಗೊಳ್ಳುವುದು ಎಷ್ಟು ಸೂಕ್ತ. ಆಂಧ್ರದವರಿಗೆ ಕದಳಿ ಬನದ ಮಹತ್ವ ತಿಳಿದಿಲ್ಲ. ಆಂಧ್ರ ಸರ್ಕಾ ಅಕ್ಕನ ಹಳ್ಳದ ಬಳಿ ಒಂದು ತಂಗುದಾಣ ಮಾಡಿದರೆ ಜನರು ತಂಗಿ ಪ್ರಯಾಣ ಮುಂದುವರಿಸಲು ಅನುಕೂಲವಾಗುವುದಷ್ಟೇ ! ★

ಕನ್ನಡೇತರ ಭಾಷೆಗಳಲ್ಲಿ ಧ್ವನಿ ಸುರುಳಿ— ಸಾಹಿತ್ಯ ಲಭ್ಯ

ಹೈದರಾಬಾದ ನಗರದಲ್ಲಿ ಮೇ 21–22 ರಂದು ನಡೆದ ಅಖಿಲ ಭಾರತ ಬಸವ ಧರ್ಮ ದ್ವಿತೀಯ ಸಮ್ಮೇಳನದ ನಿಮಿತ್ತವಾಗಿ ಕೆಲವು ಸಾಮಗ್ರಿಗಳನ್ನು ಸಿದ್ಧಪಡಿಸಿದ್ದು ವಿವರ ಕೆಳಗಿನಂತಿವೆ.

1. ಬಸವ ವಚನಾಮೃತ (ಹಿಂದಿ ಯಲ್ಲಿ ಬಸವಣ್ಣನವರ ವಚನಗಳ ಧ್ವನಿ ಸುರುಳಿ) C–60 ಪ್ರಸಿದ್ಧ ಗಾಯಕ–ಗಾಯಕಿಯರಿಂದ ಹಾಡಲ್ಪಟ್ಟಿವೆ. ಬೆಲೆ : 30 ರೂ.
2. ಬಸವ ವಚನಾಮೃತಮು [ತೆಲುಗಿನಲ್ಲಿ ಬಸವಣ್ಣನವರ ವಚನಗಳ ಧ್ವನಿ ಸುರುಳಿ] C–60. ಬೆಲೆ : 30 ರೂ.
3. ಬಸವ ಜ್ಯೋತಿ C–60 [ಹಿಂದಿ] ಭಕ್ತಿಗೀತೆಗಳು ಬೆಲೆ : 30 ರೂ.
4. ಬಸವ ಜ್ಯೋತಿ– C–60 [ತೆಲುಗು] ಭಕ್ತಿಗೀತೆಗಳು ಬೆಲೆ : 30 ರೂ.

ಸಾಹಿತ್ಯ.

1. ಲಿಂಗಾಯತ ಧರ್ಮ ದರ್ಪಣಮು [ತೆಲುಗು ಆವೃತ್ತಿ] ಬೆಲೆ : 24 ರೂ.
2. ಸಾಮೂಹಿಕ ಪ್ರಾರ್ಥನೆ [ಹಿಂದಿ ಆವೃತ್ತಿ] ಬೆಲೆ : 8 ರೂ.
3. ವಿಶ್ವಜ್ಯೋತಿ ಬಸವೇಶ್ವರ [ಹಿಂದಿ ಆವೃತ್ತಿ] ಬೆಲೆ : 4 ರೂ.
4. ಬಸವ [ಲಿಂಗಾಯತ] ಧರ್ಮೀಯರ 12 ಪ್ರತಿಜ್ಞೆಗಳು– ತೆಲುಗು ಆವೃತ್ತಿ ಬೆಲೆ : 1–50 ರೂ.
5. ಇಷ್ಟಲಿಂಗಾರ್ಚನಾ[ತೆಲುಗು ಆವೃತ್ತಿ]ಲಿಂಗ ಪೂಜಾ ಗೀತೆಗಳು ಬೆಲೆ : 1 ರೂ.

ಶರಣ ಬಂಧುಗಳೇ,

ಧರ್ಮಪಿತ ಬಸವಣ್ಣನವರ ಮತ್ತು ಅವರ ಪರಂಪರೆಯ ಶರಣರ ಸಂದೇಶ ದೇಶದ ಎಲ್ಲೆಡೆ ಪ್ರಚಾರವಾಗಬೇಕು. ಆದ್ದರಿಂದ ತಾವು ಕನ್ನಡ ಬರದ ಬಂಧು-ಮಿತ್ರರಿಗೆ ಉಡುಗೊರೆಯಾಗಿ ಹಿಂದಿ–ತೆಲುಗು ಧ್ವನಿ ಸುರುಳಿ, ಪುಸ್ತಕ ಮುಂತಾದುವನ್ನು ಕೊಡಿಸಿಕೊಡಿರಿ. ತೆಲುಗು–ತಮಿಳು–ಹಿಂದಿ–ಮರಾಠಿ ಭಾಷೆಗಳಲ್ಲಿ ಮುದ್ರಣಗೊಂಡಿರುವ ಸಾಹಿತ್ಯವನ್ನು ಬಂಧುಮಿತ್ರರಿಗೆ ಕಳಿಸಿ, ಧರ್ಮದ ಜಾಗೃತಿ ಉಂಟುಮಾಡಿರಿ.

ವಿಶ್ವಕಲ್ಯಾಣ ಮಿಷನ್, ಬಸವ ಮಂಟಪ
2035, 2 ನೇ ಬ್ಲಾಕು, 20ನೇ ಮೆಯಿನ್
ರಾಜಾಜಿನಗರ, ಬೆಂಗಳೂರು–560010

ಶ್ರೀ ಮೂರು ಸಾವಿರ ಮಠಾಧೀಶರ ಸ್ವಧರ್ಮ ವಿರೋಧಿ ದೃಷ್ಟಿಕೋನ

—ಮಾತಾಜಿ

ಇಳಕಲ್‌ದ ಶ್ರೀ ವಿಜಯ ಮಹಾಂತೇಶ್ವರ ಸಂಸ್ಥಾನ ಮಠದ ಪೂಜ್ಯ ಶ್ರೀ ನಿ.ಪ್ರ. ಮಹಾಂತ ಶಿವಯೋಗಿಗಳು ತಳೆದ ಒಂದು ತಾತ್ತ್ವಿಕ ನಿಲವನ್ನು ವಿರೋಧಿಸಿ, ಹುಬ್ಬಳ್ಳಿಯ ಮೂರು ಸಾವಿರ ಮಠದ ಪೂಜ್ಯ ಡಾ॥ ಮೂಜಗಂ ಅವರು ಇಂದು ಬಹಳ ಸುದ್ದಿಯಲ್ಲಿದ್ದಾರೆ.

ಬೀದರಿನ ಸಮ್ಮೇಳನವೊಂದರಲ್ಲಿ ಮಾತನಾಡುತ್ತ ಪೂಜ್ಯ ಶ್ರೀ ಮಹಾಂತ ಸ್ವಾಮಿಗಳು ತಮ್ಮ ಉತ್ತರಾಧಿಕಾರಿಯನ್ನಾಗಿ ದಲಿತರನ್ನೇ ಆಯ್ಕೆ ಮಾಡುವುದಾಗಿ ಘೋಷಿಸಿದರು. ಇದು ಪ್ರಗತಿಪರ ಚಿಂತನ ಶೀಲರನ್ನು ಆಕರ್ಷಿಸಿ, ಆನಂದ ತುಂದಿಲರನ್ನಾಗಿ ಮಾಡಿತು. ಏಕೆಂದರೆ, ಅವರು ಮಾಡಲಿ ಬಿಡಲಿ, ಒಂದು ಕಾಲದಲ್ಲಿ ಶಿವ-ಯೋಗ ಮಂದಿರದಲ್ಲಿ ತರಬೇತಿ ಹೊಂದಿದ ಸ್ವಾಮಿಗಳು ಅಯ್ಯನವರ ವಂಶಸ್ಥರು ಮಾತ್ರ ಗುರು–ಜಂಗಮರು, ಮಠ–ಪೀಠಾಧಿಪತಿಗಳಾಗಲು ಅರ್ಹರು ; ಶೂದ್ರ–ದಲಿತರತ್ತಲಿರಲಿ ಲಿಂಗವಂತ ಸಮಾಜದ ಭಕ್ತವರ್ಗವೆಂದು ಅವರು ಪರಿಗಣಿಸಿದ್ದ ಸಾದರು, ಬಣಜಿಗರು, ರೆಡ್ಡಿಯವರು, ಗಾಣಿಗರು, ನೇಕಾರರು ಇತ್ಯಾದಿಯವರು ಸಹ ಗುರು-ಜಂಗಮ, ಮಠ-ಪೀಠಾಧಿಪತಿಗಳಾಗಲು ಅರ್ಹರಲ್ಲ ಎಂದು ನಂಬಿದವ-ರಾಗಿದ್ದರು. ಪೂಜ್ಯ ಸ್ವಾಮೀಜಿಯವರಲ್ಲಿ ಇಂಥ ಅದ್ಭುತ ಬದಲಾವಣೆ, ನಂಬಿಕೆ ಬಂದುದು ಬಸವ ತತ್ತ್ವಾನುಯಾಯಿಗಳಿಗೆ ನಿಜಕ್ಕೂ ಸಂತೋಷದ ಸಂಗತಿ.

ಹೈದರಾಬಾದಿನಲ್ಲಿ ನಡೆದ ಬಸವ ಧರ್ಮದ ದ್ವಿತೀಯ ಸಮ್ಮೇಳನದಲ್ಲಿ ಈ ಬಗ್ಗೆ ಪೂಜ್ಯ ಶ್ರೀಗಳನ್ನು ಅಭಿನಂದಿಸಿ, ಒಂದು ಠರಾವು (ನಿರ್ಣಯ) ಮಾಡೋಣ ಎಂದು ಬಾಗಲಕೋಟೆಯ ರಾಷ್ಟ್ರೀಯ ಬಸವ ದಳದ ಅಧ್ಯಕ್ಷ ಶರಣ ಬಸವರಾಜ ಲಂಕ್ಕ ಅವರು ನನಗೆ ಹೇಳಿದರು. ವಿವರಗಳನ್ನು ತಿಳಿಯದೆ ಆತುರ ಪಡುವುದು ಬೇಡ ಎಂದು ನಾನು ಸೂಚಿಸಿದೆ. ಅವರು ಹೇಳಿಕೆಗಳ ಪ್ರತಿ ಸಹ ತಂದಿರಲಿಲ್ಲ.

ಒಂದನೆಯದಾಗಿ, ಕೆಸೆಟ್ ರೆಕಾರ್ಡಿಂಗ್ ಮತ್ತು ಮುಂಬಯಿ–ಹೈದರಾಬಾದ ಪ್ರವಾಸದ ಒತ್ತಡದಲ್ಲಿ ಸುಮಾರು ಹದಿನೈದು ದಿವಸ ಯಾವ ಪತ್ರಿಕೆಯನ್ನೂ ಓದಲು ಸಾಧ್ಯವಾಗದ್ದರಿಂದ ಪೂಜ್ಯ ಶ್ರೀಗಳ ಹೇಳಿಕೆಯ ವಿವರ ನನಗೆ ತಿಳಿದಿರಲಿಲ್ಲ. ಎರಡನೆಯದಾಗಿ ಭೇಟಿಯಾದ ಯಾರೋ ಹೇಳಿದ್ದರು, "ದಲಿತವರ್ಗದಿಂದ ಬಂದವರನ್ನೇ ಉತ್ತರಾಧಿಕಾರಿಯನ್ನಾಗಿ ಮಾಡುವೆ ಎಂದಿದ್ದಾರೆ."ಎಂದು. "ಇಂದಿನ ಅಯ್ಯನವರು, (ಜಂಗಮರು) ಹಿಂದೆ ದಲಿತರೇ ಆಗಿದ್ದವರು ಎಂದು ಸ್ವಾಮೀಜಿ ಹೇಳಿದ್ದಾರೆ."

ಎಂದೂ ಹೇಳಿದ್ದರು. ಹೀಗಾಗಿ ಪೂಜ್ಯ ಶ್ರೀಗಳ ಹೇಳಿಕೆಯ ಪೂರ್ಣಪಾಠ ನನಗೆ ಲಭ್ಯವಾಗಿರಲಿಲ್ಲ; ಹೀಗಾಗಿ ಈ ಬಗ್ಗೆ ನನಗೇ ಕೆಲವು ಭಿನ್ನಾಭಿಪ್ರಾಯಗಳಿದ್ದವು.

1, ಇಂಥದೇ ಜಾತಿಯವರನ್ನು ಆರಿಸುತ್ತೇನೆ ಎನ್ನುವುದೂ ಒಂದು ತಪ್ಪು, ಇಂಥ ಜಾತಿಯವರನ್ನು ಆರಿಸುವುದಿಲ್ಲ ಎನ್ನುವುದೂ ತಪ್ಪಾದಂತೆ. ನಮ್ಮಲ್ಲಿ ಬಹುದೊಡ್ಡ ದೋಷವಿದೆ, ಮಠಾಧೀಶರನ್ನು ಆಯ್ಕೆ ಮಾಡುವಾಗ ಅನೇಕ ಜನರನ್ನು ತರಬೇತಿಗೊಳಿಸಿ, [ಅಂಥ ತರಬೇತಿಗೆ ಜಾತಿ ಮತ ಪಂಥ ಭೇದವಿಲ್ಲದೆ ಮುಮುಕ್ಷುಗಳನ್ನು ಆಯ್ಕೆಮಾಡಿ] ಅವರಲ್ಲಿ ಯಾರು ಸಮರ್ಥರೋ ಅವರನ್ನು ಗದ್ದುಗೆಗೆ ಏರಿಸುವ ವಿಧಾನ ಜಾರಿಗೆ ಬರುತ್ತಿಲ್ಲ. ಶಿವಯೋಗ ಮಂದಿರ, ಮೂರು ಸಾವಿರ ಮಠ ಎರಡೂ ಅಯ್ಯನವರ ವರ್ಗದಿಂದಲೇ ಬಂದ ವಟುಗಳನ್ನು ಸೇರಿಸಿಕೊಳ್ಳುವುವು. ಒಬ್ಬಿಬ್ಬರು ಮಾತ್ರ ದೊಡ್ಡಮಠಗಳ ಉತ್ತರಾಧಿಕಾರಿಗಳು ಭಕ್ತವರ್ಗದಿಂದ ಬಂದ ವಟುಗಳಾಗಿರುವರೆಂದು ತಿಳಿದಿದೆ. ಹೂದೋಟದಲ್ಲಿ ಸ್ವಾಭಾವಿಕವಾಗಿ ಅರಳಲು ಬಿಟ್ಟು, ಚೆಂದವಾಗಿ ಅರಳಿದ ಹೂವನ್ನು ಪೂಜೆಗೇರಿಸುವುದು ಒಂದು ವಿಧಾನ. ಇಂಥದೇ ಗಿಡದ ಹೂವನ್ನು ಏರಿಸುತ್ತೇನೆ ಎನ್ನುವುದು ತಪ್ಪಲ್ಲವೆ ? ಅಯ್ಯನವರ ವಂಶದವರನ್ನೇ ಆರಿಸುತ್ತೇನೆ ಎನ್ನುವುದು ಒಂದು ತಾತ್ತ್ವಿಕ ತಪ್ಪಾದಂತೆ, ದಲಿತ ವರ್ಗದವರನ್ನೇ ಆರಿಸುತ್ತೇನೆ ಎನ್ನುವುದೂ ತಪ್ಪು ! ಅಂಥವರು ತಾವಾಗಿ ಮುಂದೆ ಬರದೆ ಇದ್ದರೆ?! ವೈರಾಗ್ಯ ಜೀವನ ಸ್ವಯಂ ಪ್ರೇರಣೆಯ ಕಸರತ್ತು. ದಲಿತ ವರ್ಗದ ವಟುಗಳು ಸಿಕ್ಕಲಿಲ್ಲ ಎಂದು ಮಠಾಧಿಪತಿಯ ಸ್ಥಾನವನ್ನು ಖಾಲಿಬಿಡಲಂತೂ ಸಾಧ್ಯವಿಲ್ಲವಷ್ಟೆ. ಶೂನ್ಯಪೀಠದ ಮೊದಲನೆಯ ಪೀಠಾಧೀಶ ಅಲ್ಲಮಪ್ರಭು ದೇವರು ; ಬಹಳ ಕಾಲ ನಿರೀಕ್ಷಿಸಿ, ಅವರು ಬಂದಾಗ ಪೀಠಾರೋಹಣವನ್ನು ಬಸವಣ್ಣನವರು ನೆರವೇರಿಸಿದರು. ಪ್ರಭುದೇವರು ಕದಳಿಗೆ ಹೋದ ಮೇಲೆ ಚನ್ನಬಸವಣ್ಣನವರು ಎರಡನೆಯ ಪೀಠಾಧೀಶರಾದರು. ಇಲ್ಲಿ ಅವರು ಸೋದರಳಿಯ ಎಂದು ಆಯ್ಕೆಯಾಗಲಿಲ್ಲ ಚಿನ್ಮಯ ಜ್ಞಾನಿ ಎಂದು ಸ್ಥಾನವನ್ನಲಂಕರಿಸಿದರು. ಹೀಗಾಗಿ ಬಸವಣ್ಣನವರು ಚನ್ನಬಸವಣ್ಣನವರು ತಮ್ಮ ರಕ್ತಸಂಬಂಧಿ ಇದ್ದರೂ, ಆ ಕಾರಣಕ್ಕಾಗಿ ಅವರಿಗೆ ಅಧಿಕಾರ ನೀಡಲು ನಿರಾಕರಿಸದೆ, ಅವರ ಅಪ್ರತಿಮ ಸಾಧನೆ ಗುರುತಿಸಿ ಪೀಠಾಧಿಕಾರಿಯನ್ನಾಗಿ ಮಾಡಿದರು. ಜಾತಿ ಕಾರಣ ಹಿಡಿದು ಆರಿಸುವುದೂ ಸೂಕ್ತವಲ್ಲ, ನಿರಾಕರಿಸುವುದೂ ಸೂಕ್ತವಲ್ಲ. ಅರ್ಹತೆ ಇರುವ ಯಾರನ್ನಾದರೂ ಮಾಡಬಹುದು.

ಇಲ್ಲಿ ನನಗೊಂದು ಪ್ರಸಂಗ ನೆನಪಾಗುತ್ತದೆ. ಪುರೋಹಿತಶಾಹಿ ಜನರನ್ನು ನಖಶಿಖಾಂತ ದ್ವೇಷಿಸುವ ಓರ್ವ ರಾಜಕಾರಣಿ ಇದ್ದರು. ಅವರೊಂದು ವಿದ್ಯಾಸಂಸ್ಥೆ ಕಟ್ಟಿದ್ದಾರೆ. ಅವರು ಬ್ರಾಹ್ಮಣರನ್ನು ಬಹುವಾಗಿ ಹೀಯಾಳಿಸುತ್ತಿದ್ದರು; ಲಿಂಗಾಯತರನ್ನೂ ಅರ್ಥಂಬರ್ಥ ದ್ವೇಷಿಸುತ್ತಿದ್ದರು: ಅವರು ದಲಿತರು, ನಡೆಸುತ್ತಿದ್ದ ಸಂಸ್ಥೆ ಅದೇ ಆಧಾರದ ಮೇಲಿತ್ತು. ಹೀಗಾಗಿ ಎಲ್ಲ ಶಿಕ್ಷಕರೂ ದಲಿತರೇ ಇರುತ್ತಾರೆ ಎಂದು ನಾನು ತಿಳಿದಿದ್ದೆ. ಇಷ್ಟು ಜಾತಿ ಅಭಿಮಾನ ಇರುವವರು ಬೇರೆಯವರನ್ನೇಕೆ ತೆಗೆದುಕೊಳ್ಳುತ್ತಾರೆ ಎಂದು ನನ್ನ ನಂಬಿಕೆಯಾಗಿತ್ತು; ಸರ್ಕಾರದ ಒತ್ತು ಸಹ ಹಾಗೆ ಇದೆ

ತಾನೆ ? 'ಸ್ಕೂಲ್ ಡೇ' ಗೆ ಬಸವಣ್ಣನವರ ಕ್ರಾಂತಿಯ ಬಗ್ಗೆ ಒಂದು ನಾಟಕ ಮಾಡಲು ಆ ಸಂಸ್ಥೆಯವರು ನಿರ್ಧರಿಸಿ, ನನ್ನಿಂದ ಕೆಲವು ಮಾಹಿತಿ ಪಡೆಯಲು ಓರ್ವ ಶಿಕ್ಷಕಿಯನ್ನು ಆ ವಿದ್ಯಾಸಂಸ್ಥೆಯವರು ಕಳಿಸಿದರು. ಆಕೆ ನನಗೆ ಪೂರ್ವ ಪರಿಚಿತಳು, ಬ್ರಾಹ್ಮಣ ಜನಾಂಗದವರು. ನನ್ನ ಆಶ್ಚರ್ಯಕ್ಕೆ ಪಾರವೇ ಇಲ್ಲ. "ನಿನ್ನನ್ನು ಅಲ್ಲಿ ಶಿಕ್ಷಕಿ ಎಂದು ಹೇಗಮ್ಮಾ ತಗೊಂಡರು ? ಅದರ ಮುಖ್ಯಸ್ಥರಿಗೆ ಬ್ರಾಹ್ಮಣರ ತಲೆ ಕಂಡರೆ ಆಗುತ್ತಿರಲಿಲ್ಲ ! " ಎಂದೆ.

"ನಿಮಗೆ ಗೊತ್ತು. ನಮಗೆಲ್ಲ ಸರ್ಕಾರಿ ನೌಕರಿ ಸಿಗುವುದು ದುಸ್ತರ. ಪರಿಶಿಷ್ಟ ಜಾತಿಯವರಿಗೆ ಸುಲಭವಾಗಿ ಸರ್ಕಾರಿ ನೌಕರಿ ಸಿಗುತ್ತವೆ. ಅವರು ಖಾಸಗಿ ಸಂಸ್ಥೆಗಳಿಗೆ ಬರಲು ಇಷ್ಟಪಡುವುದಿಲ್ಲ. ಮೊದಲು ನನ್ನನ್ನು ಒಂದು ಸ್ಥಳವನ್ನು ತಾತ್ಕಾಲಿಕವಾಗಿ ತುಂಬಲು ತಗೊಂಡರು. ನನ್ನ ಪರಿಶ್ರಮ, ಕಾಯಕ ನಿಷ್ಠೆ, ಶ್ರದ್ಧೆ ನೋಡಿ ಕಾಯಂ ಮಾಡಿದರು." ಆಗ ನನಗೆ ಹೊಳೆಯಿತು, **ಧರ್ಮವು ಬೋಧಿಸಿದಂತೆ ಎಲ್ಲರನ್ನೂ ಪ್ರೀತಿಸುವುದು ಕಷ್ಟಸಾಧ್ಯವಾದಂತೆ, ಮತಾಂಧತೆ ಪ್ರಚೋದಿಸುವಂತೆ ಎಲ್ಲರನ್ನೂ ದ್ವೇಷಿಸುವುದೂ ಕಷ್ಟಸಾಧ್ಯ,** ಎಂದು. ವ್ಯವಹಾರ–ವ್ಯಾಪಾರ–ಸ್ನೇಹ–ಅನಿವಾರ್ಯತೆ. ಹೀಗೆ ಯಾವುದಾದರೂ ಕಾರಣಕ್ಕೆ ವ್ಯಕ್ತಿ ಇತರರೊಡನೆ ಹೊಂದಿಕೊಳ್ಳಲೇ ಬೇಕಾಗುತ್ತದೆ,

ಅದೇ ರೀತಿ ಗುರುವು ತನ್ನ ಉತ್ತರಾಧಿಕಾರಿಯನ್ನು ಆಯ್ಕೆ ಮಾಡುವಲ್ಲಿ ದಲಿತ ವರ್ಗದವರಾರೂ ಮುಂದೆ ಬರದೆ ಇದ್ದರೆ ? ಆಗ ಸ್ವಯಂ ಪ್ರೇರಿತರಾಗಿ ಮುಂದೆ ಬಂದವರನ್ನೇ ಆಯ್ಕೆ ಮಾಡಬೇಕಾಗುವುದಷ್ಟೆ. ಅಂದಾಗ ಮೊದಲೇ ಮಾತನಾಡಿ ಕೈಕಟ್ಟಿಕೊಳ್ಳುವ ಅಗತ್ಯವಿದೆಯೆ ? ಧರ್ಮಗುರುವಿನಲ್ಲಿ ಪ್ರಾರ್ಥಿಸಬೇಕು, "ನಿನ್ನ ತತ್ತ್ವವನ್ನು ಪೂರ್ಣವಾಗಿ ಅನುಷ್ಠಾನ ಮಾಡುವ ಹಂಬಲ ನನ್ನದು. ಈ ಹಂಬಲ ಪೂರೈಕೆಗೆ ಅಂಥ ವ್ಯಕ್ತಿಯನ್ನು ಕಳಿಸಿಕೊಡು ಬಸವಣ್ಣಾ...." ಎಂದು ಅಂತರಂಗದಲ್ಲಿ ಕೇಳಿಕೊಳ್ಳಬೇಕು. ಅಂಥ ವ್ಯಕ್ತಿ ಸಿಕ್ಕರೆ ಯಾರಿಗೂ ಅಂಜದೆ ಆಯ್ಕೆ ಮಾಡುವ ಛಲ ತಾಳಬೇಕು. ಒಂದು ವೇಳೆ ಇಷ್ಟವು ಬೆಟ್ಟದಷ್ಟಿದ್ದರೂ ದಲಿತರು ಯಾರೂ ಮುಂದೆ ಬರದೆ ಇದ್ದರೆ. ಅನಿವಾರ್ಯವಾಗಿ ಬೇರೆಯವರನ್ನು ಮಾಡಿದಾಗ ಸ್ವಾಮಿಗಳು ಆಡಿದಂತೆ ನಡೆದುಕೊಳ್ಳಲಿಲ್ಲ ಎಂಬ ಅಪವಾದ ಬರಲೂಬಹುದು.

ಅಯ್ಯನವರೆಲ್ಲ ದಲಿತರೆ ?

ಈ ತಿಳುವಳಿಕೆ ತಪ್ಪು : 'ಅಯ್ಯ' ಎನ್ನುವುದು ಗೌರವ ಸೂಚಕವಾಗಿ ಗಣ್ಯರಿಗೆ ಬಳಸುವ ಪದವಾಗಿ ಧರ್ಮಪಿತ ಬಸವಣ್ಣನವರ ಕಾಲದಲ್ಲಿ ಬಳಕೆಯಲ್ಲಿತ್ತು. ವರ್ಣಾಶ್ರಮ ವ್ಯವಸ್ಥೆಯಲ್ಲಿ ಹರಳ್ಯಾ, ಚನ್ನಾ, ಕಕ್ಕಾ, ಬೊಮ್ಮಾ ಎಂದು ಏಕವಚನದಲ್ಲಿ ಸಂಬೋಧಿಸುತ್ತಿದ್ದವರನ್ನು ಅಯ್ಯ ಎಂದು ಸಂಬೋಧಿಸಿ, ಗೌರವ ತೋರಿಸಿದವರು ಬಸವಣ್ಣನವರು. ಇಂದು ಅಯ್ಯನವರು, (ಜಂಗಮರು) ಎಂಬ ಒಂದು ವರ್ಗ ಲಿಂಗಾಯತ ಸಮಾಜದಲ್ಲಿದೆ. ಅವರಲ್ಲಿ ಅನೇಕರು ಹುಟ್ಟಿನಿಂದಲೇ ಶ್ರೇಷ್ಠರು ಎಂದು ನಂಬಿ

ದ್ದಾರೆ. ಜನಸಾಮಾನ್ಯರಾದ ಅಯ್ಯನವರು ನಂಬಿರದಿದ್ದರೂ, ಹಾಗೆ ನಂಬಿ ವರ್ತಿಸುವಂತೆ ಶಿವಯೋಗ ಮಂದಿರ, ಮೂರು ಸಾವಿರ ಮಠದ ಶ್ರೀ ಕುಮಾರೇಶ್ವರ ಸಂಘ, ಪಂಚಾಚಾರ್ಯರ ಮಠಗಳು ಮಾನಸಿಕ ತರಬೇತಿ ನೀಡುತ್ತಿವೆ. ಈ ವರ್ಗ ಹೇಗೆ ಹುಟ್ಟಿತು ? ಪೂಜ್ಯ ಇಳಕಲ್ ಶ್ರೀಗಳು ಹೇಳಿದಂತೆ ಅವರು ದಲಿತವರ್ಗದಿಂದ ಬಂದವರೆ ? ಖಂಡಿತಾ ಅಲ್ಲ. ಇನ್ನೂ ಬಸವ ತತ್ತ್ವದ ಬೌದ್ಧಿಕ ತರಬೇತಿ ಹೊಂದದ ಸಂಪ್ರದಾಯವಾದಿ ಮಡಿವಂತ ಲಿಂಗಾಯತರು ಅಯ್ಯನವರು ಪೂರ್ವಾಶ್ರಮದಲ್ಲಿ ದಲಿತರೇ ಇದ್ದಿದ್ದರೆ, ಈಗ ಕೊಡುವಷ್ಟು ಗೌರವ–ಕಾಣಿಕೆ ಖಂಡಿತಾ ಕೊಡುತ್ತಿರಲಿಲ್ಲ.

ಲಿಂಗಧಾರಣೆ ಮಾಡಿಕೊಂಡು ಬಂದವರೆಲ್ಲ ಬಸವ ತತ್ತ್ವದ ಪರುಷ ಜಲದಲ್ಲಿ ಪೂರ್ಣ ಸ್ನಾನ ಮಾಡಲೇ ಇಲ್ಲ. ಇದರಿಂದಾಗಿ ಹಳೆಯ ಸಂಸ್ಕಾರಗಳು ಅವರಲ್ಲಿ ಉಳಿದು ಬಂದವು. ಅಯ್ಯನವರಲ್ಲಿ ಆರಾಧ್ಯರೆಂಬ ಉಪಪಂಗಡದವರು ಬ್ರಾಹ್ಮಣ ಸಮಾಜದಿಂದ ಲಿಂಗವಂತ ಧರ್ಮಕ್ಕೆ ಬಂದವರು ಎಂಬುದನ್ನು ಸ್ಪಷ್ಟವಾಗಿ ಗುರುತಿಸಬಹುದು. ಅವರಿಗೆ ಇತ್ತೀಚಿನವರೆಗೂ ಜನಿವಾರದ ಮೋಹವಿತ್ತು.

ವಿಶ್ವಗುರು ಬಸವಣ್ಣನವರ ಕಾಲದಲ್ಲಿ ಒಂದು ದೊಡ್ಡ ಜನಾಂದೋಲನವೇ ಆಯಿತು. ದೀಕ್ಷಿತರಾದ ಜನರಿಗೆ ಸದಾ ಸಂಸ್ಕಾರ ನೀಡಲು ಅನೇಕ ಗುರು–ಜಂಗಮರು ತಯಾರಾದರು. ಮಠಗಳು ಕಟ್ಟಲ್ಪಟ್ಟವು. ಹೀಗೆ ಒಂದು ಊರಿನಲ್ಲಿ ಧರ್ಮ ಪ್ರಸಾರ, ಸಂಸ್ಕಾರ, ಜ್ಞಾನ ದಾಸೋಹ ಮಾಡುವ ಜನರು, ಇನ್ನೊಂದು ಊರಿನಲ್ಲಿ ಅದೇ ಪೌರೋಹಿತ್ಯ ಕಾಯಕ ಮಾಡುವವರೊಡನೆ ವಿವಾಹಾದಿ ಸಂಬಂಧಗಳನ್ನು ಬೆಳೆಸುತ್ತ ಬಂದಾಗ ಒಂದು ಪ್ರತ್ಯೇಕ ವರ್ಗ ಹುಟ್ಟಿ ಬೆಳೆಯುತ್ತ ಬಂದಿತು.

ತಾತ್ಕಾಲಿಕ ವೈರಾಗ್ಯದಿಂದ ಜಂಗಮರಾಗಿ, ನಂತರ ಗೃಹಸ್ಥ ಜೀವನ ಸ್ವೀಕರಿಸಿದ ಅಂಥ ಕೆಲವು ಮಠಾಧಿಕಾರಿಗಳ ಸಂತತಿಯೂ ಮಠಾಧಿಪತ್ಯದ ಹಕ್ಕನ್ನು ವಂಶಪಾರಂಪರ್ಯವಾಗಿ ಸ್ಥಾಪಿಸತೊಡಗಿತು. ಪೂಜಾರಿಕೆ-ಪೌರೋಹಿತ್ಯ ಸಮಾಜಕ್ಕೆ ಅನಿವಾರ್ಯವಾಗಿದ್ದರಿಂದ ಜನರೂ ಅಂಥವರನ್ನು ಅವಮಾನ್ಯ ಮಾಡಲಿಲ್ಲ. ಶರಣ ಧರ್ಮದಲ್ಲಿ ಗೃಹಸ್ಥರಾಗಿದ್ದುಕೊಂಡೂ ಸಾತ್ವಿಕ ಜೀವನ ನಡೆಸುವ ಶರಣರಿಗೆ ದೀಕ್ಷೆ, ಲಿಂಗೈಕ್ಯ ಕ್ರಿಯೆ ಮುಂತಾಗಿ ಮಾಡುವ ಹಕ್ಕು ಇದ್ದುದರಿಂದ ಅಂಥ ಕುಟುಂಬಗಳಲ್ಲಿ ಬೆಳೆದವರೂ ಕಾಲಾನಂತರದಲ್ಲಿ ಜಂಗಮರಾಗಿ ವರ್ಗೀಕರಣಗೊಂಡಿದ್ದಾರೆ. ಒಂದು ಸೌಟು ಹಿಡಿದುಕೊಂಡು ಹೊರಟು ಎಲ್ಲಿಯೋ ಹೋಟೆಲ್ ತೆಗೆದು, ಜನಿವಾರ ಹಾಕಿಕೊಂಡು, ಉಡುಪಿ ಬ್ರಾಹ್ಮಣರಾಗುವಂತೆ, ಅನೇಕರು 'ಮಠ' 'ಸ್ವಾಮಿ' ಎನ್ನುವ ಅಡ್ಡಹೆಸರು ಸೇರಿಸಿಕೊಂಡು ಜಂಗಮ ಜಾತಿಯಲ್ಲಿ ಸೇರಿದ್ದಾರೆ. ಮಠಗಳಲ್ಲಿದ್ದು ಸೇವೆ ಮಾಡಿಕೊಂಡು ಜನರಿಂದ ಸ್ವಾಮಿಯವರು ಅನ್ನಿಸಿಕೊಂಡು ಈ ವರ್ಗಕ್ಕೆ ಸೇರ್ಪಡೆಯಾದವರಿದ್ದಾರೆ. ಆದ್ದರಿಂದ ಇಂದಿನ ಜಂಗಮರೆಲ್ಲ ಹಿಂದೆ ದಲಿತರು ಎಂಬ ತಿಳುವಳಿಕೆ, ಹೇಳಿಕೆ ಸಂಪೂರ್ಣ ತಪ್ಪು.

ಲಿಂಗಾಯತ ಧರ್ಮದ ಸೂತ್ರಗಳನ್ನು ಕ್ರೋಢೀಕರಿಸು (Codify) ವಾಗ ಲಿಂಗಾಯತ ಧರ್ಮದ ಗೋತ್ರ ಪುರುಷರು ಮಾದಾರ ಚನ್ನಯ್ಯ, ಡೋಹರ ಕಕ್ಕಯ್ಯ

ಎಂದು ಪೂಜ್ಯ ಶ್ರೀ ಇಳಕಲ್ ಸ್ವಾಮೀಜಿಯವರ ಅನುಯಾಯಿಗಳು ಇನ್ನೊಂದು ಪ್ರಮಾದ ಎಸಗುತ್ತಿದ್ದಾರೆ. ಇದಕ್ಕೆ ತಪ್ಪು ತಪ್ಪಾಗಿ ಬಸವಣ್ಣನವರ ವಚನವನ್ನು ಆಧಾರವಾಗಿ ತೆಗೆದುಕೊಳ್ಳುತ್ತಾರೆ.

ಕುಲಗೋತ್ರ ಜಾತಿ ಇವೆಲ್ಲವೂ ಲಿಂಗಭಕ್ತ (ಶರಣ)ನಲ್ಲಿ ದೀಕ್ಷಾನಂತರ ಅಳಿಯುತ್ತವೆ. ಗೋತ್ರವು ವಂಶಸೂಚಕ. ದೀಕ್ಷಾ ನಂತರ ದೀಕ್ಷಿತರು ಬಸವ ಸಂತಾನ; ಅವರು ಪೂರ್ವದ ಜಾತಿ, ಕುಲ, ಗೋತ್ರ ಹೇಳಬಾರದು. ವರ್ಣಾಶ್ರಮ ವ್ಯವಸ್ಥೆಯಲ್ಲಿ ಗೋತ್ರಗಳು ದ್ವಿಜ ವರ್ಣದವರಿಗೆ ಮಾತ್ರ ಇರುತ್ತವೆ. ಶೂದ್ರರು ಮತ್ತು ಅಂತ್ಯಜರಿಗೆ ಇರುವುದಿಲ್ಲ. ಆದ್ದರಿಂದ ಅಂತ್ಯಜರು ಲಿಂಗದೀಕ್ಷಾ ಸಂಸ್ಕಾರವನ್ನು ಹೊಂದಿ ಲಿಂಗವಂತ ಧರ್ಮಾನುಯಾಯಿಗಳಾದಾಗ ಶ್ರೇಷ್ಠ ಕುಲದಿಂದ ಬಂದವರೆಂದು ಬೀಗುತ್ತಿದ್ದವರು ಅಥವಾ ವರ್ಣಾಶ್ರಮ ವ್ಯವಸ್ಥೆಯಲ್ಲಿ ನಂಬಿಕೆ ಇದ್ದವರು ದಲಿತವರ್ಗದಿಂದ ಬಂದವರನ್ನು "ನಿಮ್ಮ ಗೋತ್ರವಾವುದು ?" ಎಂದು ಅಪಹಾಸ್ಯದ ಧ್ವನಿಯಲ್ಲಿ ಕೇಳುತ್ತಿದ್ದರು. ಆಗ ಆ ಮುಗ್ಧರು, ನಾಚಿ ತಲೆತಗ್ಗಿಸಿ ನಿಂತು ಬಿಡುತ್ತಿದ್ದರು. ಇಂಥವರಲ್ಲಿ ಆತ್ಮ ವಿಶ್ವಾಸ ತುಂಬಲು ಬಸವಣ್ಣನವರು ಹೇಳುತ್ತಾರೆ :

"ಗೋತ್ರ ನಾಮವ ಬೆಸಗೊಂಡಡೆ
ಮಾತ ನೂಕದೆ ಸುಮ್ಮನಿದ್ದಿರಿದೇನಯ್ಯಾ ?
ತಲೆಯ ಕುತ್ತಿ ನೆಲನ ಬರೆಯುತ್ತಿದ್ದಿರಿದೇನಯ್ಯಾ
ಗೋತ್ರ ಮಾದಾರ ಚನ್ನಯ್ಯ, ಡೋಹಾರ ಕಕ್ಕಯ್ಯನೆಂಬುದೇನು;
ಕೂಡಲಸಂಗಮದೇವಾ ? –ಬ. ಷ. ವ. ೭೪೪

ನಿಮ್ಮ ಕುಲದಲ್ಲಿ ಮಹಾನುಭಾವಿಗಳಾದ ಚನ್ನಯ್ಯ, ಕಕ್ಕಯ್ಯ ಅವರು ಆಗಿ ಹೋಗಿಲ್ಲವೆ ? ಸಂಕೋಚ ಪಡದೆ ಹೇಳಿರಿ. ವಸಿಷ್ಟ, ವಿಶ್ವಾಮಿತ್ರ, ಕಶ್ಯಪರಿಗಿಂತಲೂ ಯಾವ ದೃಷ್ಟಿಯಿಂದಲೂ ಇವರು ಕಡಿಮೆ ಇಲ್ಲ ಎಂಬ ಅಭಿಮಾನ ನಿಮಗಿರಲಿ." ಎಂದು ಧೈರ್ಯ ತುಂಬುತ್ತಾರೆ.

ಎಲ್ಲ ಲಿಂಗವಂತರೂ ಇಂದು ಗೋತ್ರ ಸೂತ್ರ ಹೇಳಬೇಕಾಗಿಲ್ಲ ; ಹೇಳುವುದು ತಾತ್ತ್ವಿಕವಾಗಿ ತಪ್ಪು. ಆದ್ದರಿಂದ ಕುಲ (ಜಾತಿ) ಸೂಚಕವಾದ ಗೋತ್ರ ಪರಂಪರೆಯನ್ನು ಮಾದರ ಚನ್ನಯ್ಯ, ಡೋಹರ ಕಕ್ಕಯ್ಯ ನಮ್ಮ ಗೋತ್ರ ಪುರುಷರು ಎಂದು ಲಿಂಗವಂತರು ಹೇಳಬಾರದು.

ಪೂಜ್ಯ ಶ್ರೀಗಳ ನಿಲುವು ತಪ್ಪಲ್ಲ.

ಪೂಜ್ಯ ಶ್ರೀ ನಿ. ಪ್ರ. ಮಹಾಂತ ಸ್ವಾಮಿಗಳು, "ಲಿಂಗವಂತ ಧರ್ಮ ಸಂಸ್ಕಾರ ಹೊಂದಿ ಆಚಾರ–ಅರಿವು–ಅನುಭಾವಗಳಿಂದ ಶೋಭಿತನಾದ ವ್ಯಕ್ತಿಯನ್ನು ಮಠಾಧಿಕಾರಿಯನ್ನಾಗಿ ಮಾಡಲು ತಾವು ಸಿದ್ಧ." ಎಂದು ಹೇಳುತ್ತಲೇ ಕೆಲವು ಸಂಪ್ರದಾಯಸ್ಥರಿಗೆ ತೀವ್ರ ತಳಮಳವಾದಂತೆ ತೋರುತ್ತಿದೆ. ಅವರ ಪ್ರತಿನಿಧಿಗಳಾಗಿ ಮೂರು ಸಾವಿರ ಮಠಾಧೀಶರು ವರ್ತಿಸಿರುವುದು ಖಂಡನಾರ್ಹವಾಗಿದೆ. ಇಳಕಲ್ ಶ್ರೀಗಳ

ಹೇಳಿಕೆ (ಶಿವಯೋಗ ಮಂದಿರದ) ಸಂಪ್ರದಾಯಕ್ಕೆ ವಿರುದ್ಧವಾಗಿ ತೋರಿದ್ದರೆ ಶ್ರೀ ಮೂಜಗಂರವರು ವೈಯಕ್ತಿಕವಾಗಿ ಭೇಟಿಯಾಗಿ ಚರ್ಚಿಸಬಹುದಿತ್ತು. ಹಾಗೆ ಮಾಡದೆ ಸಂಪ್ರದಾಯ ನಿಷ್ಠ (ಜಡ)ರ ಗುಂಪು ಕಟ್ಟಿಕೊಂಡು ಮಠಕ್ಕೆ ಬಂದು ಶ್ರೀ ಮಹಾಂತ ಶಿವಯೋಗಿಗಳೊಡನೆ ಮಾತಿನ ಘರ್ಷಣೆಗೆ ಇಳಿದುದಾಗಿ ತಿಳಿದು ಬಂದಿದೆ.

ಒಂದು ವೇಳೆ ಇಳಕಲ್ ಸ್ವಾಮೀಜಿಯವರ ಹೇಳಿಕೆ ವಚನ ಸಾಹಿತ್ಯ ಸಂವಿಧಾನಕ್ಕೆ, ಬಸವ ತತ್ತ್ವಕ್ಕೆ ವಿರುದ್ಧವಾಗಿ ಇದ್ದಿದ್ದರೆ ಶ್ರೀ ಮೂಜಗಂರವರು ಎತ್ತಿ ತೋರಿಸಿ ಖಂಡಿಸಬಹುದಿತ್ತು, ಶ್ರೀಮಲೆ ಮಹದೇಶ್ವರರು ಶೂನ್ಯಪೀಠದ ಆರನೆಯ ಅಧಿಕಾರಿಗಳೆಂದು ವಿರಕ್ತ ಸಂಪ್ರದಾಯದಲ್ಲಿ ನಂಬಿಕೆ ಇದೆ. ಇವರು ಹುಟ್ಟಿನಿಂದ ಮಾದಾರರೆಂದು ಜನಪದ ಸಾಹಿತ್ಯ-ಕಂಸಾಳೆ ಪದಗಳಲ್ಲಿ ಹೇಳಲ್ಪಟ್ಟಿದೆ [ಇದನ್ನೊಪ್ಪದ ಮಡಿವಂತ ಲಿಂಗಾಯತರು ಮಹದೇಶ್ವರರನ್ನು ಅಯೋನಿ ಸಂಭವರನ್ನಾಗಿ ಮಾಡಿ, ಪುರಾಣ ಬರೆಸಿದ್ದಾರೆ.] ಇಂದು ಮಲೆ ಮಹದೇಶ್ವರರ ಕೀರ್ತಿ ನೋಡಿದರೆ ಆಶ್ಚರ್ಯ ಎನಿಸುತ್ತದೆ. ಇದರಿಂದ ತಿಳಿದು ಬರುವುದೇನೆಂದರೆ, ಕೆಲವು ಸಂಪ್ರದಾಯ ಜಡ ಮಡಿವಂತರನ್ನು ಬಿಟ್ಟರೆ ಬಸವ ತತ್ತ್ವಾನುಯಾಯಿ ಲಿಂಗವಂತರು ಗುಣಗ್ರಾಹಿಗಳಾಗಿ ಶರಣರನ್ನು ಜಾತಿ ಪಂಥ ಮತ ಭೇದವಿಲ್ಲದೆ ಗೌರವಿಸುತ್ತಾರೆ ಎಂಬುದು.

ದಿ. 7-5-1994 ರ ಸಂಯುಕ್ತ ಕರ್ನಾಟಕ ದಿನ ಪತ್ರಿಕೆಯಲ್ಲಿ ಶ್ರೀಮೂಜಗಂರವರ ಸನ್ನಿಧಿಯಲ್ಲಿ, ಪೂಜ್ಯ ಮಹಾಂತ ಸ್ವಾಮಿಗಳು ತಮ್ಮ ಹೇಳಿಕೆ ಹಿಂತೆಗೆದುಕೊಂಡ ಒಂದು ವರದಿ ; ತಮ್ಮ ನಿರ್ಧಾರಕ್ಕೆ ಶ್ರೀಗಳು ಅಚಲವಾಗಿ ಬದ್ಧರಾಗಿರುವ ಇನ್ನೊಂದು ವರದಿ ಬಂದವು. ಇದು ಎಲ್ಲ ಜನರಲ್ಲಿಯೂ ವಿವಿಧ ಭಾವನೆ ಉಂಟಾಗಲು ಕಾರಣವಾಯಿತು. ಇಳಕಲ್ ಶ್ರೀಗಳು ತಾವು ಮಠದ ಅಧಿಕಾರ ತ್ಯಾಗಕ್ಕೂ ಸಿದ್ಧರಾಗಿ ತಮ್ಮ ನಿಲುವಿಗೆ ಬದ್ಧರಾಗಿ ನಿಂತುದು ತಿಳಿಯಿತು. ಇದರಿಂದ ಪೂಜ್ಯ ಶ್ರೀಗಳ ತತ್ತ್ವನಿಷ್ಠೆ ಬಗ್ಗೆ ಅಭಿಮಾನವೂ ಶ್ರೀ ಮೂಜಗಂರವರ ಹಸ್ತಕ್ಷೇಪದ ಬಗ್ಗೆ ಜಿಗುಪ್ಸೆಯೂ ಉಂಟಾದವು. ಶ್ರೀ ಮಹಾಂತಪ್ಪನವರು ತಾತ್ತ್ವಿಕವಾಗಿಯೂ ಸರಿಯಾಗಿದ್ದಾರೆ ಮತ್ತು ಆಧ್ಯಾತ್ಮಿಕವಾಗಿಯೂ ಸರಿಯಾದ ದಿಶೆಯಲ್ಲಿದ್ದಾರೆ. ತನ್ನ ಶಿಷ್ಯ, ಉತ್ತರಾಧಿಕಾರಿಯನ್ನು ಆಯ್ಕೆ ಮಾಡುವ, ಅನುಗ್ರಹಿಸುವ ಹಕ್ಕನ್ನು ಗುರುವು ಹೊಂದಿರುತ್ತಾನೆ. ತಮ್ಮ ಮಠಕ್ಕೆ ಉತ್ತರಾಧಿಕಾರಿಯನ್ನು ಆಯ್ಕೆ ಮಾಡುವ ಹಕ್ಕು ಅವರಿಗಿರುವಾಗ, ಶ್ರೀ ಮೂಜಗಂ ಅವರು ಹಸ್ತಕ್ಷೇಪ ಮಾಡುವ ಅಗತ್ಯವೇನಿತ್ತು ?

ಪೂಜ್ಯ ಶ್ರೀ ಮಹಾಂತ ಸ್ವಾಮೀಜಿ ತಮ್ಮ ಉತ್ತರಾಧಿಕಾರಿಯನ್ನಾಗಿ ದಲಿತರನ್ನು ಮಾಡುವರೋ ಇಲ್ಲವೋ, ಮಠದ ಭಕ್ತರು ಅದಕ್ಕೆ ಅವಕಾಶ ಕೊಡುವರೋ ಇಲ್ಲವೋ ಅದು ಬೇರೆ ಮಾತು, ಅವರ ನಂಬಿಕೆ-ಹೇಳಿಕೆ ಮಾತ್ರ ವಚನ ಸಾಹಿತ್ಯ ಸಂವಿಧಾನಕ್ಕೆ ಸಂಪೂರ್ಣ ಸಮ್ಮತವಾಗಿವೆ ಎಂಬುದು ಗಮನಾರ್ಹ.

ಶ್ರೀ ಮೂಜಗಂ ಅವರ ಸಂಕುಚಿತ ಬುದ್ಧಿ

ಉಳಿದೆಲ್ಲ ಸ್ವಾಮಿಗಳಿಗಿಂತಲೂ ತಾವು ಉದಾರವಾದಿಗಳೆಂದು ಸಮನ್ವಯ ಸಾಧಕರೆಂದು ಬಡಬಡಿಸುವ ಹವ್ಯಾಸ ಹುಬ್ಬಳ್ಳಿಯ ಮೂರು ಸಾವಿರ ಮಠದ ಜಗದ್ಗುರುಗಳವರದು. ಸಮನ್ವಯತೆಯ ಸೋಗಿನಲ್ಲೇ ಅವರು ತಪ್ಪುಗಳನ್ನು ಹೇಗೆ ಮಾಡುತ್ತಾರೆಂದು ವಿವರಿಸಬಹುದು.

ಬ್ರಹ್ಮಕುಮಾರಿ ಪಂಥವು ಮೊಟ್ಟ ಮೊದಲನೆ ಏಟು ಕೊಡುತ್ತಿರುವುದು ಲಿಂಗವಂತ ಸಮಾಜ-ಸಂಸ್ಕೃತಿಗೆ. ಉರಿಯುವ ದೀಪದ ಜ್ವಾಲೆಯೊಳಕ್ಕೆ ಪತಂಗಗಳು ಹಾರಿ ಬಿದ್ದು ನಾಶವಾಗುವಂತೆ ಈ ಪಂಥವನ್ನು ಸೇರಿ ಲಿಂಗವಂತರು ಸ್ವಧರ್ಮ ಸಂಸ್ಕೃತಿಗೆ ಎರವಾಗುತ್ತಿದ್ದಾರೆ. ವಿಭೂತಿ – ರುದ್ರಾಕ್ಷಿ – ಇಷ್ಟಲಿಂಗ ಮುಂತಾದ ಧರ್ಮ ಲಾಂಛನಗಳನ್ನು ತೆಗೆಸಿ ಮಾಡುವ ಬ್ರಹ್ಮಕುಮಾರಿ ಪಂಥ ವಚನಗಳೆಂಬ ಅರಿವಳಿಕೆ (ಅನಿಸ್ತೀಷಿಯಾ) ಮೂಸಿಸುತ್ತ ಲಿಂಗವಂತ ಧರ್ಮೀಯರನ್ನು ದಿಕ್ಕುಗೆಡಿಸುತ್ತ ಧರ್ಮವನ್ನು ಕೊಟ್ಟ ಬಸವಣ್ಣನನ್ನು ಅಪ್ಪಾ ಅನ್ನದೆ, ಸಂಬಂಧವಿಲ್ಲದ ವ್ಯಕ್ತಿಯನ್ನು ದಾದಾ ಅನ್ನುವಂತೆ ಮಾಡುತ್ತಿದೆ. ಅವರ ಕಾರ್ಯಕ್ರಮಗಳಿಗೆ ಮೂಜಗಂ ಅವರು ಹಗಲೆಲ್ಲ ಹೋಗುತ್ತಲೇ ಇರುವರು. ತಾವು ಒಂದು ಸಮಾಜದ ಗುರು ; ಎಲ್ಲಿಗೆ ಹೋಗಬೇಕು, ಹೋಗಬಾರದು ಎಂಬ ವಿವೇಚನೆ ಇಲ್ಲದಿದ್ದರೆ ಹೇಗೆ ? ತಾವು ಹೋಗುವ ಸ್ಥಳಗಳಿಗೆ ಮುಗ್ಧ ಲಿಂಗವಂತರೂ ಹೋಗಿ ಆದರ ಸಮ್ಮೋಹಕ ಕೆಸರಿನಲ್ಲಿ ಮೇಲೇಳಲಾರದಂತೆ ಸಿಕ್ಕಬಹುದು ಎಂಬ ಅರಿವು ಸಹ ಇಲ್ಲ. "ಹೀಗೆ ಮಾಡಬಾರದು" ಎಂದು ನಾವು ಸೂಚಿಸಿದರೆ, "ನಮ್ಮದು ಸಮನ್ವಯದ ದಾರಿ ; ಎಲ್ಲರೂ ಒಂದೇ ಎಲ್ಲವೂ ಒಂದೆ" ಎಂದರು. ಅಷ್ಟಾವರಣ ವಿರಹಿತರಾದ ಇಂಥವರ ಸಂಖ್ಯೆ ಬೆಳೆದರೆ ನಾಳೆ ಮಠಕ್ಕೆ ಬರುವ ಜನರಾದರೂ ಉಳಿದಾರೇ ಎಂಬ ಮುಂದಾಲೋಚನೆ ಇಲ್ಲ. ಸಮನ್ವಯತೆ ಎಂದರೆ ತಾನೇ ಹಗ್ಗ ಕೊಟ್ಟು ಕೈ ಕಟ್ಟಿಸಿಕೊಳ್ಳುವುದೆ ?

ಸ್ವಧರ್ಮದ ವಿಷಯದಲ್ಲಿ ಅವರು ಮಾಡುತ್ತಿರುವ ತಪ್ಪುಗಳನ್ನು ನೋಡೋಣ.

1. ವಿರಕ್ತ ಮಠಾಧೀಶರಾಗಿಯೂ ಧರ್ಮಪಿತ ಬಸವಣ್ಣನವರನ್ನು ಎಂದೂ ಧರ್ಮಗುರುವೆಂದು, ಆದ್ಯರೆಂದು ಒಪ್ಪುವುದಿಲ್ಲ. ಪಂಚಾಚಾರ್ಯರೊಂದಿಗೆ ಸಖ್ಯ ಬೆಳೆಸುವ ಹಂಬಲವಿದೆ ; ಆದರೆ ಆ ವರ್ಗದವರ ಅಜ್ಞಾನಯುಕ್ತ ಹಮ್ಮು ಮತ್ತು ಪ್ರತಿಷ್ಠೆಯಿಂದ ಇದು ಕೈಗೂಡಿಲ್ಲ ಅಷ್ಟೆ.
2. "ಬಸವಣ್ಣನವರಿಗಿಂತಲೂ ಪೂರ್ವದಲ್ಲೇ ತಮ್ಮ ಮಠವಿತ್ತು. ಬಂದ ಶರಣರಿಗೆ ಶ್ರೀ ಗುರುಸಿದ್ಧೇಶ್ವರರು ಆಶ್ರಯ ನೀಡಿದರು." ಎಂದು ಒಮ್ಮೆ, ಮತ್ತೊಮ್ಮೆ "ಚನ್ನಬಸವಣ್ಣನವರ ಆದೇಶದಂತೆ, ಶ್ರೀ ಗುರುಸಿದ್ಧೇಶ್ವರರು 3000 ಶರಣರೊಡನೆ ಇಲ್ಲಿ ಉಳಿದರು." ಎಂದು ಹೇಳುತ್ತಾರೆ, ಸಾಹಿತ್ಯ ಬರೆಸುತ್ತಾರೆ.
3. ಒಂದು ಜ್ವಲಂತ ಸಾಕ್ಷಿಯಾಗಿದ್ದ ಶ್ರೀ ಚನ್ನಬಸವೇಶ್ವರ ಓಲೆ ಮಠವನ್ನು ಕೆಡವಿಸಿ [ಅದು ಚಿನ್ಮಯಜ್ಞಾನಿ ಚನ್ನಬಸವಣ್ಣನವರು ತಂಗಿ, ವಚನ ಸಾಹಿತ್ಯ

ಇಟ್ಟುಹೋದ ಸ್ಥಳ] ಅಲ್ಲಿ ಗುರುಸಿದ್ಧೇಶ್ವರರ ಹೆಸರಿನಲ್ಲಿ ಕಲ್ಯಾಣ ಮಂಟಪ ಕಟ್ಟಿಸಿದ್ದಾರೆ. ಇಂದಿಗೂ ಅವರ ವಿದ್ಯಾಸಂಸ್ಥೆಗಳಿಗೆ ಒಂದೆಡೆ ಸಹ ಬಸವಾದಿ ಪ್ರಮಥರ ಹೆಸರಿಟ್ಟಿಲ್ಲ ಎಂಬುದನ್ನು ಗಮನಿಸಬಹುದು. ಮಹಿಳಾ ಕಾಲೇಜಿಗೆ ಅಕ್ಕಮಹಾದೇವಿ–ನೀಲಾಂಬಿಕೆ–ಅಕ್ಕನಾಗಲಾಂಬಿಕೆ ಮುಂತಾದವರ ಹೆಸರು ಇಡಬಹುದಿತ್ತು, ಅಲ್ಲಿಗೆ ಸಹ ಶರಣೆಯರ ಹೆಸರು ಇಟ್ಟಿಲ್ಲ.

ತೋರಿಕೆಗಾಗಿ ವಚನ ಸಾಹಿತ್ಯವನ್ನು ಪ್ರಕಟಿಸಿದರೂ ಅಂತರಂಗದಲ್ಲಿ ಬಸವಾದಿ ಪ್ರಮಥರ ಬಗ್ಗೆ ಒಂದು ಬಗೆಯ ಅಸಹನೆ ತುಂಬಿದೆ. ಅಕಸ್ಮಾತ್ ಭೇಟಿಯಾದಾಗ, "ನೋಡ್ರಿ, ನಿಮ್ಮ ಬಸವಣ್ಣನ ಬಗ್ಗೆ ಹೀಗೆ ಮಾಡಿದ್ದೀವಿ" ಎನ್ನುವರು. ಅಂದರೆ ಬಸವಣ್ಣ ಅವರವನು ಅಲ್ಲ; ನಮ್ಮವ ಮಾತ್ರ. ವಚನ ವಾಙ್ಮಯದ ಜನಪ್ರಿಯತೆ ನಗದೀಕರಿಸಲು ಮಾತ್ರ ಅದರ ಬಗ್ಗೆ ತೋರಿಕೆಯ ಪ್ರೀತಿ. ಅದನ್ನು ತತ್ತ್ವಶಃ ಅನುಷ್ಠಾನ ಮಾಡಲು ಮನಸ್ಸಿಲ್ಲ.

4. ಅವರಿಗೆ ಶ್ರೀ ಹಾನಗಲ್ ಕುಮಾರ ಸ್ವಾಮಿಗಳ ಸಾಧನೆ (ಶಿವಯೋಗ ಮಂದಿರ ಮಾಡಿ, ಅಯ್ಯನವರ ವಂಶಿಕರಿಗೆ ಹೆಚ್ಚಿನ ಸ್ಥಾನ ಕೊಟ್ಟದ್ದು) ದೊಡ್ಡದೇ ವಿನಾ ಧರ್ಮಕೊಟ್ಟ ಬಸವಣ್ಣನವರ ಸಾಧನೆಯಲ್ಲ. ಸಮಾಜಕ್ಕೆ, ಬಸವ ತತ್ತ್ವಾನುಯಾಯಿಗಳಿಗೆ ಅಂಜಿ ಏನಾದರಿಷ್ಟು ಬಸವಣ್ಣನ ಬಗ್ಗೆ ಮಾಡುವರೇ ವಿನಾ ಸ್ವಯಂ ಪ್ರೀತಿಯಿಂದಲ್ಲ. ಅವರು ಪ್ರಕಟಿಸುವ ಎಷ್ಟೋ ಕೃತಿಗಳಲ್ಲಿ ವಚನ ಸಾಹಿತ್ಯ ಸಂವಿಧಾನಕ್ಕೆ ವಿರುದ್ಧವಾದ ವಿಚಾರಗಳೇ ತುಂಬಿರುತ್ತವೆ,

5. "ಅವರು] ಬಹಳ ಮಹತ್ವಾಕಾಂಕ್ಷಿಗಳು. ಮಠಾಧಿಕಾರಿಗಳನ್ನು ತರಬೇತಿಗೊಳಿಸುವ ಶಿವಯೋಗ ಮಂದಿರಕ್ಕಿಂತಲೂ ತಮ್ಮ ಮಠ ಬೆಳೆಯಬೇಕೆಂದು ತರಬೇತಿ ಕೇಂದ್ರವನ್ನು ಅಪ್ರತ್ಯಕ್ಷವಾಗಿ ಹುಬ್ಬಳ್ಳಿಗೆ ಸ್ಥಳಾಂತರಿಸಿದರು," ಎಂಬ ಆಕ್ಷೇಪ ಎದುರಿಸುತ್ತಿದ್ದಾರೆ.

ಜೊತೆಗೆ ಖಾಲಿಯಾದ ಮಠಗಳಿಗೆಲ್ಲ ತಮ್ಮನ್ನು ಓಲೈಸುವ ಮಟುಗಳನ್ನಿಟ್ಟು ತಮ್ಮ ಧಾರ್ಮಿಕ ಸಾಮ್ರಾಜ್ಯವನ್ನು ವಿಸ್ತರಿಸಬೇಕೆಂಬ ಆಕಾಂಕ್ಷೆಯುಳ್ಳವರು. ಇದನ್ನು ಸ್ಪಷ್ಟವಾಗಿ ಹೇಳಲು ಎರಡು–ಮೂರು ಉದಾಹರಣೆಗಳಿವೆ. ಬೆಳಗಾಂವ ಜಿಲ್ಲೆಯ ಸವದಿಯ ಶರಣ ವಿಚಾರ ವಾಹಿನಿಯವರು ಕಳಿಸಿರುವ ಲಿಖಿತ ಪ್ರಕಟಣೆಯಲ್ಲಿ ಒಂದು ಮಾಹಿತಿ ಇದೆ. ಇಳಕಲ್ ಮಠಕ್ಕೆ ಈ ಬಗ್ಗೆ ಚರ್ಚಿಸಲು ಜನರ ಗುಂಪನ್ನು ಹಿಂದಿಟ್ಟುಕೊಂಡು (ಮುಂದಿಟ್ಟುಕೊಂಡು) ಬಂದಾಗ, ಜೊತೆಗೆ ತಮ್ಮ ಪೂರ್ವಾಶ್ರಮದ ಸಂಬಂಧಿಯಾದ ಖೇಳಗಿ ಸ್ವಾಮಿಗಳನ್ನು ಕರೆದುಕೊಂಡೇ ಬಂದಿದ್ದರಂತೆ. ಶ್ರೀ ನಿ.ಪ್ರ. ಮಹಾಂತಪ್ಪನವರು ಅಕಸ್ಮಾತ್ ಅಧಿಕಾರ ತ್ಯಾಗಪತ್ರ ಕೊಟ್ಟು, ಮಠದ ಭಕ್ತ ಸಮೂಹ ಒಪ್ಪಿಕೊಂಡರೆ ಆ ತಕ್ಷಣ ಮಠದ ವ್ಯವಹಾರ ನೋಡಿಕೊಳ್ಳಲು ಖೇಳಗಿ ಸ್ವಾಮಿಗಳನ್ನು ಇಡುವ ಪೂರ್ವಯೋಜಿತ ಸಂಚು ಅವರದಿತ್ತಂತೆ.

ಇಂತಹ ಸಾಮ್ರಾಜ್ಯಶಾಹಿ ಧೋರಣೆ ಏಕೆ ಬೇಕು ? ಕೆಲವು ದೊಡ್ಡ ಮಠಾಧಿಕಾರಿಗಳು ತಮ್ಮನ್ನು ಓಲೈಸುವ ಜನರನ್ನು ಅನರ್ಹರಿದ್ದರೂ ಬೇರೆ ಬೇರೆ ಮಠಗಳಿಗೆ ನಿಯೋಜಿಸಿ ಅವುಗಳ ಮೇಲೆ ಹಿಡಿತ ಸಾಧಿಸುವ ತಂತ್ರ ಹೂಡಿ, ಆ ಮಠಗಳ ಶ್ರೇಷ್ಠ ಪರಂಪರೆಯನ್ನೇ ಕುಂದಿಸಿದ್ದಿದೆ. ಇದಕ್ಕೆ ಅಥಣಿಯ ಶಿವಯೋಗಿಗಳ ಮಠವೂ ಒಂದು ಉದಾಹರಣೆ. ಇಂಥ ಹಸ್ತಕ್ಷೇಪದ ಹಿಂದೆ ಯಾರಿದ್ದಾರೆ, ಏನು ಮುಂತಾದ್ದು ಬರೆಯುವುದು ನನಗೆ ಇಷ್ಟವಿಲ್ಲದ ಸಂಗತಿ ; ಆಸಕ್ತರು ಸ್ಥಳೀಯರ ಬಾಯಿಂದಲೇ ತಿಳಿದುಕೊಳ್ಳಬಹುದು. ಬಸವ ತತ್ತ್ವ, ಅಧ್ಯಾತ್ಮಿಕ ಸಂಸ್ಕಾರದ ತಳಹದಿಯ ಮೇಲೆ ಜನರನ್ನು ಆಕರ್ಷಿಸುತ್ತ ಇಳಕಲ್ ಶ್ರೀಗಳು ಸಂಸ್ಕಾರವಂತರನ್ನು ರೂಪಿಸುತ್ತಿರುವಾಗ ಅವರ ಮೇಲೆ (ಅವರು ಯಾವ ತಾತ್ತ್ವಿಕ ತಪ್ಪೂ ಮಾಡದೆಯೆ) ಒತ್ತಡ ತಂದು, ಏನಾದರೂ ಸ್ಥಾನ ಪಲ್ಲಟ ಮಾಡುವ ಯತ್ನಮಾಡಿದರೆ, ಆಗ ಆ ಮಠ ಕೇವಲ ಸ್ಥಾವರವಾಗಿ ಉಳಿದೀತು, ಜಂಗಮ ಶಕ್ತಿಯನ್ನು ಕಳೆದುಕೊಂಡೀತು. ಆದ್ದರಿಂದ ಡಾ॥ ಮೂಜಗಂ ರವರು ಜಾತಿವಾದದ ತಮ್ಮ ಸಂಕುಚಿತ ವಿಚಾರದ ಚೌಕಟ್ಟನ್ನು ಪೂಜ್ಯ ಇಳಕಲ್ ಸ್ವಾಮೀಜಿಯವರ ಮೇಲೆ ವಚನ ಸಾಹಿತ್ಯ ಸಂವಿಧಾನಕ್ಕೆ ವಿರುದ್ಧವಾಗಿ ಹೇರುವ ಬದಲು, ತಾವೇ ವಿಶಾಲ ಮತಿಗಳಾಗಿ ಬೌದ್ಧಿಕ ಮಾನಸಾಂತರ ಹೊಂದಿ ಬಸವ ಪಥದಲ್ಲಿ ನಡೆದು ಕೀರ್ತಿವಂತರಾಗಲಿ ಎಂದು ಆಶಿಸೋಣ, ಹಾರೈಸೋಣ. ★

ಡಾ॥ ಮೂಜಗಂ ರವರ ದೃಷ್ಟಿಯಲ್ಲಿ

ಲೇಖನವನ್ನು ಬರೆದು ಪೂರೈಸಿ, ಮುದ್ರಣಕ್ಕೆ ಕಳಿಸಿದ ಎರಡು ದಿವಸಗಳ ಮೇಲೆ ವಿಶ್ವವಾಣಿ ಪತ್ರಿಕೆಯ (ದಿ. ೨೮–೫–೯೪) ತುಣುಕೊಂದನ್ನು ಜೆರಾಕ್ಸ್ ಮಾಡಿ ಯಾರೋ ನಮ್ಮ ವಿಳಾಸಕ್ಕೆ ಕಳಿಸಿಕೊಟ್ಟರು. ಅದರಲ್ಲಿ ಇಳಕಲ್ ಮಠಕ್ಕೆ ದಿ.೫-೫-೯೪ ರಂದು ಡಾ॥ ಮೂಜಗಂರವರೊಡನೆ ಹೋಗಿ ಪ್ರತ್ಯಕ್ಷವಾಗಿ ಭಾಗಿಗಳಾದ ಆರ್. ಜಿ. ಹಿರೇಮಠ, ಅಯ್. ಕೆ. ಕೋರಿ ಮತ್ತು ಪಿ. ಎಸ್. ಗುಡ್ಡದ ಮಠ ಅವರ ಹೇಳಿಕೆ ಇದೆ. ಇದರಲ್ಲಿ ಕೆಳಕಂಡ ಅಂಶಗಳಿವೆ.

1. ಚಿತ್ರದುರ್ಗ ಹಾಗೂ ಗದುಗಿನ ಶ್ರೀಗಳು ನಿಜ ಸಂಗತಿ ತಿಳಿಯದೆ ಹೇಳಿಕೆ ಕೊಟ್ಟಿದ್ದಾರೆ.

2. ಇಳಕಲ್ ಶ್ರೀ ಮಹಾಂತ ಸ್ವಾಮಿಗಳೇ ಮೂರು ಸಾವಿರ ಮಠಾಧೀಶರೊಡನೆ ಅಸಂಬದ್ಧವಾಗಿ ಒರಟಾಗಿ ಮಾತನಾಡಿ ಮಾನಸಿಕ ಹಿಂಸೆ ನೀಡಿದರು, ತೇಜೋ–ವಧೆ ಮಾಡಿದರು. ಮೂಜಗಂ ಅವರು ಸಹನೆಯಿಂದ ಅವಮಾನ ತಾಳಿಕೊಂಡಿದ್ದು ನೋಡಿ ಆಶ್ಚರ್ಯವಾಯಿತು. ಇದನ್ನು ತಿರುವು ಮುರುವು ಮಾಡಿ ಜನರಲ್ಲಿ ಬಿಂಬಿಸಲಾಗುತ್ತಿದೆ.

3. ದಲಿತ ವ್ಯಕ್ತಿಯನ್ನು ಮಹಾಂತೇಶ್ವರ ಮಠಕ್ಕೆ ಉತ್ತರಾಧಿಕಾರಿ ಮಾಡುವ ಮೊದಲು ನಮ್ಮೆಲ್ಲರನ್ನು ಕೇಳಬೇಕೆಂದು ಪರಿಪರಿಯಾಗಿ ಕೋರಲಾಯಿತು.

4. ದಲಿತ ವ್ಯಕ್ತಿಗೆ ಸಂಸ್ಕಾರ ಕೊಟ್ಟು ಲಿಂಗಧಾರಣೆ ಮಾಡಿದ ನಂತರ ಅವನು ದಲಿತನಾಗುವುದಿಲ್ಲ ಲಿಂಗವಂತನೇ ಆಗಿರುತ್ತಾನೆ ಎಂಬುದು ಜಗದ್ಗುರುಗಳ ಅಭಿಪ್ರಾಯ.

5. ಶ್ರೀ ಮೂಜಗಂ ಅವರು ತಾವಾಗಿ ಹೋಗಿರಲಿಲ್ಲ ; ಇಳಕಲ್ ಭಕ್ತರ ಕೋರಿಕೆಯ ಮೇರೆಗೆ ಹೋಗಿದ್ದರು.

ಈ ಪ್ರಸಂಗ ನೋಡಿ ನನಗೆ ಒಂದು ಹಾಸ್ಯ ಕಥೆ ನೆನಪಾಗುತ್ತಿದೆ. ಒಮ್ಮೆ ಓರ್ವ ಮಹಿಳೆಗೆ ಕನಸು ಬಿದ್ದಿತು. ಅದರಲ್ಲಿ ಅವರ ಮನೆಯ ಹಿತ್ತಲಿನ ತಿಪ್ಪೆಯಲ್ಲಿ ಒಂದು ಹುಣಿಸೆ ಸಸಿ ಹುಟ್ಟಿತ್ತು. ಆಕೆ ಅದನ್ನು ಪೋಷಿಸುತ್ತಿದ್ದಳು. ಎಚ್ಚರವಾದ ಮೇಲೆ ಗಂಡನಿಗೆ ಹೇಳಿದಳು. ಆಗ ಅವನು ಹೇಳಿದ, "ಚೆನ್ನಾಗಿ ಬೆಳೆಸು ಬೇಡವೆಂದವರಾರು ? ಆದರೆ ಹುಣಿಸೆಹಣ್ಣನ್ನು ತೌರು ಮನೆಗೆ ಕಳಿಸಕೂಡದು : ಕದ್ದು ಮಾರಬಾರದು" ಎಂದ. ಆಕೆ ಅಂದಳು, "ಅದನ್ನು ಹೇಳಲು ನೀವ್ಯಾರು ? ನಾನು ಕಷ್ಟಪಟ್ಟು ನೀರು ಹಣಿಸಿ ಗೊಬ್ಬರ ಹಾಕಿ ಬೆಳೆಸಿರುತ್ತೇನೆ. ನನ್ನಿಷ್ಟ ಬಂದಂತೆ ಮಾಡುತ್ತೇನೆ." ಗಂಡನಿಗೆ ಕೋಪ ಬಂದಿತು, ಇಬ್ಬರ ಮಧ್ಯೆ ಗಲಾಟೆ ಆರಂಭವಾಯಿತು. ಬೆಳಿಗ್ಗೆ ಇಷ್ಟು ಹೊತ್ತಿಗೆ ಜಗಳವೇಕೆ ಎಂದು ಪಕ್ಕದ ಮನೆಯ ಹಿರಿಯರು ಬಂದು ನೋಡಿದರು. ಪತಿ–ಪತ್ನಿ ಜಗಳದ ಕಾರಣ ವಿವರಿಸಿದರು. ಆಗ ಹಿರಿಯರು, 'ಹುಣಿಸೆ ಗಿಡ ಎಷ್ಟಿದೆ ತೋರಿಸವ್ವಾ.' ಎಂದರು. ಆಗ ಆಕೆ ಅಂದಳು, "ಇಲ್ಲ, ನನ್ನ ಕನಸಿನಲ್ಲಿ ಕಾಣಿಸಿತ್ತು ಹುಣಿಸೆ ಸಸಿ." ಅವರು ಬೆಕ್ಕಸ ಬೆರಗಾದರು. ಈಗ ನಮ್ಮಗಳ ಪರಿಸ್ಥಿತಿಯೂ ಹಾಗೆಯೇ ಹಾಗಿದೆ. ಪೂಜ್ಯ ಮಹಾಂತ ಸ್ವಾಮಿಗಳ ಕನಸು ದಲಿತ ಸಮಾಜದಿಂದ ಬಂದ ಓರ್ವ ಲಿಂಗವಂತನನ್ನು ಉತ್ತರಾಧಿಕಾರಿ ಮಾಡುವುದು. ಅವರು ಯಾರನ್ನೂ ಇನ್ನೂ ಆಯ್ಕೆ ಮಾಡಿಲ್ಲ, ತರಬೇತಿ ನೀಡಿಲ್ಲ. ತಾವು ಪ್ರಗತಿಪರ ಚಿಂತನ ಶೀಲರು ಎನ್ನಿಸಿಕೊಳ್ಳುವ ಉತ್ಸಾಹದ ಭರದಲ್ಲಿ ಆಡಿದರು. ಅವರು ಇಷ್ಟವೂ ಅದೇ ಆಗಿರಬಹುದು. ಅಷ್ಟು ಮಾತ್ರಕ್ಕೆ ಶ್ರೀ ಮೂಜಗಂ ಆಗಿಯೇ ಬಿಟ್ಟಿತೇನೋ ಎಂದು ಗಾಬರಿಗೊಂಡು ಭಕ್ತಸಮೂಹ ಕರೆದುಕೊಂಡು ಧಾವಿಸಿ ಸ್ವಲ್ಪದರಲ್ಲಿ ಮುಗಿದು ಹೋಗುವ ಪ್ರಸಂಗವನ್ನು ಇಷ್ಟು ದೊಡ್ಡದು ಮಾಡಿದರು. ಉಭಯ ಶ್ರೀಗಳದೂ ಮುಂದಾಲೋಚನೆ ಇಲ್ಲದೆ ಮಾಡಿದ ಕೆಲಸಗಳೆ, ಕೊಟ್ಟ ಹೇಳಿಕೆಗಳೆ !

'ನನ್ನಿಚ್ಛೆ ಹೀಗಿದೆ' ಎಂದು ಹೇಳುವ ಬದಲು ಸ್ಥಿರ ಸಂಕಲ್ಪ ಎಂದು ಹೇಳಿಬಿಟ್ಟುದು ಶ್ರೀ ಹಾನಗಲ್ ಕುಮಾರ ಸ್ವಾಮಿಗಳ ವಿಚಾರಧಾರೆಯಲ್ಲಿ ಪಳಗಿದ ಶ್ರೀ ಮೂಜಗಂ ಗೆ ಹಿಡಿಸಲು ಸಾಧ್ಯವೆ ? ಈ ಹೇಳಿಕೆ ನಿಜವಿದ್ದರೆ ಮೂಜಗಂ ರವರ ಒಂದು ವಿವರಣೆ ಅಪೇಕ್ಷಣೀಯವಾಗಿದೆ. ಲಿಂಗಾಯತ ಧರ್ಮದ ಸಂಸ್ಕಾರ ಹೊಂದುತ್ತಲೇ ದಲಿತತ್ವ ಉಳಿಯುವುದೇ ಇಲ್ಲ. ಅಂದಾಗ 'ಲಿಂಗವಂತನಿಗೇ ಪಟ್ಟಗಟ್ಟಿದಂತಾಗುವುದಲ್ಲದೆ ದಲಿತನಿಗಲ್ಲ.' ಎಂಬುದು ಒಂದು ತಾತ್ತ್ವಿಕ ಸತ್ಯ.

ಹೇಳಿಕೆಯ ಕೊನೆಯಲ್ಲಿ ಮೂಜಗಂ ರವರ ಒಂದು ಕಳಕಳಿಯ ಮಾತಿದೆ. "ಅದೆಂದರೆ ಜಾತೀಯತೆಯನ್ನು ಮುಂದೆ ಮಾಡಿ ವೀರಶೈವ ಸಮಾಜವನ್ನು ಒಡೆಯ

ಬೇಡಿ. ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುವುದನ್ನು ಬಿಟ್ಟು ನೀವೇ ಜಾತೀಯತೆಯನ್ನು ಎಬ್ಬಿಸುತ್ತಿರುವುದು ಸಮಾಜಕ್ಕೆ ದ್ರೋಹ ಬಗೆದಂತೆ."

ಈ ಹೇಳಿಕೆಯಲ್ಲಿ ಸ್ಪಷ್ಟತೆ, ಸುಸಂಬದ್ಧತೆ, ತಾತ್ತ್ವಿಕ ಖಚಿತತೆ ಇಲ್ಲ. ಯಾರನ್ನೇ ಆಗಲಿ ಉತ್ತರಾಧಿಕಾರಿಯನ್ನಾಗಿ ಆಯ್ಕೆ ಮಾಡಿದರೆ ವೀರಶೈವ ಸಮಾಜ ಏಕೆ ಒಡೆಯುತ್ತದೆ ? ಬಹಳವೆಂದರೆ ಇದು ಬಸವ ತತ್ತ್ವವಾದ್ದರಿಂದ ಈ ವಾದ ಒಪ್ಪದ, ಪವಿತ್ರ ಹುಟ್ಟು–ವಂಶದಲ್ಲಿ ನಂಬಿಕೆ ಇಟ್ಟವರದು ಒಂದು ಗುಂಪು ಆಗಬಹುದು. ಒಂದು ವೇಳೆ ದಲಿತ ಸಮಾಜದವರು (ಬಸವ ತತ್ತ್ವ ಸಮಾನತೆ ಒಪ್ಪದ) ಸಂಪ್ರದಾಯವಾದಿ ವೀರಶೈವರ ಜೊತೆ ಸಂಘರ್ಷಕ್ಕೆ ಇಳಿದರೆ ಮಾತ್ರ ಒಡಕು ಉಂಟಾಗಬಹುದು. ಸಮಾನತೆ ಒಪ್ಪುವ–ಒಪ್ಪದ, ಬಸವ ತತ್ತ್ವ ವಾದಿಗಳು–ವಿರೋಧಿಗಳು–ಇಂಥ ಆಂತರಿಕ ಸಮಸ್ಯೆಯಲ್ಲಿ ದಲಿತರಾಗಲೀ ಇನ್ನಿತರರರಾಗಲೀ ತಲೆ ಹಾಕುವ ದಡ್ಡತನ ಮಾಡಲಿಕ್ಕಿಲ್ಲ. ★

ಬೇಲೀಮಠದ ಶ್ರೀಗಳ ಹೇಳಿಕೆ

ಬೇಲೀಮಠದ ಪೂಜ್ಯ ಶ್ರೀ ನಿ. ಪ್ರ. ಶಿವರುದ್ರ ಸ್ವಾಮಿಗಳೂ ಇಳಕಲ್ ಶ್ರೀಗಳ ಹೇಳಿಕೆಯಿಂದ ಸ್ಫೂರ್ತಿಗೊಂಡು ಅವರ ಮಠಕ್ಕೂ ದಲಿತರನ್ನೇ ಮಾಡುವುದಾಗಿ ಘೋಷಿಸಿದ್ದಾರೆ. ಸಂತೋಷ. ಆದರೆ ಇವರ ಬಗ್ಗೆ ಪೂಜ್ಯ ಮೂಜಗಂ ರವರು ಅಷ್ಟೊಂದು ಗಂಭೀರವಾಗಿ ತೆಗೆದುಕೊಳ್ಳಲಿಕ್ಕಿಲ್ಲ ಎಂದು ನನ್ನ ಊಹೆ. ಏಕೆಂದರೆ ಆಯಾ ವೇದಿಕೆ ಮೇಲೆ ಆಯಾ ಸನ್ನಿವೇಶಕ್ಕೆ ತಕ್ಕಂತೆ ಪರಿಣಾಮಕಾರಿಯಾಗಿ ಮಾತನಾಡುವರು ಎಂಬುದು ಈ ಶ್ರೀಗಳ ಬಗ್ಗೆ ಇರುವ ನಂಬಿಕೆ ಮತ್ತು ನಂತರ ಅವರು ಆಡಿದ ಮಾತನ್ನು ನೆನಪಿಡುವುದೂ ಇಲ್ಲ ಎಂದೇ ಬಹಳ ಜನರ ಅನುಭವ.

ನಮ್ಮೆಲ್ಲರ ಊಹೆಯನ್ನು ಸುಳ್ಳು ಮಾಡಿ, ಆಡಿದುದನ್ನು ನೆನಪಿಟ್ಟು ನಡೆದರೆ ಅವರಿಗೆ ನಮ್ಮ ಮುಂಗಡ [ಅಡ್ವಾನ್ಸ್] ಅಭಿನಂದನೆ. ★ ★

ಇಳಕಲ್ ಶ್ರೀಗಳಿಗೆ ಬೆದರಿಕೆ ?

ಬೆಂಗಳೂರಿನಿಂದ ಹೊರಡುವ ಸಂಜೆವಾಣಿ ದಿ. 30–5–94 ರ ಪತ್ರಿಕೆ ಪುಟ 3 ರಲ್ಲಿ ಒಂದು ವಿಷಯ ಪ್ರಕಟವಾಗಿದೆ. "ಚಿತ್ತರಗಿ ಇಳಕಲ್ ಪೀಠಕ್ಕೆ ತಮ್ಮ ಉತ್ತರಾಧಿಕಾರಿಯನ್ನಾಗಿ ಒಬ್ಬ ಸುಸಂಸ್ಕೃತ ದಲಿತ ವ್ಯಕ್ತಿಯನ್ನು ನೇಮಕ ಮಾಡುವುದಾಗಿ ಹೇಳಿಕೆ ನೀಡಿರುವ ಶ್ರೀ ಮಹಾಂತ ಶಿವಯೋಗಿ ಅವರಿಗೆ ಕೆಲ ಸಂಪ್ರದಾಯವಾದಿಗಳು ಬೆದರಿಕೆ ಹಾಕಿರುವ ಹಿನ್ನೆಲೆಯಲ್ಲಿ ಅವರಿಗೆ ಸಂಪೂರ್ಣ ರಕ್ಷಣೆ ನೀಡಬೇಕು ಎಂದು ವಿಧಾನಪರಿಷತ್ತು ಸದಸ್ಯ ಡಾ॥ ಸಿದ್ದಲಿಂಗಯ್ಯ ಅವರು ಸರ್ಕಾರವನ್ನು ಒತ್ತಾಯಪಡಿಸಿದ್ದಾರೆ."

"ಪ್ರಗತಿಪರ ಶಕ್ತಿ ಹಾಗೂ ಬಸವ ತತ್ತ್ವದ ಪ್ರತಿಪಾದಕರಾಗಿರುವ ಸ್ವಾಮೀಜಿಯವರಿಗೆ ಹಿಂಸೆ ನೀಡುತ್ತಿರುವುದು ಖಂಡನೀಯ ಎಂದಿರುವ ಅವರು, ಇದು ತೀವ್ರ ಆತಂಕಕಾರಿ ಎಂದಿದ್ದಾರೆ."

ಬರುಬರುತ್ತಾ ಈ ಪ್ರಸಂಗ ರಾಜಕೀಯ ಸ್ವರೂಪ ತಳೆಯುವಂತೆ ತೋರುತ್ತಿದೆ. ವಾದ–ವಿವಾದ–ಚರ್ಚೆ, ಬಂದು ಪ್ರಶ್ನಿಸುವುದು ಇವು ನಡೆದಿರಬಹುದೇ ವಿನಾ ಇಳಕಲ್ ಶ್ರೀಗಳಿಗೆ ಹಿಂಸೆ ಕೊಡಲು ಯಾರು ಹೋಗುತ್ತಾರೆ ? ಮೂರು ಸಾವಿರ ಜಗದ್ಗುರುಗಳು ಜಂಗಮ ಜಾತಿವಾದದ ಪ್ರತಿಪಾದಕರಾದ್ದರಿಂದ ಅಸಹನೆಯಿಂದ ಪ್ರಶ್ನಿಸಿರಬಹುದು, ಅವರ ಶಿಷ್ಯ ಸಮುದಾಯ ವಾದಿಸಿರಬಹುದು. ಇದು ಎಂದೂ ಇದ್ದುದೇ! ಸತ್ಯ-ಸಂಪ್ರದಾಯಗಳ ಹೋರಾಟವೇ ಹೀಗೆ. ಇದನ್ನು ಹಿಂಸೆ ಎಂದು ಪ್ರಚಾರ ಮಾಡುವುದು ಸೂಕ್ತವಲ್ಲ, ಒಂದು ವೇಳೆ ದೈಹಿಕ ಹಲ್ಲೆ ನಡೆದಿದ್ದರೆ ಮಾತ್ರ ಹಿಂಸೆ ಎನ್ನಬಹುದು. ಮೂಜಗಂ ಅವರಾಗಲೀ ಅವರ ಭಕ್ತರಾಗಲೀ ಇಳಕಲ್ ಶ್ರೀಗಳಿಗೆ ದೈಹಿಕ ಹಿಂಸೆ ಮಾಡುವ ಮಟ್ಟಕ್ಕೆ ಇಳಿದಾರೆ ? ನಾವು ಮಹಿಳಾಗುರು ಪೀಠವನ್ನು ಮಾಡಿದಾಗ ಸಂಪ್ರದಾಯವಾದಿಗಳಿಂದ ತೀವ್ರತರ ಪ್ರತಿಭಟನೆ ಬಂದಿತು. ಅವರ ಪ್ರತಿನಿಧಿಯಾಗಿ ದಿ|| ಬಿ. ಶಿವಮೂರ್ತಿ ಶಾಸ್ತ್ರಿಯವರು ಟೀಕಿಸಿದರು, ಅವರ ಮತ್ತು ನಮ್ಮ ಪತ್ರಿಕೆಗಳಲ್ಲಿ ವಾದ ವಿವಾದ ನಡೆದವು, ಕೆಲವೊಮ್ಮೆ ಪ್ರವಚನ ನಡೆದಾಗ ಕೆಲವರಿಂದ ಆಂತಕಗಳನ್ನೊಡ್ಡುವ ಕುಯುಕ್ತಿ ಸಹ ನಡೆದವು, ಆದರೆ ಹಿಂಸೆ–ಹಲ್ಲೆ ಮುಂತಾಗಿ ನಡೆಯಲಿಲ್ಲ. ಏಕೆಂದರೆ ಲಿಂಗವಂತ ಸಮಾಜದಲ್ಲಿ ಈಗ ಸಂಪ್ರದಾಯವಾದಿಗಳ ಶಕ್ತಿಗಿಂತ ಪ್ರಗತಿಪರ ಚಿಂತನಶೀಲರ ಶಕ್ತಿಯೇ ಹಿರಿದಾಗುತ್ತಿದೆ. ಅದಕ್ಕೆ ಕಾರಣ ಹೆಚ್ಚಾಗಿರುವ ವಚನ ಸಾಹಿತ್ಯದ ಅಧ್ಯಯನ. ಹೀಗಿರುವಾಗ, ಬೆದರಿಕೆ ಒಡ್ಡಿದರು, ಹಿಂಸೆ ಮಾಡಿದರು, ಸರ್ಕಾರಕ್ಕೆ ರಕ್ಷಣೆ ನೀಡಬೇಕು." ಎಂಬ ಸುದ್ದಿ ಹಬ್ಬುವುದು ಸಮಾಜಕ್ಕೆ ಶೋಭಾಯಮಾನವಲ್ಲ. ಇದರಿಂದ ಇಡೀ ಲಿಂಗವಂತ ಸಮಾಜದ ಬಗ್ಗೆಯೇ ಸಂಕುಚಿತ ಮನೋಭಾವದ್ದೆನ್ನುವ ಕಲ್ಪನೆ ಅನ್ಯರಲ್ಲಿ ಹುಟ್ಟಬಹುದು. ಇಂತಹ ಸುಳ್ಳು ಅಥವಾ ಸ್ವಕಲ್ಪಿತ ಸುದ್ದಿಗೆ ತಡೆಹಾಕುವುದು ಒಳ್ಳೆಯದು.

ಇಳಕಲ್ ಪೂಜ್ಯ ಮಹಾಂತಪ್ಪನವರು, ತಾವು ಆಡಿದಂತೆಯೇ ಸಮರ್ಥ ವ್ಯಕ್ತಿಯೊಬ್ಬರನ್ನು ಆಯ್ಕೆ ಮಾಡಿ, ತರಬೇತಿ ನೀಡಿ ಅಧಿಕಾರ ನೀಡಲು ಸಿದ್ಧರಾಗಲಿ. ಆಗ ಇಡೀ ಸಮಾಜವೇ ಅವರ ಹಿಂದೆ ಇರುವುದೆಂಬುದು ಮನವರಿಕೆಯಾಗುವುದು. ಹೊಳೆ ಮೈಲಿ ದೂರ ಇರುವಾಗಲೇ ಕೈಯಲ್ಲಿ ಚಪ್ಪಲಿ ಹಿಡಿದು, ಮುಳ್ಳು ತುಳಿಯುತ್ತಾ ನಡೆಯುವುದೇಕೆ ? !

★★

ಯಾವುದು ಸರಿ ?

ಪಿ. ಚಂದ್ರಶೇಖರಗೌಡ, ಬಸವೇಶ್ವರ ನಗರ, ಬಳ್ಳಾರಿ.

ಪೂಜ್ಯರೇ, ಬಸವ ವಚನ ಸುಧಾದಲ್ಲಿ, 130 ನೆಯ ವಚನ "ಸುಖ ಬಂದರೆ ಪುಣ್ಯದ" ಎಂಬುದಿದೆ, ಅದರ ಪೂರ್ಣ ಪಾಠಾಂತರ ಹೀಗಿದೆ,

ಸುಖ ಬಂದರೆ ಪುಣ್ಯದ ಫಲವೆನ್ನೆನು
ದುಃಖ ಬಂದರೆ ಪಾಪದ ಫಲವೆನ್ನೆನು
ನೀ ಮಾಡಿದೊಡಾಯಿತ್ತೆಂದೆನ್ನೆನು
ಕರ್ಮಕ್ಕೆ ಕರ್ತುವೆ ಕಡೆ ಎಂದೆನ್ನೆನು
ಉದಾಸೀನವಿಡಿದು ಶರಣೆನ್ನೆನು
ಕೂಡಲ ಸಂಗಮದೇವಾ, ನೀ ಮಾಡಿದುಪದೇಶವು ಎನಗೀ ಪರಿಯಲಿ
ಸಂಸಾರವ ಸವೆಯೆ ಬಳಸುವೆನು.

ಇತ್ತೀಚೆಗೆ ಅಂದರೆ 7ನೆಯ ಶರಣ ಮೇಳದಲ್ಲಿ ಬಿಡುಗಡೆಯಾದ 'ಬಸವ ವಚನಾಮೃತ' ಧ್ವನಿ ಸುರುಳಿಯಲ್ಲಿ ಈ ವಚನ ಹೀಗಿದೆ :

ಸುಖ ಬಂದರೆ ಪುಣ್ಯದ ಫಲವೆಂಬೆನು
ದುಃಖ ಬಂದರೆ ಪಾಪದ ಫಲವೆಂಬೆನು
ನೀ ಮಾಡಿದೊಡಾಯಿತ್ತೆಂದೆನ್ನೆನು
ಕರ್ಮಕ್ಕೆ ಕರ್ತೃವೇ ಕಡೆ ಎಂದೆಂಬೆನು
ಉದಾಸೀನವಿಡಿದು ಶರಣೆನ್ನೆನು
ಕೂಡಲ ಸಂಗಮದೇವಾ, ನೀ ಮಾಡಿದುಪದೇಶವು ಎನಗೀ ಪರಿಯಲಿ
ಸಂಸಾರವ ಸವೆಯೆ ಬಳಸುವೆನು

ಇವೆರಡರಲ್ಲಿ ಯಾವುದು ಸರಿ ? ದಯವಿಟ್ಟು ತಿಳಿಸಿರಿ.

ಉ : ಕರ್ನಾಟಕ ವಿಶ್ವವಿದ್ಯಾಲಯದವರು ಪ್ರಕಟಿಸಿದ ಬಸವಣ್ಣನವರ ವಚನಗಳು ಎಂಬ ಪುಸ್ತಕದ ೬೯೪ ನೆಯ ವಚನದಲ್ಲಿರುವಂತೆಯೇ ಸಾಲುಗಳನ್ನು ಬಸವ ವಚನ ಸುಧಾ ಪುಸ್ತಕದಲ್ಲಿ ಪ್ರಕಟಿಸಲಾಗಿದ್ದಿತು. ಪ್ರತಿಸಲ ವಚನ ಓದುವಾಗಲೂ ಈ ವಚನದಲ್ಲಿ ತಾತ್ತ್ವಿಕ ದೋಷ ಇದೆ ಎನ್ನಿಸುತ್ತಿತ್ತು. 'ಎಂಬೆನು'–'ಎನ್ನೆನು' ಈ ಎರಡೂ ವಿರುದ್ಧಾರ್ಥ ಕೊಡುವ ಪದಗಳು. ವಿಶ್ವವಿದ್ಯಾಲಯದ ಪ್ರಕಟಣೆ ಎಂದರೆ ಅಧಿಕೃತ ಪ್ರಕಟಣೆ ಎಂದು ಭಾವಿಸಿ, ಆ ವಾಕ್ಯಗಳಿಗೆ ಕಷ್ಟಪಟ್ಟು ಅರ್ಥ, ವ್ಯಾಖ್ಯಾನ ಮಾಡುತ್ತಿದ್ದೆವು.

ವಚನಗಳು ಸೈದ್ಧಾಂತಿಕ ತುಣುಕು (philosophical bits) ಗಳು. ಮೊದಲ ಸಾಲಿನಿಂದಲೂ ಕಡೆಯವರೆಗೂ ಒಂದೇ ಪರಿಕಲ್ಪನೆ ಕೊಡುತ್ತಾ ಹೋಗುವವು. ಈ ಮೇಲಿನ ವಚನದಲ್ಲೋ ಒಂದು ವಾಕ್ಯ–ಇನ್ನೊಂದು ವಾಕ್ಯದಲ್ಲಿ ಸಾಮರಸ್ಯವೇ

ಇಲ್ಲ. ಎಂಬೆನು-ಎನ್ನೆನು ಎಂಬ ವಿರುದ್ಧಾರ್ಥದ ಪದಗಳನ್ನು ಅರಿಯದೆ ಬಳಸಿದ್ದರಿಂದ ಅರ್ಥಸಂಪತ್ತೇ ಲಭ್ಯವಾಗದಂತಿದೆ.

ಹೀಗೆ ಆಲೋಚಿಸುತ್ತಿರುವಾಗಲೇ ಎಂಬೆನು, ಎನ್ನೆನು ಎಂಬ ಪದಗಳನ್ನು ಸರಿಯಾಗಿ ಬಳಸಿದರೆ ಇಡೀ ವಚನವು ಸೂಕ್ತ ಅರ್ಥವನ್ನು ಕೊಡಬಹುದೆನಿಸಿ ಪ್ರಯೋಗ ಮಾಡಿದಾಗ ಇದರ ಮರ್ಮ ತಿಳಿಯಿತು.

ಈ ವಚನದಲ್ಲಿ ವಿಶ್ವಗುರು ಬಸವಣ್ಣನವರು ಕರ್ಮಸಿದ್ಧಾಂತವನ್ನು ಕುರಿತು ಪ್ರತಿಪಾದನೆ ಮಾಡಿದ್ದಾರೆ. "ದೇವರು ಕರ್ಮಾಧ್ಯಕ್ಷ ; ಅವನು ಮಾನವನ ಸುಖ-ದುಃಖಗಳಿಗೆ ಹೊಣೆಯಲ್ಲ. ಮಾನವನು ತನ್ನ ಸುಖ ದುಃಖಗಳಿಗೆ ತಾನೇ ಹೊಣೆ" ಎಂಬ ತತ್ತ್ವ ಇಲ್ಲಿದೆ.

ಸಾಲು ೧. ವ್ಯಕ್ತಿಯು ಇಂದು ಸುಖವನ್ನು ಅನುಭವಿಸುತ್ತಿದ್ದರೆ ಇದಕ್ಕೆ ಕಾರಣ ಅವನು ಹಿಂದೆ ಮಾಡಿದ ಒಳ್ಳೆಯ ಕರ್ಮಗಳು. ಈ ಕರ್ಮಗಳನ್ನು ಇದೇ ಜನ್ಮದಲ್ಲಿ ಮಾಡಿರಬಹುದು ಅಥವಾ ಹಿಂದಿನ ಜನ್ಮಗಳಲ್ಲಿ ಮಾಡಿರಬಹುದು.

೨. ವ್ಯಕ್ತಿಯು ದುಃಖವನ್ನು ಅನುಭವಿಸುತ್ತಿದ್ದರೆ, ಇದಕ್ಕೆ ಕಾರಣ ಹಿಂದೆ ಮಾಡಿದ ಕೆಟ್ಟ ಕರ್ಮಗಳು.

೩. ತಾನು ಅನುಭವಿಸುತ್ತಿರುವ ಸುಖ-ದುಃಖಗಳಿಗೆ ದೇವರು ಕಾರಣ ಎಂದು ಅನ್ನಬಾರದು.

೪. ಕರ್ಮಗಳಿಗೆಲ್ಲ ಇವನ್ನು ಮಾಡಿರುವ ಕರ್ತೃ (doer) ವಾದ ಜೀವಾತ್ಮನೇ (ವ್ಯಕ್ತಿಯೇ) ಕಾರಣ.

೫. ಆದ್ದರಿಂದ ಏನಾದರೂ ದುಃಖ, ಸಂಕಟ ಒದಗಿದಾಗ ದೇವರ ಬಗ್ಗೆ ಉದಾಸೀನತೆ ತಾಳಬಾರದು. ಯಾವಾಗಲೂ ಒಂದೇ ಬಗೆಯ ಶ್ರದ್ಧೆ, ಶರಣಾಗತಿ, ನಿಷ್ಠೆ ಇರಬೇಕು.

೬. ಈ ಬೋಧೆ (ಉಪದೇಶವನ್ನು) ಯನ್ನು ನೀನೇ ಮಾಡಿರುವೆ ಎಂದು ಕೊಂಡಿದ್ದೇನೆ, ದೇವಾ.

೭. "ನನ್ನ ಐಹಿಕ ಜೀವನವನ್ನು ಸಾರ್ಥಕವಾಗುವಂತೆ ಸವೆಸಿ,ನಿನಗಾಗಿ ಬಳಸುವೆನು." ಎನ್ನುತ್ತಾರೆ ಬಸವಣ್ಣನವರು. ಅತ್ಯಂತ ಮಹತ್ವಪೂರ್ಣ ಸಿದ್ಧಾಂತವೊಂದನ್ನು ಪ್ರತಿಪಾದಿಸುವ ಈ ವಚನವು ಬಸವಣ್ಣನವರ ಶ್ರೇಷ್ಠ ಸಂದೇಶ, ಏನಾದರೂ ದುಃಖ ಎರಗಿದಾಗ ಮನುಷ್ಯ ದೇವರನ್ನು ದೂಷಿಸುವ ಪರಿಪಾಠ ಹೊಂದಿದ್ದಾನೆ. "ದೇವರು ಇದ್ದರೆ ಹೀಗೇಕೆ ಆಗುತ್ತಿತ್ತು. ನಂಬಿದ್ದಕ್ಕೆ ಏನು ಪ್ರಯೋಜನವಾಯಿತು" ಎಂದೆಲ್ಲ ಹಲುಬುತ್ತಾನೆ.

ದೇವನಲ್ಲಿ ಅಖಂಡ ನಿಷ್ಠೆ, ಶ್ರದ್ಧೆ, ಶರಣಾಗತಿ ಹೊಂದಿ ಐಹಿಕ ಜೀವನವನ್ನು-ಶ್ರೀಗಂಧವು ಸವೆದು, ದೀಪವು ಉರಿದು, ಊದಿನ ಕಡ್ಡಿ ಸುಟ್ಟು ಸಾರ್ಥಕವಾಗುವಂತೆ ಬಾಳಬೇಕು. **"ಸವೆಯೆ ಬಳಸುವೆನು"** ಎಂಬ ಪದಸಮುಚ್ಚಯ ಇಲ್ಲಿ ಅತ್ಯಂತ ಶಕ್ತಿಶಾಲಿಯೂ, ಅರ್ಥಗರ್ಭಿತವೂ ಆಗಿದೆ.

—ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಗದಗ

ದಿ. 1-5-1994

ಪೂಜ್ಯ ಮಾತಾಜಿಯವರ ಪಾದಾರವಿಂದಗಳಲ್ಲಿ ದೀರ್ಘದಂಡ ಪ್ರಣಾಮಗಳು.

ಏಪ್ರಿಲ 1994 – "ಕಲ್ಯಾಣ ಕಿರಣ" ದಲ್ಲಿ ತಾವು ಗದುಗಿನ ಪಂಚಾಚಾರ್ಯ ಸೇವಾ ಸಂಘದವರ ಪ್ರಕಟನೆಗೆ ಸೂಕ್ತ ಉತ್ತರ ಕೊಟ್ಟಿರುವದನ್ನು ಅಭಿಮಾನದಿಂದ ಅಭಿನಂದಿಸುತ್ತೇನೆ.

ತಮ್ಮ ಪ್ರತಿಕ್ರಿಯೆಯಲ್ಲಿ [ಪುಟ 47 ರಲ್ಲಿ] ಸಂಚಾರ ವ್ಯವಸ್ಥೆಯ ಅಗತ್ಯವನ್ನು ಅಂಬುಸಿಡರ ಕಾರು ಪೂರೈಸುವಾಗ ತುಂಬಾ ಬೆಲೆಬಾಳುವ ಕಾರುಗಳು, ವಿದೇಶಿ ಕಾರುಗಳ ಮೋಹ ನಮ್ಮ ಸ್ವಾಮಿಗಳಲ್ಲಿ ಹೆಚ್ಚಾಗುತ್ತಿದೆ. ಒಬ್ಬ ಸ್ವಾಮಿಗಳ ಬಳಿ ಇದೆ ಎಂದರೆ ನನ್ನ ಬಳಿ ಏಕೆ ಇರಬಾರದು ? ಎಂಬ ಆಸೆ ಸ್ಪರ್ಧೆ. ಇದಕ್ಕೆ ಪೂರಕವಾಗಿ ಕೆಲವು ಸಿರಿವಂತ ಭಕ್ತರ ಬೆಂಬಲ ! ಈ ಭೌತಿಕ ವಸ್ತುಗಳಿಂದ ವ್ಯಕ್ತಿಯ ಘನತೆ ಏನೂ ಬೆಳೆಯದಷ್ಟೆ".

ಮೇಲಿನ ತಮ್ಮ ಅಭಿಪ್ರಾಯವನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಗದುಗಿನ ತೋಂಟದಾರ್ಯ ಮಠದ ಶ್ರೀಗಳವರು ಶ್ರೀಮಠಕ್ಕೆ ಬಂದು 20 ವರ್ಷಗಳಾದವು. ಮಠಕ್ಕೆ ಒಂದು ಕಾರನ್ನೂ ಅಪೇಕ್ಷಿಸಿದವರಲ್ಲ ! ಬರೀ ಟ್ಯಾಕ್ಸಿಯಲ್ಲಿಯೇ ಸುತ್ತಾಡಿದ್ದಾರೆ.

ತಮಗೆ ತಿಳಿದಂತೆ 12-1-94 ರಂದು ಗುಲಬರ್ಗಾ ವಿಶ್ವವಿದ್ಯಾನಿಲಯ ಅವರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಿತು. ಅದಕ್ಕಾಗಿ ಭಕ್ತರು 'ಗುರುವಂದನೆ'ಯ ಮೂಲಕ ಪೂಜ್ಯರನ್ನು ಅಭಿನಂದಿಸಬೇಕೆಂದು ನಿರ್ಧರಿಸಿದರು. ದಿನಾಂಕ 17-1-94 ರಂದು ಆ ಸಮಾರಂಭ ಶ್ರೀಮಠದಲ್ಲಿ ಶ್ರೀಮತಿ ಶಾಂತಾದೇವಿ ಮಾಳವಾಡ ಹಾಗೂ ಪದ್ಮಶ್ರೀ ಡಾ|| ಆರ್. ಬಿ. ಪಾಟೀಲರ ಆಥಿತ್ಯದಲ್ಲಿ ಸರಳ, ಸುಂದರ, ಭಕ್ತಿಯ, ಹೃದಯದ ಸಿರಿವಂತಿಕೆಯ ವಾತಾವರಣದಲ್ಲಿ ಸಾಂಗವಾಯಿತು. ಪೂಜ್ಯರು ದಿನಾಂಕ 13-1-94 ರಿಂದ ಪ್ರವಾಸದಲ್ಲಿದ್ದವರು 17-1-94 ರ ಸಾಯಂಕಾಲ 6 ಗಂಟೆಗೆ ಶ್ರೀಮಠಕ್ಕೆ ದಯಮಾಡಿಸಿದರು. ಅವರಿಗೆ ಗುರುವಂದನೆಯ ಯಾವ ವಿವರವೂ ಗೊತ್ತಿರಲಿಲ್ಲ.

ಬಡವ ಬಲ್ಲಿದರಿಂದ ಹಿಡಿದು ಎಲ್ಲರೂ ಸ್ವಯಂ ಪ್ರೇರಣೆಯಿಂದ ಹಣ ಕೂಡಿಸಿ ಟ್ಯಾಕ್ಸಿಯಲ್ಲಿಯೇ 20 ವರ್ಷ ಅಡ್ಡಾಡುತ್ತಿರುವ ಗುರುಗಳಿಗೆ ನಮ್ಮ ಕಾಣಿಕೆಯ ದ್ಯೋತಕವಾಗಿ ಅಂದೇ 'ಟಾಟಾ ಎಸ್ಟೇಟ್' ಕಾರನ್ನು ಅರ್ಪಿಸಿದ ಘಟನೆ ಗದುಗಿನ

ಇತಿಹಾಸದಲ್ಲಿಯೇ ಅತ್ಯದ್ಭುತ. ಇದನ್ನು ಗುರುಗಳು ಎಂದೂ ಬಯಸಿದವರಲ್ಲ ! ಇದರಲ್ಲಿ ಮಠದ ಒಂದು ಪೈಸೆಯೂ ಸೇರಿಲ್ಲ, ಹಾಗೂ ಶ್ರೀಮಠ ಕೊಡುವ ಸ್ಥಿತಿಯಲ್ಲಿಲ್ಲ.

ತಮಗೆ ವಸ್ತುಸ್ಥಿತಿ ತಿಳಿದಿರಲಿ ಅನ್ನುವ ಉದ್ದೇಶದಿಂದ ನಮ್ರತೆಯಿಂದ ಈ ವಿಷಯವನ್ನು ತಮ್ಮ ಅವಗಾಹನೆಗಾಗಿ ತಿಳಿಸಿದ್ದೇನೆ.

ಬಸವ ಮಹಾನುಭವರ ಸೇವೆಯನ್ನು ಪೂಜ್ಯರು ಅನೇಕ ಎಡರು ತೊಡರು-ಗಳನ್ನು ಧಿಕ್ಕರಿಸಿ ಪಟ್ಟಭದ್ರ ಪ್ರತಿಷ್ಠರ ವಿರೋಧ ಲೆಕ್ಕಿಸದೆ, ಮುಂದುವರೆಯಿಸಿ ಕೊಂಡು ಧಾವಿಸುತ್ತಿದ್ದಾರೆ.

ನಿಮ್ಮಂಥವರ ಅಭಿಮಾನ ಹಾಗೂ ಒಳ್ಳೆಯದನ್ನು ಮೆಚ್ಚಿಕೊಳ್ಳುವ ಸಹೃದ-ಯತೆ ಹಾಗೂ ನಿಸ್ಪೃಹತೆಯಿಂದ ಪ್ರತಿಕ್ರಿಯೆ ತೋರಿದ್ದು, ನಿಜಕ್ಕೂ ನಮಗೆಲ್ಲ ಅಭಿಮಾನ ತಂದಿದೆ.

ನಿಮ್ಮ ಶ್ರೀ ಚರಣಗಳಿಗೆ ನಮ್ಮ ಭಕ್ತಿಪೂರ್ವಕ ನಮನಗಳು,

ಕೃತಜ್ಞತೆಗಳೊಂದಿಗೆ,
ವಿಶ್ವನಾಥ ಬುಳ್ಳಾ, ಗದಗ.

ಕಲ್ಯಾಣ ಕಿರಣ ಚಂದಾದಾರರ ಗಮನಕ್ಕೆ

ಆತ್ಮೀಯ ಚಂದಾದಾರರೇ,

ಜನವರಿ 1994 ರಿಂದ ಜೂನ್ 94 ರ ವರೆಗೆ ನಾವು ಬಿಡುಗಡೆ ಮಾಡಿದ "ಕಲ್ಯಾಣ ಕಿರಣ" ಮಾಸ ಪತ್ರಿಕೆಯ ವಿವರ ಹೀಗಿದೆ :

1. ಜನವರಿ-1994 - ಮುಖಪುಟ :
   ಕಾವಿ ವರ್ಣದ ಹಿನ್ನೆಲೆಯಲ್ಲಿ ಬಸವಣ್ಣನವರು.
2. ಫೆಬ್ರವರಿ-1994 ಮುಖಪುಟ :
   ಶರಣ ವೃಂದದ ನಡುವೆ ಅಭಯಹಸ್ತದ ಬಸವಣ್ಣನವರು.
3. ಮಾರ್ಚ್-ಏಪ್ರಿಲ್ ಸಂಯುಕ್ತ ಸಂಚಿಕೆ-1994- ಮುಖಪುಟ :
   ಪೂಜ್ಯ ಮಾತಾಜಿಯವರು.
4. ಮೇ-ಜೂನ್ ಸಂಯುಕ್ತ ಸಂಚಿಕೆ-1994-ಮುಖಪುಟ :
   ಐಕ್ಯ ಮಂಟಪದ ಹಿನ್ನೆಲೆಯಲ್ಲಿ ಅಭಯಹಸ್ತದ ಬಸವಣ್ಣನವರು.

ಮೇಲ್ಕಾಣಿಸಿದ ಪತ್ರಿಕೆಗಳಲ್ಲಿ ತಮಗೆ ಯಾವುದಾದರು ತಲುಪಿರದಿದ್ದರೆ, ಕೆಳಗಿನ ವಿಳಾಸಕ್ಕೆ ಚಂದಾಸಂಖ್ಯೆಯೊಂದಿಗೆ ಪತ್ರ ಬರೆದು ತರಿಸಿಕೊಳ್ಳಿರಿ ಎಂದು ಈ ಮೂಲಕ ಸೂಚಿಸುತ್ತೇವೆ.

"ಕಲ್ಯಾಣ ಕಿರಣ" ಮಾಸ ಪತ್ರಿಕೆ,
ಬಸವ ಗಂಗೋತ್ರಿ, ಮೈಸೂರು ರೋಡ್,
ಕುಂಬಳಗೋಡು-560074
ಬೆಂಗಳೂರು ದಕ್ಷಿಣ-ತಾ.

ದೂರವಾಣಿ : 8437234

ಶ್ರೇಷ್ಠ ಸಮತಾವಾದಿ
ವಿಶ್ವಗುರು ಬಸವಣ್ಣನವರು

[ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ಆಗಿ ಹೋಗಿರುವ ವಿಶ್ವಗುರು ಬಸವಣ್ಣನವರು ಶ್ರೇಷ್ಠ ಸಮಾಜ ಸುಧಾರಕರು, ಸಮತಾ-ವಾದಿ, ಕಾರಣಿಕ ಪುರುಷರು, ಪ್ರವಾದಿಗಳು, ಲಿಂಗಾಯತ ಧರ್ಮ ಸ್ಥಾಪಕರು. ವಚನ ಸಾಹಿತ್ಯವೆಂಬ ತಾತ್ತ್ವಿಕ ಸಿರಿವಂತಿಕೆಯುಳ್ಳ ವಿನೂ-ತನ ಸಾಹಿತ್ಯ ಪ್ರಾಕಾರವನ್ನು ಕೊಟ್ಟವರು. ವಚನ ಶಾಸ್ತ್ರದ ಮೂಲಕ ಪ್ರಗತಿಪರ ಧರ್ಮವನ್ನು ಪ್ರತಿಪಾದಿಸಿದ ಇವರು ಜಗತ್ತಿನ ಮೊಟ್ಟಮೊದಲ ಸಮತಾವಾದಿ. ಧಾರ್ಮಿಕ - ಸಾಮಾಜಿಕ - ಆರ್ಥಿಕ ಸಮಾನತೆಗಳನ್ನು ತರಲು ಪ್ರಯತ್ನಿಸಿದ ಬಸವಣ್ಣನವರ 889 ನೆಯ ಜಯಂತಿಯು ಇದೇ ಮೇ 12 ರಂದು ಒದಗಿ ಬಂದಿರುವ ನಿಮಿತ್ತ, ಓದುಗರಿಗೆ ಶುಭಾಶಯ ಸಲ್ಲಿಸುತ್ತ ಈ ವಿಶೇಷ ಲೇಖನವನ್ನು ಪ್ರಕಟಿಸಲಾಗಿದೆ.]

ಭಾರತ ಮಾತೆಯ ಸಿರಿ ಮುಡಿಗೆ ವಿನೂತನ ಧಾರ್ಮಿಕ ಮತ್ತು ಸಾಮಾಜಿಕ ತತ್ತ್ವಗಳನ್ನೊಳಗೊಂಡ ವಚನ ಸಾಹಿತ್ಯದ ಕಿರೀಟವನ್ನು ಏರಿಸಿದ ವಿಶ್ವಗುರು ಬಸವಣ್ಣನವರು ಬದುಕಿ, ಬೆಳಗಿದ್ದು 12 ನೆಯ ಶತಮಾನದಲ್ಲಿ. ಬಸವಣ್ಣನವರ ಪೂರ್ವಜರು ತೆಲುಗು ದೇಶದಿಂದ ವಲಸೆ ಬಂದು ನೆಲೆಸಿದ ಕಮ್ಮೆ ಕುಲದ ಶೈವ ಬ್ರಾಹ್ಮಣರು. ಇವರ ತಂದೆ ಇಂಗಳೇಶ್ವರ ಬಾಗೇವಾಡಿ ಗ್ರಾಮದ ಪ್ರಮುಖ, ಅಗ್ರಹಾರದ ಶಿಖಾಮಣಿ -ಮಾದಿರಾಜ. ತಾಯಿ ಮಾದಲಾಂಬಿಕೆ. ಈ ಕಮ್ಮೆ ಕುಲದ ಬ್ರಾಹ್ಮಣ ದಂಪತಿಗಳಾದ ಮಾದಿರಾಜ-ಮಾದಲಾಂಬಿಕೆಯರ ಸತ್ಸಂಕಲ್ಪ-ಸದ್ವ್ರತಗಳ ಸಾಕಾರ ಮೂರ್ತಿಯಾಗಿ ಬಸವಣ್ಣನವರು ಜನಿಸಿದರು. ಇವರು ಬಾಲ್ಯದಿಂದಲೂ ವಿಚಾರಶೀಲರು, ತೀಕ್ಷ್ಣಮತಿ, ಸೂಕ್ಷ್ಮಗ್ರಾಹಿ. ಪ್ರತಿಯೊಂದು ನಂಬಿಕೆ, ಆಚಾರ-ವಿಚಾರಗಳನ್ನು ಆಳವಾಗಿ ಆಲೋಚಿಸುವ ಚಿಕಿತ್ಸಕ ಬುದ್ಧಿಯುಳ್ಳವರು.

ವೈದಿಕ ಮತಾನುಯಾಯಿಗಳಾದ ಮಾದರಸರ ಏಕೈಕ ಪುತ್ರ ಬಸವಣ್ಣನವರು. ಮನೆತನದ ಸಂಪ್ರದಾಯಕ್ಕೆ ಅನುಗುಣವಾಗಿ ಉಪನಯನವನ್ನು ಮಾಡಿಸಿಕೊಳ್ಳ-ಬೇಕಾಗಿ ಬಂದಾಗ, ತಮ್ಮ ಹಿರಿಯ ಸೋದರಿ ಅಕ್ಕನಾಗಲಾಂಬಿಕೆಗೂ ಉಪನಯನ-ವಾಗಬೇಕೆಂದು ಹಟ ಹಿಡಿದರು. ಸಂಪ್ರದಾಯದಲ್ಲಿ ಇದಕ್ಕೆ ಅವಕಾಶವಿಲ್ಲವೆಂದು ತಂದೆ ಮಾದರಸ ತಿಳಿಸಿದಾಗ ಬಾಲಕ ಬಸವಣ್ಣ ತಾನು ಉಪನಯನ ಮಾಡಿಸಿಕೊಳ್ಳಲು ಸಮ್ಮತಿಸಲಿಲ್ಲ. ವರ್ಣಾಶ್ರಮ ಧರ್ಮದ ಕಟ್ಟುಪಾಡು, ಅದು ಸೃಷ್ಟಿಸಿದ್ದ ಜಾತಿ ವ್ಯವಸ್ಥೆ, ಅದರ ಪರಿಣಾಮವಾದ ಅಸ್ಪೃಶ್ಯತೆ; ಇವುಗಳಿಂದ ಮನನೊಂದಿದ್ದ ಬಸವ-ಣ್ಣನವರು ಹೆತ್ತತಾಯಿತಂದೆಯರನ್ನು, ಹುಟ್ಟಿದ್ದ ಮತವನ್ನು ತೊರೆಯಲು ನಿರ್ಧರಿ-ಸಿದರು. ಹೀಗೆ ತಾಯಿತಂದೆಯರ ಪ್ರೇಮ-ವ್ಯಾಮೋಹ, ಸಂಪ್ರದಾಯದ ಕಟ್ಟು

ಪಾಡುಗಳನ್ನು ತೊರೆದು ಕೂಡಲ ಸಂಗಮಕ್ಷೇತ್ರಕ್ಕೆ ಬಂದರು. ಆಗ ಅದು ಜಾತವೇದ ಮುನಿಗಳೆಂಬ ಜ್ಞಾನಿಗಳ ಮಾರ್ಗದರ್ಶನದಲ್ಲಿ, ಶೈವ ಪಾಶುಪತ ಸಂಪ್ರದಾಯದ ವಿದ್ಯಾಭ್ಯಾಸ ಕೇಂದ್ರವಾಗಿತ್ತು.

ಆಗಮಿಸಿದ ಬಾಲಕನ ಅಧ್ಯಾತ್ಮಿಕ ಹಂಬಲ, ಚಿಕಿತ್ಸಕ ಬುದ್ಧಿ, ಪ್ರತಿಭಾತ್ಮಕ ವ್ಯಕ್ತಿತ್ವ ಕಂಡು ಮಾರುಹೋದ ಜಾತವೇದಮುನಿಗಳು ಬಸವಣ್ಣನಿಗೆ ಕೂಡಲ ಸಂಗಮದ ಗುರುಕುಲದಲ್ಲಿದ್ದು ಅಭ್ಯಾಸ ಮಾಡಲು ಅನುಮತಿ ಕೊಟ್ಟರಷ್ಟೇ ಅಲ್ಲ, ಅರ್ಚಕನಾಗಿ ಸಂಗಮೇಶ್ವರನ ಪೂಜೆ ಮಾಡಲು ಅವಕಾಶ ಕಲ್ಪಿಸಿದರು, ಸುಮಾರು 8–9 ವರ್ಷಗಳ ಬಾಲಕನಾಗಿ ಆಗಮಿಸಿದ ಬಸವಣ್ಣನವರು 21 ರ ತರುಣನಾಗುವ ವರೆಗೆ ವಿದ್ಯಾರ್ಜನೆ ಮಾಡಿದರು. ಜೊತೆಗೆ ವೇದಶಾಸ್ತ್ರ ಪುರಾಣಗಳ ಅಧ್ಯಯನ, ಯೋಗಸಾಧನೆ ಇತ್ಯಾದಿ ಎಲ್ಲ ಕ್ಷೇತ್ರಗಳಲ್ಲೂ ಪರಿಣಿತರಾದರು. ಪ್ರಚಲಿತವಿದ್ದ ಶೈವ ವೈದಿಕ ಎರಡೂ ಧರ್ಮಗಳ ಕೆಲವು ತತ್ತ್ವಗಳು-ನಂಬಿಕೆಗಳು, ಆಚರಣೆಗಳು ಸರಿ ಬಂದರೆ ಮತ್ತೆ ಕೆಲವು ಸರಿಕಾಣಲಿಲ್ಲ. ವೈದಿಕ ಧರ್ಮದ ಜ್ಞಾನಕಾಂಡವು ಮನಸ್ಸನ್ನು ತಣಿಸಿ, ಬುದ್ಧಿಯನ್ನು ಪ್ರಚೋದಿಸಿದರೆ ಯಜ್ಞ–ಯಾಗಾದಿಗಳಿಂದ ಕೂಡಿದ ಕರ್ಮಕಾಂಡವು ಜಿಗುಪ್ಸೆಯನ್ನು ಹುಟ್ಟಿಸಿತು. ಶೈವ ಧರ್ಮದ ಭಕ್ತಿಯು ಸೂಜಿಗಲ್ಲಿನಂತೆ ಸೆಳೆಯುತ್ತಿದ್ದರೆ ದೀಪದೊಳಗಣ ಮಕ್ಕಿ (ಕುಡಿ)ನಂತೆ ಅದರೊಡನೆಯೇ ಮೇಳವಿಸಿದ್ದ ಅತಿರೇಕದ ಭಕ್ತಿ ಮತ್ತು ಮೂಢತೆಗಳು ತಿರಸ್ಕಾರವನ್ನು ಹುಟ್ಟಿಸಿದ್ದವು. ಯಾವ ಒಂದು ವಿಶಿಷ್ಟ ಸಂಪ್ರದಾಯವೂ ಅವರಿಗೆ ಸಂಪೂರ್ಣ ತೃಪ್ತಿಯನ್ನು ನೀಡಲಿಲ್ಲ.

“ನೂತನ ಪಥವೊಂದನ್ನು ಸೃಷ್ಟಿಸಬೇಕು. ಆ ಪಥದ ಅತ್ತಿತ್ತ ಪ್ರಗತಿ ಪರ ತತ್ತ್ವ ಮತ್ತು ಸಮತಾವಾದದ ಸಾಲುಮರಗಳನ್ನು ಬೆಳೆಸಬೇಕು. ಆ ವಿಶ್ವಧರ್ಮದ ಹೆದ್ದಾರಿಯಲ್ಲಿ ಮಾನವಕುಲಕ್ಕೆ ಬೆಳಕು ನೀಡಬಲ್ಲ ಸಂದೇಶಗಳ ದೀಪಸ್ತಂಭಗಳನ್ನು ಇಡಬೇಕು.” ಎಂದು ಕನಸು ಕಾಣುತ್ತ ಸಾಧನೆ ಮಾಡುತ್ತಲಿರುವಾಗಲೇ ಬಸವಣ್ಣನವರ ಹೃದಯದಲ್ಲಿ ಸ್ವತಂತ್ರ ಧರ್ಮವೊಂದು ರೂಪುಗೊಳ್ಳತೊಡಗಿತು. ಒಂದು ದಿವಸ ಪರಮಾತ್ಮನ ದಿವ್ಯದರ್ಶನವಾಗಿ ಕಲ್ಯಾಣಕ್ಕೆ ಹೋಗೆಂಬ ಆದೇಶ ಪ್ರಾಪ್ತಿಯಾಯಿತು. ಅಂದು ವಿಶ್ವಾತ್ಮನ ಕುರುಹಾದ ಇಷ್ಟಲಿಂಗದ ಪರಿಕಲ್ಪನೆ (Concept) ಮೈದಳೆಯಿತು. “ದೇವರು ನಿರಾಕಾರನು, ನಿರ್ಗುಣನು, ನಿರವಯವನು. ಅವನನ್ನು ಮಾನವರ ಪಶುಪಕ್ಷಿ ಪ್ರಾಣಿಗಳ ಆಕಾರದಲ್ಲಿ ಪೂಜಿಸಬಾರದು. ದೇವನ ಕೊಡುಗೆ, ಕಾರ್ಯ ಈ ಬ್ರಹ್ಮಾಂಡ. ಬ್ರಹ್ಮಾಂಡದ ಆಕಾರದಲ್ಲೇ ವಿಶ್ವಾತ್ಮನನ್ನು ಪೂಜಿಸಬೇಕು.” ಎಂಬ ಅರಿವು ಉಂಟಾಗಿ ಬಸವಣ್ಣನವರು ಇಷ್ಟಲಿಂಗವನ್ನು ರೂಪುಗೊಳಿಸಿದರು. ಈ ಗೋಳಾಕಾರವನ್ನು ಹೊರಗಿನ ಕಂತೆಯ ಕವಚಕ್ಕೆ ಕೊಟ್ಟು ಅದರೊಳಗೆ ಪಿಂಡಾಂಡದ ಸಾಕಾರವಾದ ಪಂಚಸೂತ್ರಲಿಂಗವನ್ನಿಟ್ಟು, ‘ದೇವನೊಳಗೆ ಜೀವನಿದ್ದಾನೆ, ಬ್ರಹ್ಮಾಂಡದೊಳಗೆ ಪಿಂಡಾಂಡವಿದೆ.’ ಎಂಬ ಸಂಕೇತದೊಡನೆ ಇಷ್ಟಲಿಂಗವನ್ನು ರೂಪಿಸಿದರು. ಈ ಇಷ್ಟಲಿಂಗವೇ ಬಸವಣ್ಣನವರು ರಚಿಸ ಬಯಸಿದ ಜಾತಿವರ್ಣ

ವರ್ಗ ರಹಿತ ಧರ್ಮಸಹಿತ ಕಲ್ಯಾಣರಾಜ್ಯ ನಿರ್ಮಾಣದ ಕೇಂದ್ರ ಸೂತ್ರವಾಯಿತು. ಚಾಲುಕ್ಯರ ರಾಜಧಾನಿ ಕಲ್ಯಾಣವನ್ನು ಪ್ರವೇಶಿಸಿದ ಬಸವಣ್ಣನವರು ಅನುಭವ ಮಂಟಪ ಎಂಬ ಅಧ್ಯಾತ್ಮಿಕ ವಿಶ್ವವಿದ್ಯಾಲಯವನ್ನು ಕಟ್ಟಿದರು. ಜಾತಿಮತ ಪಂಥಾತೀತವಾಗಿ ಎಲ್ಲರನ್ನೂ ಇಂಬಿಟ್ಟುಕೊಂಡರು, ಸಂಸ್ಕಾರ ನೀಡಿದರು. ಸಮಾನ ಸ್ಥಾನ ಕೊಟ್ಟರು. ಕರಣಿಕರಾಗಿ ರಾಜನ ಆಸ್ಥಾನವನ್ನು ಪ್ರವೇಶಿಸಿದ ಅವರು ಮುಂದೆ ಭಂಡಾರಿಯಾಗಿ, ಅರ್ಥಮಂತ್ರಿಯಾಗಿ, ಪ್ರಧಾನಿಯೂ ಆದರು.

ಅನುಭವ ಮಂಟಪವು ಒಂದು ಅಭೂತಪೂರ್ವ ಸಂಸ್ಥೆ. ಬಸವಣ್ಣನವರು ಹಮ್ಮಿಕೊಂಡ ಕಾರ್ಯವಿಸ್ತಾರದಿಂದಾಗಿ ದೇಶದಾದ್ಯಂತದಿಂದ ಜನರು ಕಲ್ಯಾಣ ಪಟ್ಟಣಕ್ಕೆ ಧಾವಿಸತೊಡಗಿದರು. ವೀರವೈರಾಗ್ಯನಿಧಿ ಅಲ್ಲಮ ಪ್ರಭುದೇವರು ಹೇಳುವಂತೆ :

“ಕಲ್ಯಾಣವೆಂಬ ಪ್ರಣತೆಯಲ್ಲಿ ಭಕ್ತಿರಸವೆಂಬ ತೈಲವನೆರೆದು
ಆಚಾರವೆಂಬ ಬತ್ತಿಯಲ್ಲಿ ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು
ತೊಳಗಿ ಬೆಳಗುತ್ತಿದ್ದಿತಯ್ಯ ಶಿವನ ಪ್ರಕಾಶ
ಆ ಪ್ರಕಾಶದೊಳಗೆ ಒಪ್ಪುತಿದ್ದರಯ್ಯ ಅಸಂಖ್ಯಾತ ಪ್ರಮಥಗಣಂಗಳು.”

ಕಲ್ಯಾಣವೇ ಪ್ರಣತೆಯಾಯಿತು, ಭಕ್ತಿರಸವೇ ತೈಲವಾಯಿತು, ಆಚಾರವೇ ಬತ್ತಿಯಾಯಿತು; ಬಸವಣ್ಣನವರೇ ಜ್ಯೋತಿಯಾಗಿ ಸ್ಪರ್ಶಿಸಲು ಶಿವನ ಪ್ರಕಾಶವು ತೊಳಗಿ ಬೆಳಗತೊಡಗಿತು. ಆ ಬೆಳಕಿನಲ್ಲಿ ತಮ್ಮ ಬಾಳಿನ ಹಣತೆಗಳನ್ನು ಹೊತ್ತಿಸಿಕೊಳ್ಳಲೆಂದು ಅಸಂಖ್ಯಾತ ಸಾಧಕರು ಸಿದ್ಧಪುರುಷರು, ಸತ್ಯದ ಸಾಧಕರು–ಶೋಧಕರು ಕಲ್ಯಾಣಕ್ಕೆ ಧಾವಿಸಿದರು. ಸುಂದರ ಬಂಧುರ ಸಮಾಜ ರಚನೆಯಾಯಿತು.

ವಿಶ್ವಗುರು ಬಸವಣ್ಣನವರು ವ್ಯಕ್ತಿ–ಸಮಾಜಗಳ ಸರ್ವಾಂಗೀಣ ವಿಕಾಸಕ್ಕೆ ಬೇಕಾದ ಎಲ್ಲ ಮೌಲ್ಯಗಳನ್ನು ಪ್ರತಿಪಾದಿಸಿರುವರು. ಈ ಲೇಖನದ ಸೀಮಿತತೆಯ ದೃಷ್ಟಿಯಿಂದ ಆ ಎಲ್ಲ ಅಂಶಗಳನ್ನು ಪ್ರತಿಪಾದಿಸಲು ನಾನು ಹೋಗದೆ ಕೇವಲ ಸಮತಾವಾದದ ಮೇಲೆ ಗಮನವನ್ನು ಕೇಂದ್ರೀಕರಿಸುವೆ. ‘ಸಮತೆ’ ಎಂದರೆ ಏರುಪೇರು, ಮೇಲು–ಕೀಳು ಎಂಬ ಭೇದವಿಲ್ಲದ ಸಮಪಾತಳಿಯ ವ್ಯವಸ್ಥೆ. ಭಾರತೀಯ ಸಮಾಜ ವ್ಯವಸ್ಥೆಯು ಇಂತಹ ಸಮಪಾತಳಿಯ (horziontal) ಮಟ್ಟವನ್ನು ಹೊಂದಿರದೆ ಶ್ರೇಣೀಕೃತ (Ladder type) ವರ್ಗೀಕರಣ ವ್ಯವಸ್ಥೆಯನ್ನು ಹೊಂದಿತ್ತು. ಇದರ ಪರಿಣಾಮವಾಗಿ ನಾಲ್ಕು ವರ್ಣಗಳು, ನೂರಾರು ಸಾವಿರಾರು ಜಾತಿ-ಕುಲಗಳು. ಈ ನಾಲ್ಕು ವರ್ಣಗಳಿಂದ ಹೊರತಾದ ಐದನೆಯ ಪಂಚಮವರ್ಣವೇ ಅಸ್ಪೃಶ್ಯರ ಗುಂಪು. ಈ ಪಂಚಮ ವರ್ಣೀಯರಿಗೆ ಧರ್ಮಸಂಸ್ಕಾರ ಲಭ್ಯವಾಗುತ್ತಿರಲಿಲ್ಲ; ಅಷ್ಟು ಮಾತ್ರವಲ್ಲದೆ ಅವರು ಉಳಿದ ವರ್ಣೀಯರನ್ನು ಸೋಂಕುವಂತೆಯೂ ಇರಲಿಲ್ಲ.

ಈ ಭೇದಕ್ಕೆ ಮುಖ್ಯ ಕಾರಣಗಳು ಅವರು ಹುಟ್ಟಿದ ಜಾತಿ ಮತ್ತು ಕೈಗೊಂಡ ಉದ್ಯೋಗ. ಇಂಥ ವ್ಯವಸ್ಥೆಗೆ ಬಗ್ಗಿಕೊಂಡು ಸವರ್ಣೀಯರು ಅವರ್ಣೀಯರು

ಉಭಯತರೂ ಅದನ್ನು ಪಾಲಿಸುತ್ತಿದ್ದುದಲ್ಲದ ಈ ವ್ಯವಸ್ಥೆಯು ದೇವನಿರ್ಮಿತ-ವೆಂದು ದೃಢವಾಗಿ ನಂಬಿದ್ದರು. ಇಂಥ ಪ್ರಸಂಗದಲ್ಲಿ 'ನಾವು ಹುಟ್ಟುತ್ತಲೇ ಶ್ರೇಷ್ಠರು' ಎಂದು ಹಮ್ಮು ತಳೆದ ಮೇಲ್ವರ್ಣೀಯರನ್ನು 'ನಾವು ಹಿಂದಿನ ಪಾಪದಿಂದಲೇ ಕೀಳುಜಾತಿಯಲ್ಲಿ ಹುಟ್ಟಿದವರು.' ಎಂಬ ಕೀಳರಿಮೆ ಬೆಳೆಸಿಕೊಂಡ ಶೂದ್ರರು ಮತ್ತು ಅಸ್ಪೃಶ್ಯರನ್ನು-ಉಭಯತರನ್ನೂ ತಿದ್ದುವ ಗಂಭೀರ ಕಾರ್ಯವನ್ನು ಬಸವಣ್ಣನವರು ಕೈಗೊಂಡರು.

ಹೊಲೆಗಂಡಲ್ಲದೆ ಪಿಂಡದ ನೆಲೆಗೆ ಆಶ್ರಯವಿಲ್ಲ
ಜಲಬಿಂದುವಿನ ವ್ಯವಹಾರವೊಂದೆ
ಆಸೆ-ಆಮಿಷ-ರೋಷ-ಹರುಷ-ವಿಷಯಾದಿಗಳೆಲ್ಲ ಒಂದೇ,
ಏನನೋದಿ ಏನ ಕೇಳಿ ಏನು ಫಲ ?
ಕುಲಜನೆಂಬುದಕ್ಕೆ ಯಾವುದು ದೃಷ್ಟ ?
ಸಪ್ತಧಾತು ಸಮಪಿಂಡಂ ಸಮಯೋನಿ ಸಮುದ್ಭವಂ
ಆತ್ಮ-ಜೀವ ಸಮಾಯುಕ್ತಂ ವರ್ಣಾನಾಂ ಕಿಂ ಪ್ರಯೋಜನಂ ?
ಕಾಸಿ ಕಮ್ಮಾರನಾದ ಬೀಸಿ ಮಡಿವಾಳನಾದ
ಹಾಸನಿಕ್ಕಿ ಸಾಲಿಗನಾದ ವೇದವನೋದಿ ಹಾರುವನಾದ
ಕರ್ಣದಲಿ ಜನಿಸಿದವರುಂಟೆ ? ಕೂಡಲ ಸಂಗಮದೇವಾ,
ಇದು ಕಾರಣ, ಲಿಂಗಸ್ಥಲವನರಿದವನೇ ಕುಲಜನು. "

ಎಲ್ಲರೂ ಹುಟ್ಟುವುದು ಒಂದೇ ಬಗೆಯಲ್ಲಿಯೆ; ಹುಟ್ಟಿಬಂದಾನಂತರದ ಶಾರೀರಿಕ ಚಟುವಟಿಕೆಗಳೂ ಒಂದೇ; ಆಸೆ-ಆಮಿಷ-ರೋಷ-ಹರುಷ ಮುಂತಾದ ಮಾನಸಿಕ ಚಟುವಟಿಕೆಗಳೂ ಒಂದೇ; ಮಾನವ ಶರೀರಗಳು ಸಪ್ತಧಾತುಗಳಿಂದ ಆಗಿವೆ; ಆತ್ಮ-ದೇಹಗಳ ಸಮಾಗಮ ಎಲ್ಲರಲ್ಲಿಯೂ ಇದೆ. ಅಂದಾಗ ಹುಟ್ಟು ಮತ್ತು ಅದನ್ನು ಬೆನ್ನಿಗೆ ಕಟ್ಟಿಕೊಂಡು ಇರುವ ಜಾತಿ ಇವುಗಳ ಆಧಾರದ ಮೇಲೆ ಮಾನವರನ್ನು ಮೇಲು-ಕೀಳು ಎನ್ನಲು ಬರುವುದೆ ?

ಇನ್ನು ಉದ್ಯೋಗಕ್ಕೆ ಬರೋಣ. ಯಾವ ಕಾಯಕವನ್ನು ಕೀಳು ಎನ್ನಬಹುದು. ಸಮಾಜ-ರಾಷ್ಟ್ರಗಳ ಹಿತಾಸಕ್ತಿಯ ದೃಷ್ಟಿಯಿಂದ ಎಲ್ಲ ಕಾಯಕಗಳೂ ಅತ್ಯಗತ್ಯವೆ ! ಮತ್ತು ವ್ಯಕ್ತಿಯ ಹುಟ್ಟಿಗೂ ಉದ್ಯೋಗಕ್ಕೂ ನಿಕಟ ಸಂಬಂಧ ಇಡಬಾರದು. ಉದ್ಯೋಗದ ಆಯ್ಕೆಯು ವ್ಯಕ್ತಿಯ ಅಭಿರುಚಿ, ಸಾಮರ್ಥ್ಯವನ್ನು ಅವಲಂಬಿಸಿ ಇರಬೇಕೇ ವಿನಾ ಹುಟ್ಟನ್ನಲ್ಲ. ಕಬ್ಬಿಣ ಕಾಸುವವ ಕಮ್ಮಾರ, ಬಟ್ಟೆ ತೊಳೆಯುವವನು ಮಡಿವಾಳ, ಬ್ರಹ್ಮಜ್ಞಾನವನ್ನು ಪಡೆದವನು ಬ್ರಾಹ್ಮಣ-ಹೀಗೆ ಹೆಸರಿಸಬೇಕೇ ವಿನಾ ಕಮ್ಮಾರನ ಮಗ ಕಬ್ಬಿಣವನ್ನೇ ಕಾಸಬೇಕು, ಮಡಿವಾಳನ ಮಗ ಬಟ್ಟೆಯನ್ನೇ ತೊಳೆಯಬೇಕು, ಬ್ರಾಹ್ಮಣನ ಮಗ ಮಾತ್ರ ಬ್ರಹ್ಮಜ್ಞಾನ ಪಡೆಯಬೇಕು ಎನ್ನುವುದು ತಪ್ಪು: ಶ್ರೇಷ್ಠತ್ವವನ್ನು ಪಡೆಯುವ ಸಾಧನ ಜಾತಿಯಲ್ಲ, ಉದ್ಯೋಗ್ಯವಲ್ಲ ನೀತಿ ಮತ್ತು ಪರಮಾತ್ಮನ ಜ್ಞಾನ.

ಹೀಗೆ ಹೇಳಿದ ಬಸವಣ್ಣನವರು ವರ್ಣವ್ಯವಸ್ಥೆಯನ್ನು ನಿರಾಕರಿಸಿ, ಎರಡೇ ವಿಂಗಡಣೆ ಮಾಡಿದರು.

ಉಂಬ ಬಟ್ಟಲು ಬೇರೆ ಕಂಚಲ್ಲ,
ಕಾಂಬ ದರ್ಪಣ ಬೇರೆ ಕಂಚಲ್ಲ
ಭಾಂಡ ಒಂದೇ ಭಾಜನ ಬೇರೆ
ಬೆಳಗೇ ಕನ್ನಡಿ ಎನಿಸಿತ್ತಯ್ಯಾ
ಅರಿದೊಡೆ ಶರಣ ಮರೆದೊಡೆ ಮಾನವ
ಮರೆಯದೆ ಪೂಜಿಸು ಕೂಡಲ ಸಂಗಮನ ।

ಎಲ್ಲರೂ ಹುಟ್ಟುತ್ತ ಮಾನವರು, ಅವರು ಅರಿವಿನಿಂದ ಶರಣರಾಗುವರು. ಕಂಚು ಎಂಬ ಲೋಹದಿಂದಲೇ ಉಣ್ಣುವ ತಟ್ಟೆ ಮತ್ತು ನೋಡುವ ಕನ್ನಡಿ ಎರಡೂ ಸಿದ್ಧವಾ-ಗುವವು, ಬೆಳಗನ್ನು ಪ್ರತಿಫಲಿಸುವ ಶಕ್ತಿಯು ಕಂಚಿಗೆ ಕನ್ನಡಿತನವನ್ನು ತಂದುಕೊ-ಡುವಂತೆ, ಜ್ಞಾನಶಕ್ತಿಯು ಮರೆದ ಮಾನವನನ್ನು ಅರಿವಿನ ಶರಣನನ್ನಾಗಿ ಮಾಡುತ್ತದೆ. ಆದ್ದರಿಂದ ಮರೆದ ಮಾನವ ಅರಿದ ಶರಣನಾಗಬೇಕಾದರೆ ಪರಮಾತ್ಮನ ಉಪಾಸನೆ-ಯನ್ನು ಮಾಡಬೇಕು,ಅವನ ಕೃಪೆಯನ್ನು ಪಡೆಯಬೇಕು. ಹೀಗೆ ಹೇಳಿ ಬಸವಣ್ಣನವರು ಸುಮ್ಮನೇ ಕೂರದೆ ಸಂಸ್ಕಾರ ಪಡೆಯುವ ಸದವಕಾಶವನ್ನು ಎಲ್ಲರಿಗೂ ಕೊಟ್ಟು ಶೋಷಿತರಿಗೆ ಧಾರ್ಮಿಕ ಸಮಾನತೆಯನ್ನು ಒದಗಿಸಿಕೊಟ್ಟರು.

ಬಸವಣ್ಣನವರ ಸಮತಾವಾದದ ಸಂಸ್ಕಾರಕ್ಕೆ ಮಹಿಳಾವರ್ಗವೂ ಒಳಗಾಗಿ ಅಕ್ಕಮಹಾದೇವಿಯಂಥ ಉನ್ನತ ಮಟ್ಟದ ವಿರಾಗಿಣಿ ರೂಪುಗೊಂಡಳು. ಆಕೆ ಶ್ರೇಷ್ಠ ತತ್ತ್ವಜ್ಞಾನಿಯೂ, ಕವಯಿತ್ರಿಯೂ ಆಗಿ ಅನುಭವ ಮಂಟಪದಲ್ಲಿ ಗಣ್ಯ ಸ್ಥಾನವನ್ನು ಪಡೆದಳು.

ದೀಕ್ಷಾ ಸಂಸ್ಕಾರವನ್ನು ಪಡೆದ ಬಳಿಕ ದೀಕ್ಷಿತರ ಪೂರ್ವಾಶ್ರಮ ನಿರಸನವಾಗುವ ಕಾರಣ ಅವರಲ್ಲಿ ಜಾತಿಯನ್ನಾಗಲೀ, ಕುಲವನ್ನಾಗಲೀ ಹುಡುಕಬಾರದು ಮತ್ತು ಅವನ ಉದ್ಯೋಗವನ್ನು ಹಿಡಿದು ಮೇಲು ಕೀಳು ಎನ್ನಬಾರದು ಎಂದು ಸಂಪೂರ್ಣ ಸಮಾನತೆಯನ್ನು ಬಸವಣ್ಣನವರು ಬೋಧಿಸಿದರು.

ದೇವ ಸಹಿತ ಭಕ್ತ ಮನೆಗೆ ಬಂದರೆ
ಕಾಯಕವಾವುದೆಂದು ಬೆಸಗೊಂಡರೆ,
ನಿಮ್ಮಾಣೆ ನಿಮ್ಮ ಪ್ರಮಥರಾಣೆ, ತಲೆದಂಡ । ತಲೆದಂಡ
ಕೂಡಲ ಸಂಗಮದೇವಾ, ಭಕ್ತರಲ್ಲಿ ಕುಲವನರಸಿದರೆ !
ನಿಮ್ಮ ರಾಣಿವಾಸದಾಣೆ.

ಬಸವಣ್ಣನವರು ಈ ಜಗತ್ತನ್ನು ಮಾಯೆ ಎಂದಾಗಲೀ, ಮಿಥ್ಯೆ ಎಂದಾಗಲಿ ಕರೆಯಲಿಲ್ಲ. ಈ ಜಗತ್ತನ್ನು, ಜೀವನವನ್ನು, ದೇಹವನ್ನು ಗೌರವಭಾವದಿಂದ ಕಂಡು ಇವು ದೇವರನ್ನು ಒಲಿಸುವ ಸಾಧನಗಳು ಎಂದು ಭಾವಿಸಿದರು.

* ಮರ್ತ್ಯ ಲೋಕವೆಂಬುದು ಕರ್ತಾರನ ಕಮ್ಮಟ
* ಕೂಡಲ ಸಂಗಮ ದೇವರನು ಒಲಿಸಲು ಬಂದ
  ಪ್ರಸಾದ ಕಾಯವಿದನ್ನು ಕೆಡಿಸಲಾಗದು.

ಈ ಜೀವನವು ಯುದ್ಧಭೂಮಿಯಂತೆ. ಜೀವಾತ್ಮನು ಸಶಕ್ತಯೋಧನಂತೆ ವೀರಯೋಧನು ಹೇಗೆ ಪಲಾಯನ ಮಾಡುವುದಿಲ್ಲವೋ ಹಾಗೆ ನಿಜ ಭಕ್ತನು ಬಾಳಿನ ಸಂಕಷ್ಟಗಳಿಗೆ ಬೆನ್ನುತೋರಿಸಬಾರದು ; ಕೆಲವೊಮ್ಮೆ ಲೋಕದ ಜನರು ಕಷ್ಟ–ನಿಂದೆಗಳನ್ನು ಹೇರುವುದತ್ತಲಿರಲಿ, ಸ್ವತಃ ದೇವನೆ ತನ್ನ ಭಕ್ತರ ಸ್ಥೈರ್ಯ ಪರೀಕ್ಷೆಗಾಗಿ ಕಷ್ಟಗಳನ್ನು ಒಡ್ಡುವುದುಂಟು,

ಜಂಬೂದ್ವೀಪ ನವಖಂಡ ಪೃಥ್ವಿಯೊಳಗೆ
ಕೇಳಿರಯ್ಯಾ ಎರಡಾಳಿನ ಭಾಷೆಯ.
ಕೊಲುವೆನೆಂಬ ಭಾಷೆ ದೇವನದು
ಗೆಲುವೆನೆಂಬ ಭಾಷೆ ಭಕ್ತನದು
ಸತ್ಯವೆಂಬ ಕೂರಲಗನೇ ತಳೆದುಕೊಂಡು
ಸದ್ಭಕ್ತರು ಗೆದ್ದರು ಕಾಣಾ ಕೂಡಲ ಸಂಗಮದೇವಾ ॥

ಇಂಥ ದೇವ–ಭಕ್ತರ ಹೋರಾಟದಲ್ಲಿ ಅಂತಿಮ ಗೆಲುವು ಭಕ್ತನದಾದರೆ ಸೋಲು ದೇವನದು ! ಏಕೆಂದರೆ ಭಕ್ತನ ಕೈಯಲ್ಲಿ ಸತ್ಯ ಎಂಬ ಶಸ್ತ್ರವಿದೆ !

ಹೀಗೆ ಸ್ವಭಾವತಃ ಹೋರಾಟಗಾರರಾದ ಬಸವಣ್ಣನವರು ಸುಂದರ ಬಂಧುರ ಸಮಾಜವನ್ನು ಕಟ್ಟಲು ಒಂದು ದೊಡ್ಡ ಚಳುವಳಿಯನ್ನೆ ಕೈಗೊಂಡರು. ಸುಮಾರು 36 ವರ್ಷ ಕಾಲ ಅನುಭವ ಮಂಟಪ ನಡೆಸಿ, 63 ವರ್ಷ ಕಾಲ ಜೀವಿಸಿದ್ದ ಬಸವಣ್ಣನವರು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿಯಂದು ಉರಿಯುಂಡ ಕರ್ಪೂರದಂತೆ, ಸಮುದ್ರವನ್ನು ಬೆರೆದ ನದಿಯಂತೆ ದೇವನಲ್ಲಿ ಒಡವೆರೆದು ಒಂದಾದರು. ಶ್ರೇಷ್ಠ ಸಮಾಜ ಸುಧಾರಕರಾಗಿ ನಂತರ ಬಂದ ಎಲ್ಲ ಸುಧಾರಕರಿಗಾಗಿ ಬಸವಣ್ಣನವರು ಉತ್ತಮ ಮಾದರಿಯಾಗಿ ನಿಲ್ಲುವರು.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬಸವ ಮಂಟಪ, 2035, 2ನೇ ಬ್ಲಾಕು,
ರಾಜಾಜಿನಗರ, ಬೆಂಗಳೂರು–560010

30–4–1994

ಧರ್ಮಗ್ರಂಥ ನಿಧಿ : 1991-00 ... ಸಲ್ಲಿಸಿದವರು

(1992 ರ ನವಂಬರ್ ಸಂಚಿಕೆಯಿಂದ ಮುಂದುವರಿದುದು)

ಕ್ರ. ಸಂ	ಹೆಸರು	ಊರು
	ಶರಣರುಗಳಾದ :	
474	ಬಾಬಣ್ಣ ನಾಗಪ್ಪ ಶಿವಮೂರ್ತಿ	ಹಳ್ಯಾಳ
475	ಟಿ. ಎಸ್. ನಾಗರತ್ನಮ್ಮ	ಜಯನಗರ
476	ಸಂಗಣ್ಣ ಪರಶಿವಪ್ಪ ಗೋಳಾ	ವಿಠಲನಗರ
477	ದೇವಪ್ಪ ಮರಿಗೆಪ್ಪ ಭಾಸಿಂಗಿ	ಅಥಣಿ
478	ಎನ್. ವೀರಭದ್ರಯ್ಯ	ಅರಸೀಕೆರೆ
479	ಕೆ. ಕೆ. ವೇಣುಗೋಪಾಲ	"
480	ಎಂ. ಪುಟ್ಟಮ್ಮ & ಮಕ್ಕಳು	ಸುಭಾಷ್‌ನಗರ
481	ಟಿ. ಎಸ್. ಚನ್ನವೀರಯ್ಯನವರು	ಅರಸೀಕೆರೆ
482	ಗುಪ್ತಕಾಣಿಕೆ	ಲಕ್ಷ್ಮಿಪುರಂ
483	ಓ. ಎಂ. ಅಂದಾನಪ್ಪ	"
484	ಸರಸ್ವತಮ್ಮ. ಬಿ. ಮಹಂತೇಶ	ಅರಸೀಕೆರೆ
488	ಡಾ॥ ಬಿ. ರೇಣುಕಾ	"
486	ಆರ್. ಸಿ ಸದಾಶಿವನ್	ಸಕಲೇಶಪುರ
487	ಬಿ. ಎಚ್. ಶಶಿಕಲಾ ಗುರುಮೂರ್ತಿ	ಹಾಸನ
488	ಎ. ಸಿದ್ದೇಗೌಡ	"
489	ಪ್ರೇಮ ಸ್ವರೂಪ	"
490	ಎಸ್. ಗುರುಮೂರ್ತಿ	"
491	ಬಿ. ಎಸ್. ಗುರುನಾಥ	ಅನವಟ್ಟಿ
492	ತಾರಾಮತಿ ಡಿ. ನಾರಾಯಣಪುರ	ಈಚಲಕರಂಜಿ
493	ಅಪ್ಪಾಸಾಹೇಬ ನಾಗೋರೆ	ಜತ್
494	ಮಹಾದೇವಿ ಬಾಳಾಸಾಹೇಬ ಮಲ್ಲಪ್ಪ ಕಟವೆ	ಮಂಗಳವಾರ ಪೇಟೆ
495	ಸಿದ್ಧಪ್ಪ ಗುರುಪಾದಪ್ಪ ಬಿಜ್ಜರಗಿ	ಕೆ. ಎಚ್. ನಗರ
496	ಲಿಂಗೇಗೌಡ	ಸುತಗಟ್ಟಿ
497	ಲಿಂ॥ ರುದ್ರಪ್ಪ ಚನ್ನಬಸಪ್ಪ ದೊಡ್ಮನಿ	ಕುರಟ್ಟಿಪೇಟೆ
498	ನೀಲಕಂಠಪ್ಪ ಗದಿಗೆಪ್ಪ ಜಾಡಗೌಡರ	ಬಸವೇಶ್ವರ ನಗರ
499	ಚಂದ್ರಶೇಖರ ವಿರುಪಾಕ್ಷಪ್ಪ ಬಡಿಗಣ್ಣವರ	ಗದಗ
500	ವೀರನಗೌಡ ಕಲ್ಲನಗೌಡಾ ಕರೇಗೌಡರ	ಬಸವೇಶ್ವರ ನಗರ
501	ಶಂಕರಪ್ಪ ಹಾಲಪ್ಪ ಕಡಸ	ಗದಗ
502	ಸಂಗಪ್ಪ ಮಲ್ಲಪ್ಪ ಸಂಕಮ್ಮನವರ	ಗದಗ
503	ಬಸವರಾಜ ಯಲ್ಲಪ್ಪ ಸುಗ್ಗಿ	"
504	ಈಶ್ವರಪ್ಪ ಅಡಿವೆಪ್ಪ ಮುನವಳ್ಳಿ	ಬೆಟಗೇರಿ
505	ಕಾಶಪ್ಪ ವೀರಪ್ಪ ಕುಂದಗೋಳ	

506	ವೀರಬಸಪ್ಪ [illegible]	ಚಿಕ್ಕೊಪ್ಪ
507	ವೀರಪ್ಪ ಪರಪ್ಪ ಮುಳ್ಳಾಳ	ಗದಗ
508	ಅಂದಾನಗೌಡ ರುದ್ರಗೌಡ ರಬ್ಬನಗೌಡರ	"
509	ಸಿದ್ರಾಮಪ್ಪ ಬಾಪುಗೌಡ ಬಿರಾದಾರ	ಶಹಾಪೇಟೆ
510	ಸಿದಾಮಪ್ಪ ಈರಪ್ಪ ಚೌಧರಿ	ಬೆಳಗಾಂ
511	ಶಂಕರಗೌಡಾ ಪಾಟೀಲ	ಅಶೋಕ ನಗರ
512	ವೀರೇಂದ್ರ. ಎಸ್. ಪಾಟೀಲ	ಬೆಳಗಾಂ
513	ರಾಮಣ್ಣ ಪರಪ್ಪ ಅವರಾಜ	ಮಹಾಂತೇಶ ನಗರ
514	ನಮಸಯ್ಯಾ ರಾಚಯ್ಯ ಹಿರೇಮಠ	ಬೆಳಗಾಂ
515	ಗುರುಸಿದ್ಧಪ್ಪ ಗದಿಗೆಪ್ಪ ಸಾಲಿಮನಿ	ಅಶೋಕ ನಗರ
516	ಜಗದೀಶ್ವರ ಶಿವಬಸಪ್ಪ ಜಕಾತಿ	ಮಹಾಂತೇಶ ನಗರ
517	ಡಾ॥ ಈಶ್ವರ ಶಿವಲಿಂಗಪ್ಪ ಇಂಗಳಗಿ	ಬೆಳಗಾಂ
518	ಪ್ರಭುದೇವಪ್ಪ ಚಿನ್ನಗುಡ್ಡಪ್ಪ ಮುಾಗಿ	ಮಹಾತೇಶನಗರ
519	ದಾನೇಶ್ವರಿ ಚನ್ನಪ್ಪ ಶಿವಪೂಜೆ	ಬೆಳಗಾಂ
520	ಗಂಗವ್ವಾ ಗುರುಲಿಂಗಪ್ಪ ಮೊಳಗಿ	ವಿಶ್ವೇಶ್ವರನಗರ
521	ಕಮಲಕ್ಕ ಬಿ. ಶಂಕರಾನಂದ	ಬೆಳಗಾಂ
522	ಪುಷ್ಪಾ ಲಿಂಗನಗೌಡ ಪಾಟೀಲ	"
523	ಪಾರ್ವತವ್ವ ಮೆಳವಂಕಿ	ಟಿಳಕವಾಡಿ
524	ಶಂಕರ ಬಸವಲಿಂಗಪ್ಪ ಕೊಳಕಿ	ಬೆಳಗಾಂ
525	ಟಿ. ಎಸ್. ಮಲ್ಲಪ್ಪ	"
526	ಶಾಂತವ್ವ ಚಂದ್ರಶೇಖರ ಹೊಂಡದ ಕಟ್ಟಿ	ಶಿವಬಸವನಗರ
527	ಸದಾನಂದ ವಿರುಪಾಕ್ಷಪ್ಪ ಕಿತ್ತೂರು	ಬಸವನಗರ
528	ಶೋಭಾವತಿ ವಿರುಪಾಕ್ಷಪ್ಪ ರೋಂಡಾ	ಸಂಗಮೇಶನಗರ
529	ಮಹಾದೇವ ಬಸವರಾಜ ಅಂಗಡಿ	ಬೈಲಹೊಂಗಲ
530	ಕಲ್ಲಗೌಡಾ ರಾಮಗೌಡ ಪಾಟೀಲ	ಮಹಾಂತೇಶನಗರ
531	ಅಣ್ಣಾ ಸಾಹೇಬ ಪೀರಗೌಡ ಪಾಟೀಲ	ಬಸವನಗರ
532	ಅಶೋಕ ಈಶ್ವರಪ್ಪ ಸೌದತ್ತಿ	ಇಟಗಿ
533	ಐ. ವಿ. ಜತ್ತಿ	ಸಂಗಮೇಶನಗರ
534	ಮಹದೇವಪ್ಪ, ಬಸವಂತಪ್ಪ ತೇಲಸಂಗ	ಬೆಳಗಾಂ
535	ಬಿ. ವಿ. ಕಟ್ಟಿ	ಹಿಂದವಾಡಿ
536	ಶ್ರೀಶೈಲಪ್ಪ ಗದಿಗೆಪ್ಪ ಜವಳಿ	ಬೆಳಗಾಂ
537	ರಾಮಚಂದ್ರ ಬಸಪ್ಪ ಬಿಕಾಜೆ	"
538	ಅನ್ನಪೂರ್ಣಸಿದ್ಧಪ್ಪ ದೇಸಾಯಿ	"
539	ಶಿವರಾಯಿ ಶಿವಪ್ಪ ಅಗಸಗಿ	"
540	ಮೆ॥ ಲಕ್ಷ್ಮೀದೇವಿ ಟೆಕ್ಸ್‌ಟೈಲ್ಸ್	ಎಂ. ವಡಗಾಂ
541	ವೀರಯ್ಯ ಅದೃಶ್ಯಯ್ಯ ಅದೃಶಪ್ಪನವರ	ನೆಹರೂನಗರ
542	ಪಾರ್ವತಿ ವೀರಪ್ಪ ಉಪ್ಪಿನ	ಮಹಾಂತೇಶನಗರ

543	ಶ್ರೀ ಮಲ್ಲಿಕಾರ್ಜುನ ಪಾಟೀಲ	ರಾಯಚೂರು
544	ಸಾವುಕಾರ ವೀರಣ್ಣ	ಮಟಮಾರಿ
545	ಬಸವಾರೆಡ್ಡಿ ಅಯ್ಯಪ್ಪ ಕುಣಿಗಲ್	ರಾಯಚೂರು
546	ಅಮರ ಗುಂಡಯ್ಯ ಸ್ವಾಮಿ	"
547	ಪಿ. ಸೋಮಶೇಖರಪ್ಪಾ	"
548	ಮಲ್ಲಪ್ಪ ಪುಲಾರಿ	"
549	ಶೇಷಪ್ಪ ತಿಪ್ಪಣ್ಣ ಪತ್ತಾರ	"
550	ಶಿವಶಂಕರರಾಯ ನಾಡಗೌಡ್ರ	"
551	ತಾಯಣ್ಣ, ಕೆ.ಇ.ಬಿ	"
552	ಎಚ್. ಶಿವರಾಜ ಪಾಟೀಲ	"
553	ಮಲ್ಲಾಪುರದ ಬಸವರಾಜಪ್ಪ	"

ಈ ಎಲ್ಲ ದಾಸೋಹಿಗಳಿಗೆ ಮಂತ್ರಪುರುಷ ಬಸವಣ್ಣನವರು ಆಯುರಾರೋಗ್ಯ ಭಾಗ್ಯ ಸಕಲ ಸಂಪದ ಅನುಗ್ರಹಿಸಲೆಂದು ಹಾರೈಸುತ್ತೇವೆ.

–ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಬಸವ ಧರ್ಮ ಪೀಠದ ಕಟ್ಟಡ ನಿಧಿಗೆ
ದೇಣಿಗೆ ಮತ್ತು ದೇಣಿಗೆಯ ವಾಗ್ದಾನ ನೀಡಿದವರು

(ಎಪ್ರಿಲ್ ಸಂಚಿಕೆಯಿಂದ ಮುಂದುವರಿದುದು)

ಶರಣರುಗಳಾದ :

1	ಸುರೇಖಾ W/o ಡಾ॥ ಮಲ್ಲಿನಾಥ ಶರಣಪ್ಪ ಮಲಂಗ, ಉಮರ್ಗಾ	100000–00
2	ವೀರಾಬಾಯಿ ಸಂಗಪ್ಪ ಯೇಳಾಪುರೆ, ಉಮರ್ಗಾ	50000–00
3	ಲಿಂಗಬಸಪ್ಪ ಅಂಗಡಿ, ರಾಯಚೂರು	50000–00
4	ವೀರಶೈವ–ಲಿಂಗಾಯತ ಸಮಾಜ, ಉಮರ್ಗಾ	11000–00
5	ಸಾವುಕಾರ ವೀರಣ್ಣ, ಮಟಮಾರಿ	10001–00
6	ಶಶಿಕಲಾ ಸಂಗಪ್ಪ ಅಂಕಲಕೋಟಿ, ಉಮರ್ಗಾ	6001–00
7	ಮಹಾನಂದ ಡಾ॥ ಎಸ್. ವಿ. ಮಾಶಾಳಕರ, ಉಮರ್ಗಾ	5001–00
8	ಸುಶೀಲಾಬಾಯಿ ನಾಗನಾಥ ಯೇಳಾಪುರೆ, ಉಮರ್ಗಾ	5001–00
9	ಮುಂದಕಲ್ ರಾಚನಗೌಡ ರಾಯಚೂರು	5000–00
10	ಗಣೇಕಲ ಬಂಡಿ– ಹಂಪನಗೌಡ ತಂದೆ ಶರಣಪ್ಪಗೌಡ, ರಾಯಚೂರು	5000–00
11	ಗಂಜಳ್ಳಿ ಶೆಟ್ಟಿ ವೀರಭದ್ರಪ್ಪ ಶರಣಪ್ಪ, ರಾಯಚೂರು	5001–00

12	ಶ್ರೀ ಮಲ್ಲಿಕಾರ್ಜುನ ಟ್ರೇಡರ್ಸ್	ರಾಯಚೂರು	5001-00
13	ಇಟಗಿ ಸಿದ್ಧನಗೌಡ ಮಲ್ಲಿಕಾರ್ಜುನಗೌಡ,	ರಾಯಚೂರು	5000-00
14	ಜಗದೇವಿ ಅನಂತರಾವ್ ಕಾರ್ತಿ,	ಉಮರ್ಗಾ	4005-00
15	H. ಶರಣಪ್ಪ ಮತ್ತು ಮಕ್ಕಳು,	ರಾಯಚೂರು	1011-00
16	ವೆಂಕಟಾಪುರ ಬಸವರಾಜಪ್ಪ ವೀರಬಸಪ್ಪ,	ರಾಯಚೂರು	1001-00

ಬಸವ ಧರ್ಮ ಪೀಠದ ದಾಸೋಹ ನಿಧಿಗೆ 1111—00 ರೂ. ದಾಸೋಹಿಗಳು

ಶರಣರುಗಳಾದ :

ಕ್ರ. ಸಂಖ್ಯೆ	ಹೆಸರು	ಊರು
1594	ರಾಚಪ್ಪ ಕಲ್ಲೂರು	ಗುಲ್ಬರ್ಗಾ
1595	ಶಿವಬಸಪ್ಪ ಬಸವಂತಪ್ಪ ದಳಗಡೆ	ಉಮರ್ಗಾ
1596	ಸಿ. ಎನ್. ವೈದ್ಯ	ಉಮರ್ಗಾ
1597	ಅಶೋಕ ಪಂಚಪ್ಪ ದಂಡಿಗೆ	"
1598	ಬಸವರಾಜ ಗುರುಸಿದ್ದಪ್ಪ ಕೋಲಾರ	ಮೋರಟಗಿ
1599	ಬಸವರಾಜ ಗುರುಬಸಪ್ಪ ದುಪ್ಪಲ್ಲಿ	ಉಮರ್ಗಾ
1600	ರವೀಂದ್ರ ವೀರಭದ್ರಪ್ಪ ಢಂಗೆ	ಉಮರ್ಗಾ
1601	ವಿರುಪಾಕ್ಷಿ ನೀಲಕಂಠಯ್ಯ ಸ್ವಾಮಿ	"
1602	ಗುರುನಾಥ ಶಂಕ್ರಪ್ಪ ಪರಮ	ಮಂಟಾಳ
1603	ನಾಗಮ್ಮ ರಾಮಚಂದ್ರಪ್ಪ ಶೇಟಗಾರ	ಉಮರ್ಗಾ
1604	ಜಗದೇವಿಬಾಯಿ ಕರಬಸಪ್ಪ ಕರಪೆ	"
1605	ಸುರೇಶ ಮಲಶೆಟ್ಟಿ ಪಾಟೀಲ (ಅಚಲೇರಕರ್)	"
1606	ಸುಭಾಷ್ ಶಿವಲಿಂಗಪ್ಪ ಮಾಶಾಳಕರ	"
1607	ವಿಲಾಸ ಚನ್ನಪ್ಪ ಪತಗೆ	"
1608	ರೇವಣಪ್ಪ ಸಿದ್ದಪ್ಪ ಗುಡ್ಡಾ	"
1609	ದಾನಮ್ಮ ವೀರಯ್ಯ ಸ್ವಾಮಿ	"
1610	ಮಹಾದೇವಿ ಬಾಯಿ ವಿಶ್ವನಾಥಪ್ಪ ಯೇಳಾಪುರೆ	"
1611	ನಾಗನಾಥ ರೇವಣಸಿದ್ದಪ್ಪ ಕುಂಬಾರ	"
1612	ಮಲ್ಲಿನಾಥ ಶರಣಯ್ಯ ಸ್ವಾಮಿ	ಉಮರ್ಗಾ
1613	ಸುನಂದ ವಿಜಯಾ ಪಾಟೀಲ	"
1614	ಮಹಾದೇವಪ್ಪ ಶಿವಪ್ಪ ದಳಗಡೆ	"
1615	ಗುಪ್ತದಾನ	"

1616	ರೇವಣಪ್ಪಾ ಬೆಣ್ಣೆ	ಚಟನಹಳ್ಳಿ
1617	ಶಂಕ್ರಪ್ಪಾ ಬಿರಾದರ	ಚಟನಹಳ್ಳಿ
1618	ಪ್ರಭುಲಿಂಗ ಮಾಣಿಕಪ್ಪಾ ಬೆಣ್ಣೆ	ಚಟನಹಳ್ಳಿ
1619	ಸಾಹುಕಾರ ವೀರಣ್ಣ	ಮಟಮಾರಿ
1620	ಬಸವಾರೆಡ್ಡಿ ಅಯ್ಯಪ್ಪಾ ಕುಣಿಗಲ್	ರಾಯಚೂರು
1621	ವಿಶ್ವನಾಥ	ರಾಯಚೂರು
1622	ಅಮರ ಗುಂಡಯ್ಯ ಸ್ವಾಮಿ	ರಾಯಚೂರು
1623	ಚೆನ್ನಬಸಪ್ಪ ಚೆನ್ನಪ್ಪ ಆದಿ	ರಾಯಚೂರು
1624	ಆದಿಚಂದ್ರಶೇಖರ ಬಸಣ್ಣ	ರಾಯಚೂರು
1625	ಮಲ್ಲಪ್ಪಾ ಪುಲಾರಿ	ರಾಯಚೂರು
1626	ಮಹಾಂತಯ್ಯ ಸ್ವಾಮಿ	ರಾಯಚೂರು
1627	T. ಅಜ್ಜಪ್ಪ	ಕೊಟ್ಟೂರು
1628	ಶರಣಮ್ಮ R. S. ಪಾಟೀಲ	ರಾಯಚೂರು
1629	K. ಶಿವಶಂಕರ	ರಾಯಚೂರು
1630	ಕೆ. ಎಂ. ಅಸರೆಡ್ಡಿ ಆ್ಯಂಡ್ ಸನ್ಸ್	ರಾಯಚೂರು
1631	ಸೂಗಮ್ಮ N. ಮಲ್ಲಿನಾಥ	ಅಜಾದನಗರ
1632	ಸುಮಂಗಲಮ್ಮ ದುರ್ಗಾ	ರಾಯಚೂರು
1633	S. ಗುರಣ್ಣ (ಎಣ್ಣೆಗಾಣ)	ರಾಯಚೂರು
1634	ಡಿ. ರಾಮಕೃಷ್ಣ	ರಾಯಚೂರು
1635	S. ಚಂದ್ರಶೇಖರ, ಪಟೇಲ ಸಿ. ವಿ.	ರಾಯಚೂರು
1636	H. G. ಕುಂಬಾರ	ಮುದ್ದೇಬಿಹಾಳ
1637	ಕುರುಬತ ವೆಂಕಣ್ಣ	ಸಮುದ್ರ
1638	G. ಪಂಪಣ್ಣ	ದೇವದುರ್ಗ

ಆಯತದಲ್ಲಿ ಪೂರ್ವಾಚಾರಿಯ ಕಂಡೆ
ಸ್ವಾಯತದಲ್ಲಿ ಪೂರ್ವಾಚಾರಿಯ ಕಂಡೆ
ಸನ್ನಿಹಿತದಲ್ಲಿ ಪೂರ್ವಾಚಾರಿಯ ಕಂಡೆ
ಗುಹೇಶ್ವರ ಲಿಂಗದಲ್ಲಿ ಪೂರ್ವಾಚಾರಿ,
ಸಂಗನ ಬಸವಣ್ಣನ ಶ್ರೀ ಪಾದಕ್ಕೆ
ನಮೋ ನಮೋ ಎಂಬೆನು,

ಅಲ್ಲಮಪ್ರಭು

ವಿಶ್ವಗುರು ಬಸವಣ್ಣನವರ ಕೊಲೆ
ಚಿತ್ರದುರ್ಗ ಶ್ರೀಗಳ ಹೇಳಿಕೆ

ಪ್ರಮುಖ ಪತ್ರಿಕೆಗಳಲ್ಲಿ (ಪ್ರಜಾವಾಣಿ : 8-4-1994) ಚಿತ್ರದುರ್ಗದ ಬೃಹನ್ಮಠದ ಕಿರಿಯ ಜಗದ್ಗುರುಗಳಾದ ಪೂಜ್ಯ ಶಿವಮೂರ್ತಿ ಮುರುಘರಾಜೇಂದ್ರ ಸ್ವಾಮಿಗಳ ಒಂದು ಹೇಳಿಕೆ ಪ್ರಕಟವಾಯಿತು. ಅದರ ಸಾರಾಂಶವೆಂದರೆ, "ಧರ್ಮಗುರು ಬಸವಣ್ಣನವರು ಲಿಂಗೈಕ್ಯರಾಗಲಿಲ್ಲ ; ಅವರು ತಳೆದ ಕ್ರಾಂತಿಕಾರಿ ಧೋರಣೆಯಿಂದಾಗಿ ಜಾತಿವಾದಿಗಳಿಂದ ಅವರ ಕಗ್ಗೊಲೆಯಾಯಿತು. ಇದನ್ನು ವಿರಕ್ತಮಠಾಧೀಶರು ಮುಚ್ಚಿಡುತ್ತಿದ್ದಾರೆ. " ಈ ಹೇಳಿಕೆ ಎಲ್ಲೆಡೆಯಲ್ಲಿ ತಳಮಳವನ್ನು ಹುಟ್ಟುಹಾಕಿತು. ಈಗಾಗಲೇ ವಚನ ಶಾಸ್ತ್ರವನ್ನು ಅಧ್ಯಯನ ಮಾಡಿದ ಜನರು ಸಾಕಷ್ಟು ಸಂಖ್ಯೆಯಲ್ಲಿದ್ದು; ಇಂಥ ಅಸಂಬದ್ಧ ಹೇಳಿಕೆ ಓದುತ್ತಲೇ ಜನರು ತಪ್ತರಾದರು.

ಇತ್ತೀಚೆಗೆ ನಮ್ಮ ಸ್ವಾಮಿಗಳು ತೀವ್ರ ಕ್ರಾಂತಿಕಾರಿಗಳಾಗುತ್ತಿದ್ದಾರೆ. ಮುಂದಾಲೋಚನೆ ಇಲ್ಲದೆ ಮಾತನಾಡಿ ವಿವಾದಗಳನ್ನು ದಿನ ಬೆಳಗಾದರೆ ಹುಟ್ಟಿಸುತ್ತಾರೆ. ಸಾಕಷ್ಟು ಅಧ್ಯಯನ-ಚಿಂತನೆ ಇಲ್ಲದೆ ಇರುವಾಗ, ವಿಪರೀತವಾಗಿ (ಅಸಂಬದ್ಧ) ಚಿಂತನೆ ಮಾಡುವ ಸಂಶೋಧಕ ಸಲಹೆಗಾರರೂ ಇವರ ಬೆನ್ನುಹತ್ತಿ ಬಿಡುತ್ತಾರೆ. ಕ್ರಾಂತಿಕಾರಿ ಎಂಬ ಬಿರುದು ತೆಗೆದುಕೊಳ್ಳುವ ಹವ್ಯಾಸದಿಂದ ಅತ್ಯುತ್ಸಾಹಿಗಳಾಗಿ ಮುನ್ನುಗ್ಗುವ ಭರದಲ್ಲಿ ಎಡವಟ್ಟು ಹೇಳಿಕೆಗಳೂ ಹೊರಬರುತ್ತವೆ.

ಇವರ ಹೇಳಿಕೆಗೆ ಇನ್ನೊಂದು ಪ್ರೇರಣೆಯಾದವರು ಶ್ರೀ ಚಂದ್ರಶೇಖರ ಪಾಟೀಲರು. ಧರ್ಮ-ಯೋಗ-ದರ್ಶನ ಶಾಸ್ತ್ರ ಮುಂತಾದ ಆಧ್ಯಾತ್ಮಿಕ ಸಾಧನೆಯ ಗಂಧಗಾಳಿ ತೀಡಿಸಿಕೊಳ್ಳದ ರ್‍ಯಾಷನಾಲಿಸ್ಟ್ ಶ್ರೀ ಚಂಪಾರವರು "ಬಸವಣ್ಣನವರದು ವಿಫಲ ಕ್ರಾಂತಿ ; ಅವರು ಆತ್ಮಹತ್ಯೆ ಮಾಡಿಕೊಂಡರು." ಎಂಬ ನುಡಿ ಮುತ್ತುಗಳನ್ನು ಹರಿಹರದಲ್ಲಿ ಒಂದು ಭಾಷಣದಲ್ಲಿ ಉದುರಿಸಿದರು. ಬಸವಣ್ಣನವರು ಆತ್ಮಹತ್ಯೆ ಮಾಡಿಕೊಳ್ಳಲು ಹೋಗಲಿಲ್ಲ ಎಂದು ಸಮರ್ಥಿಸಹೋಗಿ ಚಿತ್ರದುರ್ಗದ ಜಗದ್ಗುರುಗಳು ಬಸವಣ್ಣನವರು ಕೊಲೆಯಾದರು ಎಂದು ಹೇಳಿದರು. ಇದೇನು ಬಸವಣ್ಣನವರ ದುರಾದೃಷ್ಟವೊ ಅಥವಾ ಸಮಾಜದ ದುರ್ದೈವವೊ ? ಇಂಥ ಅನಾಹುತಕಾರಿ ಹೇಳಿಕೆಗಳು ಲಿಂಗವಂತ ಸಮಾಜದಲ್ಲಿ ಸುಂಟರಗಾಳಿಯಂತೆ ಸುಳಿಯುತ್ತಲೇ ಇರುತ್ತವೆ.

ಲೇಖನವನ್ನು ಎಲ್ಲಿಂದ ಆರಂಭಿಸಲಿ ? ಶ್ರೀಗಳವರ ಹೇಳಿಕೆಗೆ ಸಂಬಂಧಿಸಿಯೋ ಅವರಿಗೆ ಪ್ರಚೋದನೆ ನೀಡಿದ ಚಂಪಾರ ಹೇಳಿಕೆಗೆ ಸಂಬಂಧಿಸಿಯೊ ? ಅಲ್ಲಿಂದಲೇ ಶುರು ಮಾಡುವಾ.

ಬಹುಶಃ ಶರಣರು ಬಿಜ್ಜಳನನ್ನು ಗದ್ದುಗೆಯಿಂದ ಇಳಿಸಿ, ಬಸವಣ್ಣನವರನ್ನು ರಾಜರನ್ನಾಗಿ ಮಾಡಿದ್ದರೆ, ಅಂದರೆ ಬಸವಣ್ಣನವರು ರಾಜನಾಗಿ ಅಧಿಕಾರ ಸೂತ್ರ ಕೈಲಿ ಹಿಡಿದಿದ್ದರೆ ಚಂಪಾರ ದೃಷ್ಟಿಯಲ್ಲಿ ಅದು ಸಫಲ ಕ್ರಾಂತಿಯಾಗುತ್ತಿತ್ತು ಅಂತ ಕಾಣುತ್ತದೆ. ಸಫಲತೆ-ವಿಫಲತೆಗಳ ಮಾನದಂಡ ಯಾವುದು ? ಬಸವಣ್ಣನವರು-ಶರಣರು ಉಭಯಂತರ ದೃಷ್ಟಿಯಲ್ಲಿ ರಾಜ್ಯದ ಅಧಿಕಾರ ಸೂತ್ರ ಹಿಡಿಯುವುದಲ್ಲ, ಅತಿ ಹೆಚ್ಚಿನ ಜನರ ಬೌದ್ಧಿಕ ಪರಿವರ್ತನೆ ಮಾಡುವುದಾಗಿತ್ತು. ಬಸವಣ್ಣನವರ ಸಾಧನೆಯನ್ನು ಭಾರತದ ಸಮಾಜ ಶಾಸ್ತ್ರದ ಹಿನ್ನೆಲೆಯಲ್ಲಿ ನೋಡಿ ಅಳೆಯಬೇಕಾಗುತ್ತದೆ. ಇಂದು ವಾಹನ ಸೌಕರ್ಯ, ಸಮೂಹ ಮಾಧ್ಯಮ ಮುಂತಾದ್ದೆಲ್ಲವೂ ಇದ್ದೂ ಸಹ ಇರುವ ಸಮಾಜಕ್ಕೆ ಧರ್ಮಗುರುವಿನ ಸಂದೇಶ ಮುಟ್ಟಿಸಿ, ಇವರನ್ನು ಏಕೇಶ್ವರವಾದಿಗಳನ್ನಾಗಿ ಧರ್ಮವಂತರನ್ನಾಗಿ, ಸಮತಾವಾದಿಗಳನ್ನಾಗಿ ಮಾಡಲು ನಮ್ಮನ್ನೂ ಸೇರಿಸಿಕೊಂಡು ಇತರ ಮಠಾಧೀಶರಿಗೆ ಸಾಧ್ಯವಾಗಿಲ್ಲ. ಆದರೆ ಆಗ ಶೂನ್ಯದಿಂದ ನಿರ್ಮಿಸಬೇಕಾದ ಪರಿಶ್ರಮ ; ಹೊಸಧರ್ಮದ ಸೂತ್ರ ಹಿಡಿದು ಹೊಸ ಸಮಾಜ ಕಟ್ಟುವ ಹರಸಾಹಸ. ಮೇಲೆಂದು ಶ್ರೇಷ್ಠವೆಂದು, ನಂಬಿ ಮೇಲರಿಮೆಯಿಂದ ಬೀಗಿದ್ದ ಮೇಲ್ವರ್ಣೀಯರ ಪರಿವರ್ತನೆ, ಕೀಳೆಂದು, ಪಾಪಯೋನಿಜರೆಂದು ಭಾವಿಸಿ ಕೀಳರಿಮೆಯ ಕೊಳ್ಳದಲ್ಲಿ ಸಿಕ್ಕಿಬಿದ್ದಿದ್ದವರನ್ನು ಮೇಲೆತ್ತುವ ಪ್ರಯತ್ನ-ಇಂಥ ಸನ್ನಿವೇಶದಲ್ಲೂ ಬಸವಣ್ಣನವರು ಜನರನ್ನು ಪರಿವರ್ತಿಸಿದರು. ಮೂಢನಂಬಿಕೆಯ ದಾಸರಾಗಿ, ಬಾಹ್ಯಾಚರಣೆಗಳಿಂದ ಬಂಧಿತರಾಗಿದ್ದವರು ಜಾಗೃತಗೊಂಡು ಸೃಷ್ಟಿಕರ್ತನನ್ನು ಅರಿತಿದ್ದು, ಲಿಂಗನಿಷ್ಠಾಪರರಾಗಿ ನಡೆದುಕೊಂಡಿದ್ದು ಪವಾಡ ಸದೃಶವೇ ಸರಿ. ಎಲ್ಲಾ ಪ್ರವಾದಿಗಳಿಗಿಂತಲೂ ತಮ್ಮ ಜೀವಿತ ಕಾಲದಲ್ಲಿ ಹೆಚ್ಚು ಯಶಸ್ಸು ಪಡೆದವರು ಬಸವಣ್ಣನವರು. ಏಕೆಂದರೆ ತಮ್ಮ ಜೀವಿತಕಾಲದಲ್ಲಿಯೇ ಅವರು ಲಕ್ಷದ ಮೇಲೆ ತೊಂಭತ್ತಾರು ಸಾವಿರ (ಗಣಂಗಳನ್ನು) ಸದಸ್ಯರನ್ನು ಹೊಂದಿದ ಕೀರ್ತಿಶಾಲಿಗಳು.

ವರ್ಣಾಂತರ ವಿವಾಹ, ಕಲ್ಯಾಣ ಕ್ರಾಂತಿ, ಶರಣರ ವಧೆ, ಬಸವಣ್ಣನವರ ಗಡಿಪಾರು-ಇವು ಮಹತ್ವದ ಘಟನೆಗಳು, ಭಾರತ ದೇಶದಂತಹ ಜಡಗಟ್ಟಿದ ವಿಚಾರಧಾರೆಯ ದೇಶದಲ್ಲಿ ಒಂದೊಂದು ಘಟನೆಯೂ ಒಂದು ಯಶಸ್ಸಿನ ಹೆಜ್ಜೆಯೆ. ಇವು ಬೇರೊಂದನ್ನು ಸಾಧಿಸುವುದತ್ತಲಿರಲಿ, ಈ ಘಟನೆಗಳೇ ಅಮೂಲ್ಯಸಿದ್ಧಿಗಳು. ಶರಣರು ರಕ್ತಪಾತದಲ್ಲಿ ದಿಡೀರ್ ಬದಲಾವಣೆಯಲ್ಲಿ ನಂಬಿಕೆ ಇಟ್ಟವರಲ್ಲ ; ಜನರ ಮಾನಸಿಕ ಪರಿವರ್ತನೆಯಲ್ಲಿ ದೃಷ್ಟಿ ನೆಟ್ಟವರು. ಅಂಥ ಪರಿವರ್ತನೆ ತರುವುದೇ ಒಂದು ಮಹತ್ತರ ಸಾಧನೆ ಎನ್ನುವುದಾದರೆ ಬಸವಣ್ಣನವರು ಆ ದಿಶೆಯಲ್ಲಿ ಸಂಪೂರ್ಣವಾಗಿ ಸಫಲರಾದರು ಎನ್ನಬಹುದು. ಇಷ್ಟೇ ಅಲ್ಲ ಇಂಥ ಸಾಧನೆಗಾಗಿ ಅವರು ತೆರಬೇಕಾದ ಬೆಲೆ ಏನು ಎಂಬುದರ ಸಂಪೂರ್ಣ ಅರಿವಿದ್ದವರು. ಸಂಪ್ರದಾಯದ ಸರ್ಪವು, ಕೆನ್ನಾಲಿಗೆ ಚಾಚಿ ಘೂತ್ಕರಿಸುತ್ತದೆ ಎಂದು ಗೊತ್ತಿದ್ದೂ ಸಹ ಅದರೊಡನೆ ಸೆಣಸಲು ನಿಂತರು.

ಭೂಮಿಯೊಳಗೆ ಬೀಜ ಬಿದ್ದಲ್ಲಿ ಕೆಟ್ಟಿತ್ತೆನ ಬೇಡ
ಮುಂದಣ ಫಲದೊಳಗರಸಿಕೊ

ಮುಂದಣ ಬಣ್ಣದೊಳಗರಸಿಕೊ
ಹೊತ್ತಿಸಿದ ದೀಪ್ತಿ ಕೆಟ್ಟಿತ್ತೆನ ಬೇಡ
ಮುಂದಣ ಜ್ಯೋತಿಯೊಳಗರಸಿಕೊ

ಎಂದು ಅರಿತೇ ತ್ಯಾಗಕ್ಕೆ ಸಿದ್ಧರಾದರು. ರಾಜ್ಯದ ಅಧಿಕಾರಕ್ಕಾಗಿ ಹೋರಾಡಿ, ಅದು ಸಿಗದಿದ್ದಾಗ ಆ ಪ್ರಯತ್ನ ವಿಫಲ ಪ್ರಯತ್ನ ಎನ್ನಬಹುದು. ಶರಣರು ಆ ದಿಶೆಯಲ್ಲಿ ಯತ್ನವನ್ನೇ ಮಾಡದೆ ಸತ್ಯದ ದಾರಿಯಲ್ಲಿ ನಡೆಯಲು ಉಪಕ್ರಮಿಸಿದರು ಎಂಬುದು ಗಮನಾರ್ಹ, ಕ್ರಮಿಸುವ ದಾರಿಯಲ್ಲಿ ಇದಿರಾದವರನ್ನು ಪರಿವರ್ತಿಸಿದರು ಎಂಬುದೂ ಗಣನಾರ್ಹ.

ಆತ್ಮಹತ್ಯೆ ?

ಇನ್ನು ಚಂಪಾರ ಅಬದ್ಧ ಮತ್ತು ಅಪ್ರಬುದ್ಧ ಹೇಳಿಕೆ ಬಸವಣ್ಣನವರು ಆತ್ಮಹತ್ಯೆ ಮಾಡಿಕೊಂಡರು ಎಂಬುದು ಎಷ್ಟು ಸರಿ? ಬರೀ ಊಹಾಪೋಹಗಳಲ್ಲಿ ತೊಡಗಿ ಈ ಅರೆಬೆಂದ ವಿಚಾರದವರು ಇತಿಹಾಸಕ್ಕೆ ಬಹಳ ಅನ್ಯಾಯ-ಅಪಚಾರ ಮಾಡುತ್ತಿದ್ದಾರೆ, ವಿಶ್ವಗುರು ಬಸವಣ್ಣನವರ ವಚನಗಳಲ್ಲಿ ಅವರು ಹೇಗೆ ಲಿಂಗೈಕ್ಯರಾದರು ಎಂಬ ಬಗ್ಗೆ ಸ್ಪಷ್ಟವಿವರಗಳಿವೆ. ಕಾಲಜ್ಞಾನ ವಚನಗಳಲ್ಲಿ ಅವರು ಲಿಂಗೈಕ್ಯರಾದ ಬಗೆಗೆ ದಾಖಲೆಗಳಿವೆ. ಶ್ರೀ ಗುರುವನ್ನು ಅಗಲಿದ ಅತ್ಯಂತ ಆಪ್ತ ಶರಣರ ವಚನಗಳಲ್ಲಿ ದುಃಖವು ಹೊನಲಾಗಿ ಹರಿದಿದೆ. ಅಲ್ಲೆಲ್ಲೂ ಅವರು ಆತ್ಮಹತ್ಯೆ ಮಾಡಿಕೊಂಡ ಉಲ್ಲೇಖವಾಗಿಲ್ಲ. ಈ ವಚನಗಳನ್ನು ನಂತರ ಇದೇ ಲೇಖನದಲ್ಲೇ ಉದಾಹರಿಸಲಿದ್ದೇನೆ.

ಇನ್ನು ಇಚ್ಛಾಮರಣಿಯಾಗಿ ಮಹಾಯೋಗಿ ಬಸವಣ್ಣನವರು ಶರೀರವನ್ನು ವಿಸರ್ಜಿಸಿದ್ದಾರೆ. ಇದು ಕುಂಡಲಿನಿಯೋಗ ಮತ್ತು ಅದನ್ನು ಅಳವಡಿಸಿಕೊಂಡ ಶಿವಯೋಗದ ಮಹತ್ವಪೂರ್ಣ ಸಾಧನೆ. ಇದನ್ನೇ ಚಂಪಾರವರು ಆತ್ಮಹತ್ಯೆ ಎಂದರೆ, ಆಗ ನಾವು ವೈದ್ಯರು ಮಾಡುವ ಶಸ್ತ್ರ ಚಿಕಿತ್ಸೆಯನ್ನು ಕಟುಕ ವೃತ್ತಿ ಎಂದು, ವೈದ್ಯನನ್ನು ಕಟುಕನೆಂದು ಕರೆದಂತಾದೀತು. ಇಂಥಾ ಸಾಹಿತಿಗಳನ್ನು ಅಕ್ಕಮಹಾದೇವಿಯ ಒಂದು ವಚನ ಉಲ್ಲೇಖಿಸಿ,ಬಣ್ಣಿಸಿ ಮೌನ ತಾಳುವುದು ಯೋಗ್ಯವಾದೀತು.

ಗಗನದ ಗುಣ್ಪ ಚಂದ್ರಮ ಬಲ್ಲನಲ್ಲದೆ
ಕಡೆಯಲಿದ್ದಾಡುವ ಹದ್ದು ಬಲ್ಲುದೇನಯ್ಯಾ ?
ನದಿಯ ಗುಣ್ಪ ತಾವರೆ ಬಲ್ಲುದಲ್ಲದೆ
ಕಡೆಯಲಿಪ್ಪ ಹೊನ್ನಾವರಿಕೆ ಬಲ್ಲುದೇನಯ್ಯಾ ?
ಪುಷ್ಪದ ಪರಿಮಳವ ತುಂಬಿ ಬಲ್ಲುದಲ್ಲದೆ
ಕಡೆಯಲಿದ್ದಾಡುವ ನೊರಜು ಬಲ್ಲುದೇನಯ್ಯಾ ?
ಚನ್ನಮಲ್ಲಿಕಾರ್ಜುನಯ್ಯಾ, ನಿಮ್ಮ ಶರಣರ ನಿಲುವ

ನೀವೇ ಬಲ್ಲಿರಲ್ಲದೆ ಈ ಕೋಣನ ಮೈಮೇಲಿನ
ಸೊಳ್ಳೆಗಳೆತ್ತ ಬಲ್ಲವಯ್ಯಾ ?

ಕೇವಲ ಭಾಷಾ ವಿಶಾರದರಾದ ಕೆಲವು ಸಾಹಿತಿಗಳಿಗೆ ಯೋಗ-ಅನುಭೂತಿ, ದರ್ಶನ ಮುಂತಾದುವುಗಳ ಸಾಮಾನ್ಯಜ್ಞಾನವೂ ಇರದು ; ಸಾಹಿತಿಗಳಾದ ಮಾತ್ರಕ್ಕೆ ತಾವು ಸರ್ವಜ್ಞರೆಂಬ ಹಮ್ಮು ಮಾತ್ರ ತುಂಬಿತುಳುಕುವುದು. ಹೀಗಾಗಿ ತಮಗೆ ಸಂಬಂಧಿಸದ ಕ್ಷೇತ್ರದಲ್ಲಿಯೂ ಅಭಿಪ್ರಾಯ ಸೂಚಿಸುವ ಧಾರ್ಷ್ಟ್ಯ ಅವರದು.

ಕೊಲೆಯಾದರೆ ?

ಇನ್ನು ಚಂಪಾರ ಚಪಲ ಬುದ್ಧಿಯ **'ಮಾತಿನ ಮನೆ'** ಯಿಂದ ಬೃಹನ್ಮಠದ ಕಿರಿಯ ಜಗದ್ಗುರುಗಳ **'ವಧಾಗಾರಕ್ಕೆ'** ಬರೋಣ. ಬಸವಣ್ಣನವರು ಕೊಲೆಯಾದರೆ ? ಎಲ್ಲಿ, ಯಾರಿಂದ ? ಇದಕ್ಕೆ ಆಧಾರ ಎಲ್ಲಿದೆ ?

ವಿಶ್ವಗುರು ಬಸವಣ್ಣನವರು ಜಾತಿವಾದಿಗಳು, ಮತಾಂಧರಿಂದ ಕೊಲೆಯಾಗಿದ್ದರೆ ಅದನ್ನು ಮುಚ್ಚಿಡುವ ಅಗತ್ಯವಿಲ್ಲ ; ಜಗತ್ತಿನಲ್ಲಿ ಹುತಾತ್ಮರಿಗೆ ಬಹುದೊಡ್ಡ ಮನ್ನಣೆಯಿದೆ, ಸೋಕ್ರತೀಸ, ಏಸು, ಮಹಾತ್ಮಗಾಂಧಿ ಮುಂತಾದವರ ವ್ಯಕ್ತಿತ್ವವು ಹೀನಜನರ ಹಿಂಸಾತ್ಮಕ ಪ್ರತಿಕ್ರಿಯೆಯಿಂದ ಎಷ್ಟೂ ಮಂಕಾಗಿಲ್ಲ. ಆದರೆ, ಆಗದೆ ಇರುವ ಕೊಲೆಯನ್ನು ಬಸವಣ್ಣನವರ ತಲೆಗೆ ಕಟ್ಟುವುದೇಕೆ ? ಇದರಿಂದ ನಾವು ಸಾಧಿಸುವುದೇನನ್ನು ? ಮಹಾಯೋಗಿಯಾಗಿ ಇಚ್ಛಾಮರಣಿಯಾಗಿ ದೇಹವನ್ನು ಬಿಟ್ಟ ಬಸವಣ್ಣನವರ ಭವ್ಯ-ದಿವ್ಯ ಅಂತ್ಯವನ್ನು ಅರಿಯದೆ, ಈಗ **'ಕೊಲೆ'** ಮಾಡಲೂ ನಮ್ಮ ಮಠಾಧೀಶರು ಸಿದ್ಧರಾದರೆ ಇನ್ನು ಬಸವಣ್ಣನವರನ್ನು ಉಳಿಸಿಕೊಳ್ಳುವವರಾರು ?

ವಿಶ್ವಗುರು ಬಸವಣ್ಣನವರು ರಾಕ್ಷಸ ನಾಮ ಸಂವತ್ಸರದ ಫಾಲ್ಗುಣ ಮಾಸದ ದ್ವಾದಶಿಯ ದಿವಸ ಕಲ್ಯಾಣದಿಂದ ಹೊರಟರು. ಅವರ ಬಗ್ಗೆ ಸಂದೇಹ ಪಟ್ಟಾಗಲೀ, ದ್ವೇಷದಿಂದಲಾಗಲೀ ಯಾರೂ ಹಿಂಬಾಲಿಸಿದ್ದು ಕಾಣದು. ಈ ರೀತಿಯ ಸುಳಿವು ವಚನಗಳು, ಕಾಲಜ್ಞಾನ, ಮೌಖಿಕ ಆಖ್ಯಾಯಿಕೆ ಯಾವುದರಲ್ಲೂ ಕಾಣಬರದು. ದಂಡಗೊಂಡ ಬಸವಣ್ಣನ ಗುಡಿಗಳು ಅಲ್ಲಲ್ಲೇ ಕಾಣುತ್ತ ಬಸವಣ್ಣನವರು ಸಂಚರಿಸಿದ ದಾರಿಯನ್ನು ಚಿತ್ರಿಸುತ್ತವೆ.

ಇವರನ್ನು ಸೈನ್ಯವಾಗಲೀ, ಜಾತಿವಾದಿಗಳಾಗಲೀ ಯಾರೂ ಬೆನ್ನುಹತ್ತಲಿಲ್ಲ. ಜಾತಿವಾದಿಗಳಿಂದ ಪ್ರಚೋದಿತವಾದ ಸೈನ್ಯವು ಬೆನ್ನುಹತ್ತಿದ್ದು ವಚನ ಸಾಹಿತ್ಯವನ್ನು ಕೊಂಡೊಯ್ಯುತ್ತಿದ್ದ ಶರಣರ ತಂಡವನ್ನು ಎಂಬುದಕ್ಕೆ ಸಾಕಷ್ಟು ಉಲ್ಲೇಖಗಳಿವೆ. ಕಾಲಜ್ಞಾನ ವಚನಗಳಂತೂ ಈ ದಿಶೆಯಲ್ಲಿ ಅಪೂರ್ವದಾಖಲೆಗಳಾಗುತ್ತವೆ. ಕಾದರವಳ್ಳಿಯ ಮುಂದೆ ಮತ್ತು ಮುರಗೋಡ ಬಳಿ ಉಭಯತರೂ ಕಾದಿದ್ದು ಕಾಲಜ್ಞಾನ ವಚನದಲ್ಲೂ ಇದೆ ಮತ್ತು ಜನಪದ ಸಾಹಿತ್ಯದಲ್ಲೂ ಇದೆ. ಆ ಭಾಗದಲ್ಲಿ ಸಂಚರಿಸಿದರೆ ಜನರು ಸಹ ಆಖ್ಯಾಯಿಕೆಗಳನ್ನು ಉಲ್ಲೇಖಿಸುವರು.

ಧರ್ಮಪಿತ ಬಸವಣ್ಣನವರು ಕಲ್ಯಾಣದಲ್ಲೋ ಮಾರ್ಗಮಧ್ಯದಲ್ಲೋ ಕೊಲೆಯಾಗಿದ್ದರೆ ಆ ಸ್ಥಳವನ್ನು ಜನರು ರಕ್ಷಿಸಿಕೊಂಡು ಬರುತ್ತಿರಲಿಲ್ಲವೆ ? ಮೂಢಶ್ರದ್ಧೆಯಿಂದಲಾದರೂ ಜನರು ರಕ್ಷಿಸಿಕೊಂಡು ಬಂದಿರುವ ಉಳವಿ–ಚನ್ನಬಸವಣ್ಣನವರ ಸುಕ್ಷೇತ್ರ, ಗೊಡಚಿ–ಮಡಿವಾಳ ಮಾಚಿದೇವರ ಕ್ಷೇತ್ರ, ತರೀಕೆರೆ–ಅಕ್ಕನಾಗಮ್ಮನ ಐಕ್ಯ ಸ್ಥಳ ; ತಿಗಡಿ–ಕಲ್ಯಾಣಮ್ಮನ ಸಮಾಧಿ ಸ್ಥಳ ; ಇವೇ ಈ ರೀತಿ ಸಂರಕ್ಷಿಸಿಕೊಂಡು ಬಂದಿರುವ ಸ್ಥಳಗಳು. ಹಾಗೆಯೇ, ಬಸವಣ್ಣನವರು ಕೊಲೆಯಾಗಿದ್ದರೆ ಆ ಸ್ಥಳವನ್ನು ಅನುಯಾಯಿಗಳು ಖಂಡಿತವಾಗಿಯೂ ರಕ್ಷಿಸುತ್ತಿದ್ದರು.

ವಚನಗಳು–ಆತ್ಮಕಥೆ

ಸ್ವತಃ ಬಸವಣ್ಣನವರು ಬರೆದ ವಚನಗಳು ಆತ್ಮಕಥೆಗಳಂತಿವೆ : ಅವರು ಐಕ್ಯವಾಗುವಾಗ ಬರೆದ ವಚನಗಳಲ್ಲಿ ನಿರಾಶೆಯಾಗಲಿ, ಭಯವಾಗಲಿ, ಉದ್ವೇಗ–ಒತ್ತಡಗಳಾಗಲೀ ತೋರಿಬಂದಿಲ್ಲ.

ಭಕ್ತಿ ಎಂಬ ಪೃಥ್ವಿಯ ಮೇಲೆ
ಗುರುವೆಂಬ ಬೀಜವಂಕುರಿಸಿ,
ಲಿಂಗವೆಂಬ ಎಲೆಯಾಯಿತ್ತು
ವಿಚಾರವೆಂಬ ಹೂವಾಯಿತ್ತು
ಆಚಾರವೆಂಬ ಕಾಯಾಯಿತ್ತು
ನಿಷ್ಪತ್ತಿ ಎಂಬ ಹಣ್ಣಾಯಿತ್ತು
ನಿಷ್ಪತ್ತಿ ಎಂಬ ಹಣ್ಣು ತಾನು
ತೊಟ್ಟು ಕಳಚಿ ಬೀಳುವಲ್ಲಿ
ಕೂಡಲ ಸಂಗಮದೇವ, ತನಗೆ ಬೇಕೆಂದು ಎತ್ತಿಕೊಂಡ.

ಬಸವಣ್ಣನವರು ಲಿಂಗೈಕ್ಯರಾಗುವಾಗಿನ ಮನಃಸ್ಥಿತಿಯನ್ನು ವಿವರಿಸಲು ಬಹುಶಃ ಈ ವಚನಕ್ಕಿಂತಲೂ ಬೇರೆ ಸಾಕ್ಷಿಯೇ ಬೇಕಾಗಿಲ್ಲ. "ತೊಟ್ಟು ಕಳಚಿ ಬೀಳುವ" ರೂಪಕವಂತೂ ಈ ಹಣ್ಣನ್ನು ಯಾರೂ ಕಿತ್ತು ಬಿಸುಡಲೂ (ಕೊಲೆ) ಇಲ್ಲ, ಅಥವಾ ಪಕ್ವವಾಗುವ ಮೊದಲೇ ಹೀಚು ಉದುರಿ ಬೀಳಲೂ (ಆತ್ಮಹತ್ಯೆ) ಇಲ್ಲ ಎಂಬುದನ್ನು ಗಟ್ಟಿಯಾಗಿ ಚಿತ್ರಿಸುತ್ತದೆ. ಪಕ್ವವಾದ ಹಣ್ಣು ಸ್ವಾಭಾವಿಕವಾಗಿ ಉದುರಿ ಬೀಳುವಂತೆ ಧರ್ಮಪಿತರ ಜೀವಾತ್ಮವು ಬಿಡುಗಡೆಯಾಗುತ್ತಿದೆ.

ಧರ್ಮಪಿತರು ಲಿಂಗೈಕ್ಯರಾಗುವ ಮೊದಲು ಅಲ್ಲಮ ಪ್ರಭುದೇವರು ಲಿಂಗೈಕ್ಯರಾಗುತ್ತಾರೆ. ಇಬ್ಬರೂ ಅಪ್ರತಿಮ ಯೋಗ ಸಾಧಕರು. ಹೀಗಾಗಿ ಆ ಪ್ರಸಂಗ ದೂರದ ಕೂಡಲ ಸಂಗಮದಲ್ಲಿದ್ದರೂ ಬಸವಣ್ಣನವರ ಚಿತ್ತಪಟಲದ ಮೇಲೆ ಮೂಡುತ್ತದೆ.

ಲಿಂಗ ಗಂಭೀರ ಗಮನಗೆಟ್ಟುದಲ್ಲಾ
ಜಂಗಮ ಗಂಭೀರ ಸುಳುಹುಗೆಟ್ಟುದಲ್ಲಾ

ಪ್ರಸಾದ ಗಂಭೀರ ರೂಪುಗೆಟ್ಟುದಲ್ಲಾ
ಆಚಾರ ಗಂಭೀರ ಅವಯವಗೆಟ್ಟುದಲ್ಲಾ
ಜ್ಞಾನ ಗಂಭೀರ ನಡೆಗೆಟ್ಟುದಲ್ಲಾ
ಕೂಡಲ ಸಂಗಮ ದೇವರಲ್ಲಿ ಪ್ರಭುದೇವರು ನಿಜವನೈದಲು
ಸಂಗನ ಬಸವಣ್ಣನ ಪ್ರಾಣ ಒಡನೆ ಬಳಿ ಸಂದುದಲ್ಲಾ !

–ಬ. ಷ. ಹೆ. ವ. ೧೩೮೭

ಯೋಗಶಕ್ತಿಯಿಂದ ಬಸವಣ್ಣನವರ ಆತ್ಮ ಚೈತನ್ಯವು ಸಂಚರಿಸಿ ಪ್ರಭುದೇವರ ಲಿಂಗೈಕ್ಯ ಘಟನೆಯನ್ನು ಗ್ರಹಿಸುತ್ತದೆ. ಕಾಲಜ್ಞಾನದ ಪ್ರಕಾರ ಪ್ರಭುದೇವರು ಲಿಂಗೈಕ್ಯರಾದುದು ಆಷಾಢ ಶುದ್ಧ ಪ್ರತಿಪದೆಯಂದು ; ಬಸವಣ್ಣನವರು ಲಿಂಗೈಕ್ಯರಾದುದು ಶ್ರಾವಣ ಶುದ್ಧ ಪಂಚಮಿಯಂದು, ಮಂಗಳವಾರ.

ಅಯ್ಯಾ, ಹಿಂದೆಯಾನು ಮಾಡಿದ ಮರಹಿಂದ ಬಂದೆನೀ ಭವದಲ್ಲಿ
ನಿಮ್ಮ ಲೀಲೆ ನಿಮ್ಮ ವಿನೋದ ಸೂತ್ರದಿಂದ
ಲಕ್ಷದ ತೊಂಭತ್ತಾರು ಸಾವಿರ ಗೀತಂಗಳ ಆಡಿ ಹಾಡಿ
ಆ ದಾಸೋಹವೆಂಬ ಮಹಾಗಣ ಸಂಕುಳದೊಳೆನ್ನನಿರಿಸಿ
ನಿಮ್ಮ ಭಕ್ತಿಯ ಘನವ ನೀವೆ ಮೆರೆಯಲೆಂದು
ಪರವಾದಿ ಬಿಜ್ಜಳನ ತಂದೊಡ್ಡಿ ಎನ್ನನು ಅವನೊಡನೆ ಹೋರಿ
ಮುನ್ನೂರ ಅರವತ್ತು ಸತ್ತ ಪ್ರಾಣವನೆತ್ತಿಸಿ
ಮೂವತ್ತಾರು ಕೊಂಡೆಯವ ಗೆಲಿಸಿ,
ಎಂಭತ್ತೆಂಟು ಪವಾಡಂಗಳ ಕೊಂಡಾಡಿ
ಮರ್ತ್ಯಲೋಕದ ಮಹಾಗಣಂಗಳ ಒಕ್ಕುದನಿಕ್ಕಿ ಎನ್ನ ಸಲಹಿದಿರಿ
ನಿಮ್ಮ ಮಹಾಗಣಂಗಳು ಮೆಚ್ಚಿ ಎನ್ನ ಸೂತಕವ ತೊಡೆದು
ಪ್ರಭುದೇವರ ಕರುಣದಿಂದ ಪ್ರಾಣಲಿಂಗ ಸಂಬಂಧ ಸಯವಾಗಿತ್ತು
ನೀವು ಕಳಿಸಿದ ಬೆಸನು ಸಂದಿತ್ತು
ಉಘೇ ! ಇನ್ನು **ಕೂಡಿಕೊಳ್ಳಾ ಕೂಡಲ ಸಂಗಮದೇವಾ**

–ಬ. ಷ. ಹೆ. ವ. ೧೩೮೧

ದೇವನಲ್ಲಿ ಒಡವೆರೆದು ಒಂದಾಗಬೇಕೆಂದು ಸಂಕಲ್ಪಿಸುವರು. ಇಲ್ಲಿ ನಿರಾಶೆ–ಹತಾಶೆ, ಉದ್ವೇಗ–ವ್ಯಾಕುಲ ಯಾವುದೂ ತೋರಿ ಬರದು. ತಾವು ಒಂದು ಪವಿತ್ರ ಮಹಪೂರೈಸಿದ ಸಂತೃಪ್ತಿ ಇದೆ ಮತ್ತು ತಮ್ಮ ಸ್ಥಿತಿ ಹೇಗಿದೆ ಎಂದು ಹೇಳುವ ಈ ವಚನ ನೋಡಿ.

ಉರಿಯೊಳಗಣ ಕರ್ಪುರಕ್ಕೆ ಕರಿಯುಂಟೆ ಅಯ್ಯಾ ?
ಬಯಲ ಮರೀಚಿ ಜಲಕ್ಕೆ ಕೆಸರುಂಟೆ ಅಯ್ಯಾ ?
ವಾಯುವನಪ್ಪಿದ ಪರಿಮಳಕ್ಕೆ ನಿರ್ಮಾಲ್ಯವುಂಟೆ ಅಯ್ಯಾ ?

ನೀವು ನೆರೆ ಒಲಿದ ಬಳಿಕ ಎನಗೆ ಭವವುಂಟೆ ?
ಕೂಡಲ ಸಂಗಮದೇವಾ,
ನಿಮ್ಮ ಚರಣಕಮಲದೊಳಗೆನ್ನನಿಂಬಿಟ್ಟುಕೊಳ್ಳಯ್ಯಾ ?

—ಬ. ಷ. ಹೆ. ವ. ೧೩೯೦

ವಿಶ್ವಗುರು ಬಸವಣ್ಣನವರ ಶಾರೀರಿಕ, ಮಾನಸಿಕ ಸ್ಥಿತಿ ಹೇಗಿತ್ತು ಎನ್ನುವುದಕ್ಕೆ ಈ ವಚನ ಶ್ರೇಷ್ಠ ವಿವರಣೆ ನೀಡುತ್ತದೆ. ಅವರು ಶರೀರಧಾರಿಯಾಗಿದ್ದರೂ ಶರೀರ ಭಾವವಳಿದ ಜೀವನ್ಮುಕ್ತರಾಗಿದ್ದರು.

ಯಾವ ಯಾವ ವಚನವನ್ನು ಯಾವ ಸಂದರ್ಭದಲ್ಲಿ, ಯಾವ ಹಿನ್ನೆಲೆಯಲ್ಲಿ ಹೇಳಿರಬಹುದು ಎಂಬುದನ್ನು ಅರಿಯಲು ಅಸಮರ್ಥರಾದ ಬಹುಪಾಲು ಬರಹಗಾರರು, ಬಸವಣ್ಣನವರು ಲಿಂಗೈಕ್ಯರಾಗುವಾಗ "ಅಕಟಕಟಾ ಶಿವಾ ನಿನಗಿನಿತು ಕೃಪೆ ಇಲ್ಲವಯ್ಯಾ" ಎಂದು ಹೇಳಿಸಿ ಬಿಡುವುದುಂಟು. ಹನ್ನೆರಡು ವರ್ಷದ ಬಾಲಕನಿದ್ದಾಗ ಬಸವಣ್ಣನವರು ಹಾಡಿರಬಹುದಾದ, ಅದೂ ಸಾಧಕನ ಜೀವನದ ಕಾಳರಾತ್ರಿ (dark night of the soul) ಯ ಸಂದರ್ಭದಲ್ಲಿ ಹೇಳಿರಬಹುದಾದ ವಚನವನ್ನು ಪ್ರೌಢ, ಜೀವನ್ಮುಕ್ತರಾದ ಬಸವಣ್ಣನವರ ಬಾಯಿಯಲ್ಲಿ ಹಾಡಿಸುವುದು ಎಂಥಾ ವಿಪರ್ಯಾಸ !

ದಿ॥ ಕಂಠೀರವ ಕರಿಬಸವಯ್ಯನವರು ಸಹ ಈ ಪ್ರಮಾದ ಎಸಗಿದ್ದರು; ಇದನ್ನು ನೋಡಿಯೇ ಚಂಪಾರಂಥವರು ಆತ್ಮಹತ್ಯೆ ಮಾಡಿಕೊಂಡಿರಬೇಕು ಎಂಬ ನಿರ್ಧಾರಕ್ಕೆ ಬಂದಿರಲೂ ಸಾಧ್ಯ.

ಆದರೆ ಲಿಂಗೈಕ್ಯರಾಗುವ ಮುನ್ನ ಬಸವಣ್ಣನವರು ಹಾಡಿರುವ ವಚನಗಳನ್ನು ಗಮನಿಸಿದಾಗ ಅವರ ಉನ್ನತ ಸ್ಥಿತಿ ಅರ್ಥವಾಗುವುದು. 'ನಿಮ್ಮ ಚರಣಕಮಲದೊಳಗೆ ಇಂಬಿಟ್ಟುಕೊಳ್ಳಯ್ಯ.' ಎಂದು ದೇವನಲ್ಲಿ ಪ್ರಾರ್ಥಿಸುತ್ತ ಅವರು ಶರೀರ ವಿಸರ್ಜನೆಯ ಪ್ರಕ್ರಿಯೆಯನ್ನು ಆರಂಭಿಸುವರು. ಅಪಾರವಾದ ಯೋಗ ಸಿದ್ಧಿ ಪಡೆದ ಅವರು ಪಂಜರದ ಪಕ್ಷಿಯಾಗಿರದೆ ಗೂಡಿನ ಪಕ್ಷಿಯಂತಿದ್ದರು. ಪ್ರಾಣಲಿಂಗಿ ಸ್ಥಲದ ಸಾಧನೆಯಲ್ಲೇ ಕಾಯ–ಜೀವದ ಹೊಲಿಗೆಯನ್ನು ಬಿಚ್ಚಿದ್ದರು; ಹೀಗಾಗಿ ಅವರು ಬಯಸಿದಾಗ ಆತ್ಮವನ್ನು ಶರೀರದಿಂದ ಬೇರ್ಪಡಿಸಬಲ್ಲವರಾಗಿದ್ದರು.

ಧರೆಯಾಕಾಶದ ನಡುವೆ ಒಂದು ಮಾಮರ ಹುಟ್ಟಿತ್ತು
ಆ ಮರಕ್ಕೆ ಕೊಂಬೆ ಎರಡು ; ಎಲೆ ಆರು
ಮೂವತ್ತಾರು ಪುಷ್ಪ, ಕಾಯಿ ಒಂದೆ !
ಹಣ್ಣು ರಸ ತುಂಬಿದಲ್ಲಿ ಏನನೂ ಕಾಣೆ !
ಎಲೆ ಉದುರಿದಡೆ ಹಣ್ಣು ತೊಟ್ಟು ಬಿಟ್ಟು ಬಿದ್ದಿತ್ತು
ಆ ಹಣ್ಣ ಪ್ರಭುದೇವರು ಆರೋಗಣೆಯ ಮಾಡಿ
ನಿಜದಲ್ಲಿ ನಿರ್ವಯಲಾದರು,

ಪ್ರಭುವಿನ ಕಾ[illegible]
ಕೂಡಲ ಸಂಗಮದೇವರು ಇತ್ತಬಾರೆಂದು
ತಮ್ಮ ಹೃದಯ ಕಮಲದಲ್ಲಿ ಇಂಬಿಟ್ಟುಕೊಂಡರು. [೧೪೯೧]

"ಪರಮಾತ್ಮನಿಂದ ಭಿನ್ನವಾಗಿರುವ ಜೀವಾತ್ಮವು ಮೂಲ ನೆಲೆಯನ್ನು ಸೇರ ಬಯಸುವುದು. ಆಗ ಸಾಧನೆಯ ಮಾಮರವು ಚಿಗುರೊಡೆಯುವುದು. ಜ್ಞಾನ–ಕ್ರಿಯೆಗಳೇ ಇದರ ಎರಡು ಕೊಂಬೆಗಳು. ಷಟಸ್ಥಲಗಳೇ ಆರು ಎಲೆಗಳು, ಆರು ಸ್ಥಲಗಳಲ್ಲಿ ಅಂತರ್ಗತವಾಗಿರುವ ಉಪಸ್ಥಲಗಳು ಮೂವತ್ತಾರು. ಇವೇ 36 ಹೂವುಗಳು. ಇವುಗಳೆಲ್ಲರ ಪರಿಣಾಮ **ದಿವ್ಯಾನುಭವ** ಎನ್ನುವ ಒಂದು ಕಾಯಿ. ಈ ದಿವ್ಯಾನುಭವವು ಮಾಗುತ್ತ ಬಂದಂತೆಲ್ಲ ವ್ಯಕ್ತಿಯು ಪರಿಪಕ್ವವಾಗುತ್ತಾನೆ. ಈ ದಿವ್ಯಾನುಭವದ ಫಲವನ್ನು ಸವಿದ ಶರಣನು ಪರಮಾತ್ಮನಲ್ಲಿ ಒಡವೆರೆದು ಒಂದಾಗುತ್ತಾನೆ.

ಈ ರೀತಿ ಮಾಡಿ ಅಲ್ಲಮಪ್ರಭುದೇವರು ಈಗಾಗಲೇ ಕದಳಿಯಲ್ಲಿ ನಿರ್ವಯಲಾಗಿದ್ದಾರೆ; ನಾನು ಸಹ ಇದೇ ಸ್ಥಿತಿಗೆ ಏರಿರುವ ಕಾರಣ ಪರಮಾತ್ಮನು ನನ್ನನ್ನು ಇದೀಗ ಅಡಗಿಸಿಕೊಳ್ಳಲಿರುವನು" ಎನ್ನುತ್ತಾರೆ ಬಸವಣ್ಣನವರು. ಇಲ್ಲಿಂದ ಮುಂದೆ ಮಾತು ನಿಂತು ಹೋಗುವ ಸ್ಥಿತಿ.

ಅರಿವನ್ನಕ್ಕರ ಅರ್ಚಿಸಿದೆ, ಅರಿವನ್ನಕ್ಕರ ಪೂಜಿಸಿದೆ
ಅರಿವನ್ನಕ್ಕರ ಹಾಡಿ ಹೊಗಳಿದೆ
ಅರಿವುಗೆಟ್ಟು ಮರೆವು ನಷ್ಟವಾಗಿ
ಭಾವ ನಿರ್ಭಾವವಾಗಿ ನಿಜವೊಳಕೊಂಡಿತ್ತಾಗಿ
ಕೂಡಲ ಸಂಗಯ್ಯನಲ್ಲಿ ಸರ್ವ ನಿರ್ವಾಸಿಯಾಗಿರ್ದೆನು.

—ಬ. ಷ. ಹೆ. ವ. ೧೩೮೬

ಕುಂಡಲಿನಿ ಶಕ್ತಿಯು ಆಧಾರದಿಂದ ಮೇಲೆದ್ದು ಕ್ರಮವಾಗಿ ಮೇಲಕ್ಕೆ ಆರೋಹಿಸುತ್ತ ಬಂದಂತೆ ಇನ್ನು ಮಾತು, ಬಣ್ಣನೆ ಏನೂ ಸಾಧ್ಯವಿಲ್ಲ. ಅವರು ಕುಳಿತ ನಿಲುವು ಹೀಗಿದೆ :

ಪಶ್ಚಿಮ ಪದ್ಮಾಸನದಲ್ಲಿ ಕುಳಿತು, ನೆಟ್ಟೆಲುವ ಮುರಿದು
ತುಟಿ ಮಿಡುಕದೆ, ಅಟ್ಟಿಯಾಡಿತ್ತಲ್ಲಾ !
ಬಿಟ್ಟ ಕಣ್ಣು, ಬಿಗಿದ ಹುಬ್ಬು, ಬ್ರಹ್ಮರಂಧ್ರದಲ್ಲಿ ಕಟ್ಟು ಗುಡಿಯ
ಕೂಡಲ ಸಂಗಮದೇವ ಹಿಡಿವಡೆದ. [ಬ. ಷ. ವ. ೮೧೪]

ಇಂತಹ ನಿಲುವಿನಲ್ಲಿ ಕುಳಿತಿರುವಾಗಲೇ ಪಶ್ಚಿಮದ ಚಕ್ರ ಬಿಚ್ಚಿ, ಆತ್ಮವು ದೇಹದಿಂದ ಹೊರಹೊರಟು ಬ್ರಹ್ಮಾಂಡದಲ್ಲಿ ಅಂತರ್ಗತವಾಗಿರುವ ಸರ್ವವ್ಯಾಪಿ ಪರಮಾತ್ಮನಲ್ಲಿ ವಿಲೀನವಾಗುತ್ತದೆ.

ಏಸುಕ್ರಿಸ್ತ [illegible] ಆತ್ಮವನ್ನು [illegible] ಎಂಬ ಬಗ್ಗೆ ಅವನ ಶಿಷ್ಯರು, ಸುವಾರ್ತಾ ಪ್ರಸಾರಕರು ಹೇಳಿದ ದಾಖಲೆ ಇದ್ದರೆ, ಬಸವಣ್ಣನವರು ಸ್ವತಃ ತಾವೇ ಬರೆದ ವಚನಗಳು ನಮಗೆ ದಾಖಲೆಗಳಾಗಿ ಇವೆ. ಶರಣ ಮೇಳಕ್ಕೆ ಬಂದಾಗ ಶರಣ-ಡಾ॥ ಜವರೇಗೌಡರು ಹೇಳಿದರು, "ಬೇರೆ ಎಲ್ಲ ಪ್ರವಾದಿಗಳ ಸಂದೇಶಗಳು ಇನ್ನೊಬ್ಬರ ಮೂಲಕ ಸಾಗಿ ಬಂದಿವೆ. ಏಕೆಂದರೆ ಅವರಲ್ಲಿ ಎಷ್ಟೋ ಜನ ನಿರಕ್ಷರಕುಕ್ಷಿಗಳು. ಆದರೆ ಬಸವಣ್ಣನವರು ಸ್ವತಃ ಬರೆದುದರಿಂದ ಅವರ ಮಾತಿನಲ್ಲಿಯೇ ಅವರ ಸಂದೇಶಗಳು ಸಾಗಿಬಂದಿವೆ."

ನಮ್ಮಲ್ಲಿ ಅಜ್ಞಾನದಿಂದ ತಿರುಚಿದವರು, ದುರುದ್ದೇಶದಿಂದ ವಿಕೃತಗೊಳಿಸಿದವರು, ಪ್ರತಿ ಮಾಡುವಾಗ ಲೋಪ-ದೋಷ ಮಾಡಿದವರು, ಈ ಎಲ್ಲರ ಮಧ್ಯೆಯೂ ವಚನ ಸಾಹಿತ್ಯ ತನ್ನ ಜೀವಂತಿಕೆ ಉಳಿಸಿಕೊಂಡಿರುವುದಕ್ಕೆ ಇಂದು ಆಶ್ಚರ್ಯ ಪಡಬೇಕಾಗಿದೆ.

ಹೀಗೆ ಬಸವಣ್ಣನವರು ಸ್ವಯಂ ಇಚ್ಛೆಯಿಂದ, ಯೋಗಶಕ್ತಿಯಿಂದ ಶ್ರಾವಣ ಶುದ್ಧ ಪಂಚಮಿಯ ದಿವಸ ಲಿಂಗೈಕ್ಯರಾಗಿದ್ದಾರೆ. ರೋಗರುಜಿನ, ಹೃದಯಾಘಾತ, ವಧೆ ಇದಾವುದೂ ಇಲ್ಲದೆ ಹೀಗೆ ಸ್ವಯಂ ಇಚ್ಛೆಯಿಂದ ಲಿಂಗೈಕ್ಯರಾಗಿರುವುದನ್ನೇ ಅಧ್ಯಾತ್ಮ ಜೀವನದ ಅನುಭವ-ಆನಂದ ಏನೂ ಇರದ ವೈಚಾರಿಕ ಸಾಹಿತಿಗಳು[ಚಂಪಾರಂತಹವರು] ಆತ್ಮಹತ್ಯೆ ಎನ್ನುವರೆ ? ಆತ್ಮಹತ್ಯೆ ಎನ್ನಬಹುದೇ ನಾವು ?

ಸಾಮಾನ್ಯವಾಗಿ ಸಾಮಾಜಿಕ ಕ್ರಾಂತಿಯಲ್ಲಿ ಆಸಕ್ತರಾದವರು ಬಹಿರ್ಮುಖಿಗಳು (Extrovert) ಇರುತ್ತಾರೆ. ಅಧ್ಯಾತ್ಮ-ಯೋಗ ಮುಂತಾದುವುಗಳಲ್ಲಿ ಆಸಕ್ತಿ ಇರುವುದಿಲ್ಲ. ಇನ್ನು ಕೆಲವರಿಗೆ ವಿಶೇಷ ಹವ್ಯಾಸಗಳಾಗಿ ವಿಪರೀತ ಕುಡಿತ, ಸಿಗರೇಟು ಸೇದುವಿಕೆ ಮುಂತಾದವು ಅಳವಟ್ಟಿರುತ್ತವೆ. ಎಡಗೈಯಲ್ಲಿ ಸಿಗರೇಟು ಹಿಡಿದು ಹೊಗೆ ಬಿಡುತ್ತ ಮಧ್ಯೆ ಮಧ್ಯೆ ಕುಡಿಯುತ್ತ [ನೀರನ್ನಲ್ಲ ಸೆರೆಯನ್ನು] ಬಲಗೈಯಲ್ಲಿ ಲೇಖನಿ ಹಿಡಿದು ಕ್ರಾಂತಿಕಾರಿ ಬರಹಗಳನ್ನು ಬರೆಯುತ್ತ ವ್ಯವಸ್ಥೆಯನ್ನು ಟೀಕಿಸುವವರು ತಾವೇ ನಿಜ ಕ್ರಾಂತಿಕಾರಿಗಳೆಂದು ಭಾವಿಸಿರುತ್ತಾರೆ. ಅವರ ದೃಷ್ಟಿಯಲ್ಲಿ ಸಚ್ಚಾರಿತ್ರ, ಪ್ರಾರ್ಥನೆ-ಧ್ಯಾನ-ಯೋಗ ಇವುಗಳಲ್ಲಿ ಆಸಕ್ತಿ ತಳೆದು ಜೊತೆಗೆ ಸಮಾಜದಲ್ಲಿ ಪರಿವರ್ತನೆ ತರಬೇಕೆಂಬ ಬಸವಣ್ಣನವರು-ಗಾಂಧೀಜಿ-ಜೆ. ಪಿ ಯಂತಹವರು ವಿಲಕ್ಷಣವಾಗಿ ಕಾಣುತ್ತಾರೆ. ಕ್ರಾಂತಿಕಾರಿಗಳೇ ಅಲ್ಲವಾಗಿ ತೋರುತ್ತಾರೆ. ಬಸವಣ್ಣನವರು ಈ ಭ್ರಾಂತಿಯನ್ನೇ ಕ್ರಾಂತಿ ಎಂದು ತಿಳಿಯದೆ ಧರ್ಮ-ಅಧ್ಯಾತ್ಮಗಳ ನೆಲೆಗಟ್ಟಿನ ಮೇಲೇ ಎಲ್ಲವನ್ನೂ ಯೋಜಿಸಿದರು.

ಗ್ರಹ ಬಂದು ಆವರಿಸಲೊಡನೆ ತನ್ನ ಮರೆಸುವುದು.
ಮತ್ತೊಂದಕ್ಕಿಂಬುಗೊಡಲೀಯದಯ್ಯಾ
ಕೂಡಲ ಸಂಗಮದೇವರ ಅರಿವು ಅನುಪಮವಾಗಲೊಡನೆ
ಬೆವಹಾರದೊಳಗಿರಲೀಯದಯ್ಯಾ. (ಬ, ಷ, ವ, ೯೦೯)

ಗರ (Shock) ಅಥವಾ ಬೇರಾವ ದವ್ವ-ಭೂತ ಮುಂತಾದುವು ಬಂದು ಬಡಿದುಕೊಳ್ಳುತ್ತಲೇ ವ್ಯಕ್ತಿ ತನ್ನತನ ಕಳೆದುಕೊಂಡು, ಅದು ಆಡಿಸಿದಂತೆ ಆಡುವನು.

ಅದರಂತೆ ಪರಮಾತ್ಮನ ಜ್ಞಾನ, ಅನುಭವ ಆಳವಡುತ್ತಲೇ ತನ್ನತನವು ಅಳಿದು ಹೋಗುವುದು. ಮನಸ್ಸು ಆ ಆನಂದ ಸರಸಿಯಿಂದ ಹೊರಬರಲು ಇಷ್ಟಪಡುವುದೇ ಇಲ್ಲ.

ಇದು ಧರ್ಮಪಿತರ ಅನುಭವ, ಇನ್ನಿತರ ಅಧ್ಯಾತ್ಮ ಜೀವಿಗಳ ಅನುಭವ ಕೂಡ. ಆದರೆ, ಸಮಾಜ, ದೀನ-ದಲಿತರು, - ಇವೆಲ್ಲವುಗಳ ಬಂಧನ ಬಿಡುಗಡೆಗಾಗಿ ಬಸವಣ್ಣನವರು, ಮನಸ್ಸನ್ನು ಬಹಿರ್ಮುಖಿಗೊಳಿಸಿಕೊಂಡು ಲೋಕೋದ್ಧಾರಕ್ಕೆ ನಿಂತರು. ಸ್ವಭಾವತಃ ಯೋಗಿ, ಅನುಭಾವಿಯಾಗಿದ್ದು ಸಮಾಜ ಸುಧಾರಣೆಗೆ ನಿಂತ ಅಪರೂಪದ ವ್ಯಕ್ತಿತ್ವ ಉಳ್ಳವರು ಬಸವಣ್ಣನವರು. ತಾವು ಕಂಡುಕೊಂಡ ಎಲ್ಲ ದಿವ್ಯಾನುಭವ, ಆನಂದಗಳನ್ನು ಇತರರೂ ಪಡೆಯಬೇಕೆಂದು ಇಷ್ಟಪಟ್ಟವರು.

ಇಂಥವರು ಇಚ್ಛಾಮರಣಿಯಾಗಿ ಲಿಂಗೈಕ್ಯರಾಗಲು ಬಯಸುವುದು ಆತ್ಮಹತ್ಯೆಯಾದೀತೆ ? ಆತ್ಮಹತ್ಯೆ ಹೇಡಿಯ ಲಕ್ಷಣ, ಇಚ್ಛಾಮರಣ ಸಿದ್ಧಪುರುಷನ ಲಕ್ಷಣ. ಆತ್ಮಹತ್ಯೆಯಲ್ಲಿ ಬದುಕನ್ನು ಎದುರಿಸಲಾರದ ಹೇಡಿತನವಿದ್ದರೆ, ಇಚ್ಛಾಮರಣದಲ್ಲಿ ಬದುಕಿನ ಮಣಿಹ (ಗುರಿ, ಕರ್ತವ್ಯ) ಪೂರೈಸಿದ ಸಂತೃಪ್ತಿ ಇರುತ್ತದೆ. ಆತ್ಮಹತ್ಯೆ ಅಜ್ಞಾನಿಯ ಪ್ರಯತ್ನ ; ಇಚ್ಛಾಮರಣ ಜ್ಞಾನದ ಪರಾಕಾಷ್ಠೆ ತಲ್ಪಿದ ಮಹಾತ್ಮನ ಸಾಹಸ. ಆತ್ಮಹತ್ಯೆಗೆ ಎಳಸುವವನಲ್ಲಿ ಅಪಕ್ವತೆ ಇದ್ದರೆ, ಇಚ್ಛಾಮರಣಿಯಲ್ಲಿ ಸಂಪೂರ್ಣ ಪಕ್ವತೆ ಇರುತ್ತದೆ. ಆತ್ಮಹತ್ಯೆ ಮಾಡಿಕೊಳ್ಳುವವ ನನಗಾರೂ ಇಲ್ಲ ಎಂಬ ಒಂಟಿತನ, ನಿರಾಶೆ ಎದುರಿಸುತ್ತಿದ್ದರೆ ಇಚ್ಛಾಮರಣಿಯು ದೇವರಿಗೆ ಪ್ರೀತಿಪಾತ್ರನಾದವನು ತಾನು ಎಂಬ ಭಾವತಳೆದಿರುತ್ತಾನೆ. ಕರ್ತನ ಇಚ್ಛೆ ಪೂರೈಸಿದವನು ತಾನು ಎಂಬ ಸಂತೃಪ್ತಿ ಹೊಂದಿರುತ್ತಾನೆ.

ಇಚ್ಛಾಮರಣದ ಅಗತ್ಯವೇನಿತ್ತು ?

ಕೆಲವರು ಪ್ರಶ್ನಿಸಬಹುದು, ಸಾವು ತಾನಾಗಿ ಬಂದಾಗ ಸ್ವೀಕರಿಸಬಹುದಿತ್ತು ; ತಾವಾಗಿ ಏಕದನ್ನು ಆಹ್ವಾನಿಸಬೇಕಿತ್ತು ? ಅನುಭವ ಮಂಟಪದ ಶರಣ ಸಮೂಹದಲ್ಲಿ ಕೆಲವೇ ಕೆಲವರು ಆಳವಾದ ಯೋಗ ಸಾಧನೆಯಲ್ಲಿ ತಲ್ಲೀನರಾದವರು. ಉಳಿದವರೆಲ್ಲ ಧರ್ಮಾನುಯಾಯಿಗಳಾಗಿ ಲಿಂಗನಿಷ್ಠಾಪರರಾಗಿ ಬಾಳಿದವರು. ಷಟಸ್ಥಲಗಳಲ್ಲಿ ಭಕ್ತಸ್ಥಲದಲ್ಲಿ ನಿಂತವರೇ ಬಹುಪಾಲು. ಬಹಳವೆಂದರೆ ಭಕ್ತನ ಭಕ್ತ, ಭಕ್ತನ ಮಹೇಶ ಹೀಗೆ ಅನುಭವ ಹೊಂದಿ ಭಕ್ತನ ಐಕ್ಯಸ್ಥಲದ ಅನುಭವ ಹೊಂದುತ್ತಾರೆ. ಬಹುಪ್ರಾಣಲಿಂಗಿ ಸ್ಥಲದಿಂದ ತೀವ್ರತರ ಯೋಗ ಸಾಧನೆ ಆರಂಭವಾಗುತ್ತದೆ. ಬಹುಪಾಲು ಶರಣರು ಕಾಯಕ - ದಾಸೋಹ - ಲಿಂಗನಿಷ್ಠೆ - ಗಣಮೇಳಾಪ ಇವುಗಳಲ್ಲೇ ಸಮಾಧಾನ ಹೊಂದಿದ್ದರು.

ಧರ್ಮ [illegible] ಸಿದ್ಧರಾಮೇಶ, ಚೆನ್ನಬಸವಣ್ಣ, ಅಕ್ಕಮಹಾದೇವಿ, ನೀಲಾಂಬಿಕೆ, ಹಡಪದ ಅಪ್ಪಣ್ಣ–ಅವನ ಧರ್ಮಪತ್ನಿ ಲಿಂಗಮ್ಮ, ಅಕ್ಕನಾಗಮ್ಮ, ಮುಂತಾದವರು ವಿಶೇಷ ಸಾಧನೆಯಲ್ಲಿ ತೊಡಗಿದವರು. ಅದಕ್ಕಾಗಿಯೇ ಅವರು ವಿಶೇಷ ಗುಹೆಗಳನ್ನು ನಿರ್ಮಿಸಿಕೊಂಡುದನ್ನು ಕಾಣಬಹುದು. ಕಲ್ಯಾಣದಲ್ಲಿ ಇಂದಿಗೂ ಅವರವರ ಹೆಸರಿನಲ್ಲೇ ಆ ಗವಿಗಳಿವೆ. ಇಂಥಾ ಮೇಲ್ಮಟ್ಟದ ಸಾಧಕರೆಲ್ಲರೂ ಇಚ್ಛಾಮರಣಿಗಳಾಗಿ ಲಿಂಗೈಕ್ಯರಾಗಿರುವುದನ್ನು ಗಮನಿಸಬಹುದು.

ಅಕ್ಕಮಹಾದೇವಿ ಕದಳಿಗೆ ಹೊರಟು ನಿಂತಾಗ ತನ್ನ ದೇಹವನ್ನು ವಿಸರ್ಜಿಸುವ ತಂತ್ರವನ್ನು ಹೇಳಿಕೊಡಬೇಕೆಂದು ಪ್ರಭುವನ್ನು ಕೇಳುತ್ತಾಳೆ.

ಕರ್ಮವೆಂಬ ಕದಳಿ ಎನಗೆ ಕಾಯವೆಂಬ ಕದಳಿ ನಿಮಗೆ
ಪಾಪವೆಂಬ ಕದಳಿ ಬಸವಣ್ಣಂಗೆ, ಭಾವವೆಂಬ ಕದಳಿ ಚೆನ್ನಬಸವಣ್ಣಂಗೆ
ಬಂದ ಬಂದ ಭಾವ ಸಲೆ ಸಂದಿತ್ತು
ಎನ್ನಂಗದವಸಾನವ ಹೇಳಾ, ಚೆನ್ನಮಲ್ಲಿಕಾರ್ಜುನಾ.

ಆಗ ಅಲ್ಲಮ ಪ್ರಭುಗಳು ಯಾವ ರೀತಿ ದೇಹವನ್ನು ವಿಸರ್ಜಿಸಿ ಆತ್ಮವನ್ನು ದೇಹದಿಂದ ಪ್ರತ್ಯೇಕಿಸಿ, ದೇವನಲ್ಲಿ ಸಮರಸಗೊಳಿಸಬೇಕು ಎಂಬ ತಂತ್ರ (Technique) ವನ್ನು ಈ ವಚನದಲ್ಲಿ ಹೇಳುತ್ತಾರೆ.

ನೀನಾನೆಂಬುಭಯ ಸಂಗವಳಿದು ತಾನು ತಾನಾದ
ತ್ರಿಕೂಟವೆಂಬ ಮಹಾಗಿರಿಯ ತುಟ್ಟತುದಿಯ ಮೆಟ್ಟಿ ನೋಡಲು
ಬಟ್ಟಬಯಲು ಕಾಣಬಹುದು ನೋಡಾ
ಆ ಬಯಲ ಬೆರೆಸುವರೆ ತ್ರಿಕೂಟ ಗಿರಿಯೊಳಗೊಂದು
ಕಾಣಬಾರದ ಕದಳಿಯುಂಟು ನೋಡಾ
ಕದಳಿಯ ಕಳದಲ್ಲಿ ಒಳಹೊಕ್ಕು ನೋಡಲು
ತೊಳಗಿ ಬೆಳಗುವ ಜ್ಯೋತಿಯುಂಟು ಕೇಳಾ
ನಡೆಯಲ್ಲಿಗೆ ತಾಯೆ, ಗುಹೇಶ್ವರ ಲಿಂಗದಲ್ಲಿ
ಪರಮ ಪದವಿ ನಿನಗೆ ಸ್ವಯವಹುದು ನೋಡಾ ಅ. ಪ್ರ. ವ. ೧೧೯೬

[ತರಂಗಿಣಿಯಲ್ಲಿ ಈ ವಚನದ ಅರ್ಥವನ್ನು ವಿವರವಾಗಿ ಬರೆಯಲಾಗಿದೆ]

ಈ ಪ್ರಯೋಗವನ್ನು ಮಾಡಲು ನಿರ್ಜನವಾದ ಸ್ಥಳ, ಏಕಾಂತ ಬೇಕು. ಏಕೆಂದರೆ ಕುಂಡಲಿನಿ ಶಕ್ತಿ, ಪ್ರಾಣವಾಯುವನ್ನು ಮೇಲೆತ್ತಿದ್ದಾಗ ಹೊರಗಿನಿಂದ ಏನಾದರೂ ಆತಂಕ, ಸದ್ದು ಎರಗಿದರೆ ಸಾಧಕರಿಗೆ ತೊಂದರೆಯಾಗುವುದು. ಉಳಿದೆಲ್ಲ ಸಾಧನೆಯನ್ನು ಪೂರೈಸಿಕೊಂಡು, ಅಂತಿಮವಾದ ಈ ತಂತ್ರವನ್ನು ಪ್ರಯೋಗಿಸಲು ಬಸವಾದಿ ಪ್ರಮಥರು ಕಾಯ್ದಿದ್ದರು. ಯೋಗ ವಿದ್ಯೆಯ ಎಲ್ಲ ತಂತ್ರಗಳನ್ನು ಪ್ರಯೋಗಿಸುವ ಆಕಾಂಕ್ಷೆ ಅವರಿಗಿರುವುದು ಸ್ವಾಭಾವಿಕ.

ವಿದ್ಯುತ್ ಶಾಕ್ ಹೇಗಿರುವುದೆಂದು ತಿಳಿಯಲು ಹೆನ್ರಿ ಕಾವೆಂಡಿಶ್ ತನ್ನ ಮೇಲೆ ಪ್ರಯೋಗಿಸಿಕೊಂಡಂತೆ, ಒಂದು ವಿಷಯುಕ್ತ ರಾಸಾಯನಿಕವನ್ನು ಕಂಡು ಹಿಡಿದ ರಸಾಯನ ತಜ್ಞನೊಬ್ಬ (ನನಗೆ ಹೆಸರು ಮರೆತಿದೆ) ಅದರ ಎಲ್ಲ ಭೌತಿಕ ಗುಣಗಳನ್ನು ಬರೆದು, ರಾಸಾಯನಿಕ ಪ್ರಭಾವ ಬರೆಯುವಾಗ ಬಲಗೈಲಿ ಲೇಖನಿ ಹಿಡಿದು ಎಡಗೈಯಿಂದ ನುಂಗಿ, ಇದು ವಿಷ, ಎಂದು ಬರೆದು ಪ್ರಾಣಬಿಟ್ಟನಂತೆ. ವಿಜ್ಞಾನಿಗಳಿಗಿಂತಲೂ ಹೆಚ್ಚಿನ ಕುತೂಹಲ ಯೋಗ ಸಾಧಕರಿಗೆ, ಎಲ್ಲ ಅಮೂಲ್ಯ ಅನುಭವಗಳನ್ನೂ ಪಡೆಯುವ ಆತುರ ಅವರಿಗಿರುವುದು.

ಹೀಗಾಗಿ ಈ ಅಂತಿಮ ಯೋಗತಂತ್ರವನ್ನು ಪ್ರಯೋಗಿಸಲು ಬಸವಣ್ಣನವರು ಕಾಯುತ್ತಿದ್ದು, ತಮ್ಮ ಮರ್ತ್ಯದ ಮಣಿಹ ಪೂರೈಸಿತು ಎಂದು ಅನಿಸಿದಾಗ ಇದನ್ನು ಪ್ರಯೋಗಿಸಿದ್ದಾರೆ. ತಾಯಿ ನೀಲಾಂಬಿಕೆ, ಶರಣ ಹಡಪದ ಅಪ್ಪಣ್ಣನವರು ಸಹ ಇದೇ ರೀತಿ ಇಚ್ಛಾಮರಣಿಗಳಾಗಿ ದೇಹಬಿಟ್ಟುದನ್ನು ಕಾಣಬಹುದು. ಕಾಲಜ್ಞಾನ ವಚನದಲ್ಲಿ ಸೂರ್ಯೋದಯವಾದ ಇಪ್ಪತ್ತೆಂಟು ಗಳಿಗೆಗೆ ಬಸವಣ್ಣನವರು ಸಂಗಮನಾಥನಲ್ಲಿ ಅಡಗಿದರು ಎಂದು ಎರಡು ಸಲ ಉಲ್ಲೇಖಿಸಿರುವುದನ್ನು ಕಾಣಬಹುದು. "ನೀನು ಆತ್ಮಹತ್ಯೆ ಮಾಡಿಕೊಂಡೆ, ಹೀಗೇಕೆ ಮಾಡಿದೆ? ಎಂದಾಗಲೀ, ಮತಾಂಧರಿಂದ ಕೊಲ್ಲಲ್ಪಟ್ಟೆ; ಅವರೆಂಥಾ ದುಷ್ಟರು" ಎಂದಾಗಲೀ ಯಾವ ಶರಣರೂ ಎಲ್ಲಿಯೂ ಪ್ರಸ್ತಾಪಿಸಿಲ್ಲ ಎಂಬುದು ಗಮನಾರ್ಹ. ಆದ್ದರಿಂದ ಚಂಪಾರ ಆತ್ಮಹತ್ಯೆಯ ಕಟ್ಟು ಕಥೆ, ಚಿತ್ರದುರ್ಗದ ಕಿರಿಯ ಶ್ರೀಗಳ ಕೊಲೆಯ ಕಥೆಯ ಊಹೆ ಎರಡೂ ನೆಲೆ ಕಾಣದೆ ಬಿದ್ದು ಹೋಗುವುವು.

ಆತ್ಮಹತ್ಯೆಯ ಪ್ರಯತ್ನವಾದರೂ ಏಕೆ?

ಒಬ್ಬ ವ್ಯಕ್ತಿ ಸಾಂಸಾರಿಕ ಜೀವನದಲ್ಲಿ ನಿರಾಶೆಗೊಂಡರೆ, ತನ್ನವರು ಯಾರೂ ಇಲ್ಲ ಎಂಬ ಒಂಟಿತನ ಕಾಡಿದರೆ, ಅವಮಾನಿತನಾದರೆ ಆತ್ಮಹತ್ಯೆಗೆ ಎಳೆಸಬಹುದು. ಸಮಾಜ ಪರಿವರ್ತನೆಯ ಕಾರ್ಯ ಪೂರ್ಣಗೊಳ್ಳದಿದ್ದರೆ, ತಾನು ನಿರೀಕ್ಷಿಸಿದ ಮಟ್ಟಕ್ಕೆ ಸಮಾಜ ಏರದಿದ್ದರೆ-ಈ ಕಾರಣಕ್ಕೆ ಯಾರೂ ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ. ಸಮಾಜದ ಸೀಮಿತ ಸ್ವಭಾವ ಸಮಾಜ ಸುಧಾರಕರಿಗೆ ತಿಳಿದೇ ಇರುತ್ತದೆ.

ಬಸವಣ್ಣನವರ ಸಾಂಸಾರಿಕ ಜೀವನ ಅತ್ಯಂತ ಆನಂದಮಯವಾಗಿತ್ತು. ತಮ್ಮ ಹಾದಿಯಲ್ಲೇ, ಹೆಜ್ಜೆಯಲ್ಲಿ ಹೆಜ್ಜೆ ಇಟ್ಟು ನಡೆಯುವ ಪತ್ನಿ ದೊರತಿದ್ದಳು. ಇನ್ನು ಸಮುದಾಯ ಜೀವನದ ಬಗೆಗೆ ಹೇಳುವುದೇ ಬೇಡ. ಅಸಂಖ್ಯಾತರು ಅವರನ್ನು ತಮ್ಮ ಪ್ರಾಣವನ್ನಾಗಿ ಭಾವಿಸಿದ್ದರು. ಅಲ್ಲಮಪ್ರಭು, ಮಾಚಿದೇವರೇ ಆದಿಯಾಗಿ ಎಲ್ಲ ಶರಣರು ಅವರನ್ನು ತುಂಬು ಹೃದಯದಿಂದ ಗೌರವಿಸುತ್ತಿದ್ದರು. ಅವರಿಗೆ ಗಡಿಪಾರು ನೀಡಲ್ಪಟ್ಟಾಗ ಬೃಹತ್ ಶರಣ ಸಮೂಹ ಅದನ್ನು ಒಪ್ಪಿಕೊಳ್ಳಬಾರದೆಂದು, ರಾಜನನ್ನು ತೋಳ್ಬಲದಿಂದ ಎದುರಿಸೋಣ ಎಂದು ಆಗ್ರಹಪಡಿಸಿತು. ರಕ್ತಪಾತದಿಂದ ಅಸ್ತವ್ಯಸ್ತತೆ ಉಂಟಾಗುವುದೇ ವಿನಾ ಪರಿವರ್ತನೆಯಲ್ಲ ಎಂದು ನಂಬಿದ್ದ ಶಾಂತಿ

ದೂತ ಬಸವಣ್ಣನವರು ಗಡಿಪಾರನ್ನೇ ಮೌನವಾಗಿ ಸ್ವೀಕರಿಸಿ ಸ್ವಯಂ ಪ್ರೇರಣೆಯಿಂದ ಹೊರಟರು. ಸಂಗಮವನ್ನು ತಲುಪುವ ದಾರಿಯುದ್ದಕ್ಕೂ ಜನರಿಂದ ಆತ್ಮೀಯ ಸ್ವಾಗತ ಸಿಕ್ಕಿತು. ಅವರ ಬೋಧನಾ ಕಾರ್ಯ ಮುಂದುವರಿಯಿತು.

ಪಾಶುಪತ ಗುರುಕುಲವಾಗಿದ್ದ ಸಂಗಮದ ಗುರುಕುಲಾಧಿಪತಿ ಜಾತವೇದ ಮುನಿಗಳು ಶಿವೈಕ್ಯರಾಗಿ, ದೇವರಾಜ ಮುನಿಪ ಉತ್ತರಾಧಿಕಾರಿಯಾಗಿದ್ದ. ಬಸವಣ್ಣನವರ ಸಹಪಾಠಿಯಾಗಿದ್ದ, ಆತ ತುಂಬು ಗೌರವದಿಂದ ಸ್ವಾಗತಿಸಿದನಲ್ಲದೆ ಅಲ್ಲಿಗಾಗಲೇ ಲಿಂಗಾಯತ ಧರ್ಮವನ್ನು ಸ್ವೀಕಾರ ಮಾಡಿದ್ದ. ಹೀಗೆ ನಿರಾಶೆಗೆ ಯಾವ ಕಾರಣವೂ ಬಸವಣ್ಣನವರಿಗೆ ಉಳಿದಿಲ್ಲ, ಜೊತೆಗೆ ಬಸವಣ್ಣನವರು ಅಸಾಮಾನ್ಯ ಧೈರ್ಯಶಾಲಿಗಳು; ಬದುಕನ್ನು ಎದುರಿಸುವುದರಲ್ಲೇ ಆನಂದ ಹೊಂದುವವರು. ಹೀಗಿರುವಾಗ ಅವರು ಆತ್ಮಹತ್ಯೆಯ ವಿಚಾರವನ್ನು ಕನಸಿನಲ್ಲೂ ಮಾಡಿರರು. ಸೂರ್ಯನಿಂದ ಸಿಡಿದ ಕಿಡಿಯೊಂದು ಅತುಳ ಪ್ರಕಾಶದಿಂದ ಕೂಡಿದ್ದರೆ, ಸೂರ್ಯನು ಎಂಥಾ ಪ್ರಕಾಶ ಹೊಂದಿರಲಾರ ? ! ಬಸವಣ್ಣನವರ ತತ್ತ್ವದ ಸಂಸ್ಕಾರ ಹೊಂದಿದ ಜನರೇ ಎಂತಹ ಆತ್ಮಬಲ ಹೊಂದಿರುವರೆಂದ ಮೇಲೆ ಆ ಸಂದೇಶ ನೀಡಿದ ಬಸವ ಭಾಸ್ಕರ ಎಂತಹ ಆತ್ಮಬಲದ ಕೇಂದ್ರವಾಗಿರಬಹುದು ! ಆದ್ದರಿಂದ ಚಂಪಾರಂತಹವರು ಬಾಯಿ ಚಪಲದಿಂದ ಬಡಬಡಿಸಿ ಮಹಾತ್ಮರನ್ನು ಅವಹೇಳನ ಮಾಡುವ ಹವ್ಯಾಸ ಕೈಬಿಡುವುದೊಳ್ಳೆಯದು.

ಚಿತ್ರದುರ್ಗದ ಬೃಹನ್ಮಠದ ಶ್ರೀಗಳು ಮುಂದನರಿಯದೆ ಮಾತನಾಡಿ ಬಿಟ್ಟರು. ಈ ಬಗ್ಗೆ ಸಾಕಷ್ಟು ಅಧ್ಯಯನ ಮಾಡಿರುವ ಜನರಿಂದ ತೀವ್ರ ಪ್ರತಿಭಟನೆ ಬಂದಾಗ ತಾವು ಹಾಗೆ ಹೇಳಿಲ್ಲವಾಗಿಯೂ, ಪತ್ರಿಕೆಯವರು ತಪ್ಪಾಗಿ ವರದಿ ಮಾಡಿರುವುದಾಗಿಯೂ ನುಣುಚಿಕೊಳ್ಳಲು ಯತ್ನಿಸಿದರು. ಬೀದರಿನಲ್ಲಿ ರಾಷ್ಟ್ರೀಯ ಬಸವ ದಳದ ಅಧ್ಯಕ್ಷ ಶರಣ. ಬಸವಕುಮಾರ್ ಪಾಟೀಲರು ಮತ್ತು ಲಿಂಗಾಯತ ಸಮಾಜ ಅಧ್ಯಕ್ಷ ಶರಣ. ನಾಗಶೆಟ್ಟಪ್ಪ ಗೂನಳ್ಳಿ ಮುಂತಾದವರು ತೀವ್ರವಾದ ಪ್ರತಿಭಟನೆ [13–4–1994 ರ ಪ್ರಜಾವಾಣಿ ವರದಿ] ಮಾಡಿದ್ದಾರೆ. ಮುಂದೆ 20 ರ ಪ್ರಜಾವಾಣಿ ಸಂಚಿಕೆಯಲ್ಲಿ ಶ್ರೀಗಳ ಹೇಳಿಕೆಯಲ್ಲಿ ಪರಿವರ್ತನೆಯಾಗಿರುವುದಾಗಿ ವರದಿಯಾಗಿದೆ.

"ಬಸವಣ್ಣನವರ ಕೊಲೆಯಾಗಿದೆ ಎಂಬ ತಮ್ಮ ಹೇಳಿಕೆ ಕೇವಲ ಅಭಿಪ್ರಾಯವೇ ಹೊರತು ಇದೇ ಅಂತಿಮವಲ್ಲ. ನಿರ್ದಿಷ್ಟವಾಗಿ ಹೀಗಿಯೇ ಆಗಿದೆ ಎಂದು ಹೇಳುವುದು ಕಷ್ಟಕರ. ಸ್ಪಷ್ಟ ಸಾಕ್ಷ್ಯಾಧಾರಗಳು ಬೇಕಾಗುತ್ತವೆ" ಎಂದಿದ್ದಾರೆ. ಈ ರೀತಿಯ ಮಾತಿನಿಂದ, ಕೇವಲ ರಾಷ್ಟ್ರೀಯ ಬಸವ ದಳ, ಬೀದರ ಮತ್ತು ಇನ್ನಿತರ ಬಸವ ತತ್ತ್ವಾನುಯಾಯಿಗಳ ಪ್ರತಿಭಟನೆಯಿಂದ ಪರಿವರ್ತನಾ ಹೇಳಿಕೆ ನೀಡಿದ್ದಾರೆಯೇ ವಿನಾ ಅಂತಃಕರಣ ಪೂರ್ವಕವಾಗಿ ಬದಲಾಗಿ, ಒಪ್ಪಿಕೊಂಡಿಲ್ಲ ಎಂಬುದು ಮನದಟ್ಟಾಗುತ್ತದೆ.

ಪೂಜ್ಯ ಶ್ರೀಗಳಲ್ಲಿ ಅಧ್ಯಯನದ ಕೊರತೆ ಎದ್ದು ಕಾಣುತ್ತದೆ. ಟೂತ್‌ಪೇಸ್ಟ್ ಅಥವಾ ಮುಲಾಮಿನ ಟ್ಯೂಬುಗಳು ತಮ್ಮೊಳಗಿರುವ ವಸ್ತುವನ್ನು ಹೊರಹಾಕಬಲ್ಲವೇ ವಿನಾ ಹೊರಗಿನಿಂದ ಯಾವ ವಸ್ತುವನ್ನೂ ಒಳಗೆ ಸೇರಿಸಿಕೊಳ್ಳಲಾರವು. ಹಾಗೆಯೇ ಮಠ–ಪೀಠಗಳಿಗೆ ಅಧಿಕಾರಿಗಳಾಗುತ್ತಲೇ ಆ ಬಗ್ಗೆ ಅಧ್ಯಯನ ಮಾಡದೆ, ಗೊತ್ತಿಲ್ಲದ ವಿಷಯಗಳಲ್ಲಿ ಹೇಳಿಕೆಗಳನ್ನು ಕೊಟ್ಟು ಗೊಂದಲ ಎಬ್ಬಿಸುವ ಅಗತ್ಯವಾದರೂ ಏನಿರುವುದು ?

ಬಸವಣ್ಣನವರು ಆತ್ಮಹತ್ಯೆ ಮಾಡಿಕೊಂಡರೆಂದಾಗಲೀ, ಕೊಲೆಯಾದರೆಂದಾಗಲೀ ಯಾವ ಕಾವ್ಯಗಳಲ್ಲೂ ಇಲ್ಲ, ಕಾಲಜ್ಞಾನದಲ್ಲಿ ಇಲ್ಲ, ವಚನಗಳಲ್ಲಿಯೂ ಇಲ್ಲ. ಕಾಲಜ್ಞಾನ ವಚನಗಳಲ್ಲಿ ಕೆಲವು ತೀರಾ ಮುಂದೆ ಆಗುವ ಭವಿಷ್ಯವನ್ನು ಹೇಳುತ್ತವಾದರೂ, ಬಹುಪಾಲು ಬಸವಣ್ಣನವರ ಜೀವನ ಚರಿತ್ರೆ, ಕಲ್ಯಾಣ ಕ್ರಾಂತಿ, ಅದರ ನಂತರ ಆದ ಘಟನೆಗಳ ಬಗ್ಗೆ ವಿವರ ನೀಡುತ್ತವೆ. ಅಂದಾಗ ಯಾವ ರೀತಿ ಸ್ವಾಮೀಜಿ ಈ ಅನಿಸಿಕೆ ತಾಳಿದರು ? ಕೇವಲ ಧರಣಿ ಪಂಡಿತನ ಬಿಜ್ಜಳ ರಾಜ ಚರಿತ್ರೆ ವೈದಿಕ–ವೈಷ್ಣವ ಮತಾಂಧತೆಯ ದೃಷ್ಟಿಕೋನದಿಂದ ಬರೆಯಲ್ಪಟ್ಟಿದ್ದು ಅದರಲ್ಲಿ ಬಸವಣ್ಣನವರು ಖಳನಾಯಕರಾಗುತ್ತಾರೆ. ಗಾಂಧೀಜಿ ಬಗ್ಗೆ ಸಿ.ಎಫ್. ಆಂಡ್ರೂಸ್ ನಂಥವರು ಬರೆದುದು ಮಾನ್ಯವೊ ನಾಥೂರಾಮ್ ಗೋಡ್ಸೆಯ ದೃಷ್ಟಿಕೋನದಿಂದ ಬರೆದುದು ಮಾನ್ಯವೋ ? ಕೊಲೆಯಾದರೆ ಹುತಾತ್ಮರಾಗಿ ಗೌರವ ಹೊಂದುವರು ನಿಜ, ಆದರೆ ಇಲ್ಲದ ಕೊಲೆಯನ್ನು ಅವರಿಗೆ ತಲೆಗೆ ಕಟ್ಟುವುದೇಕೆ ? ಎಲ್ಲ ಆಧಾರಗಳು ಲಿಂಗೈಕ್ಯರಾದರೆಂದು ಹೇಳುವಾಗ ಆಧಾರವಿಲ್ಲದೆ ಕೊಲೆಯಾದರೆಂದು ಹೇಳುವ ಧೈರ್ಯ ಹೇಗೆ ತಳೆದರು ?

"ಬಸವಣ್ಣನವರ ಅಂತ್ಯ ಹೇಗೆ ಆಯಿತು ಎಂಬ ವಿಷಯವನ್ನು ಸಂಶೋಧಕರಿಗೆ ಬಿಟ್ಟುಕೊಡುವುದು ಸೂಕ್ತ. ಈ ಸಂಶೋಧನೆ ತಂದ ಸತ್ಯಾಂಶವನ್ನು ಎಲ್ಲರೂ ಒಪ್ಪಿಕೊಳ್ಳುವುದು ಉಚಿತ" ಎಂದು ಶ್ರೀಗಳು ಹೇಳಿದ್ದಾರೆ. ಸಂಶೋಧಕರೆಂದರೆ ಯಾರು ? ಅವರಿಗೇನಾದರೂ ಮೂರನೆಯ–ನಾಲ್ಕನೆಯ ಕಣ್ಣಿರುವುದೋ ? ಯಾವುದನ್ನೇ ಆಗಲಿ ವ್ಯಾಪಕವಾಗಿ, ಆಳವಾಗಿ ಅಧ್ಯಯನ ಮಾಡುತ್ತಾ ಹೋದಾಗ ಸತ್ಯವು ತನ್ನಿಂದ ತಾನೇ ತೆರೆದುಕೊಳ್ಳುತ್ತದೆ. ಯಾರನ್ನೋ ಸಂಶೋಧಕರೆಂದು ನಂಬಿ ಅವರ ಮಾತನ್ನು ಕಣ್ಣು ಮುಚ್ಚಿಕೊಂಡು ಒಪ್ಪುವುದಕ್ಕಿಂತ ಸತ್ಯವನ್ನು ನಾವೇ ಏಕೆ ಹುಡುಕಬಾರದು ? ಅಲ್ಲದೆ ಈ ವರೆಗೂ ಖಚಿತವಾಗಿದ್ದ ವಿಷಯದಲ್ಲಿ ಹೊಸದಾಗಿ ಸಂದೇಹ ಹುಟ್ಟಿಸುವ ಹವ್ಯಾಸ ಇವರಿಗೇಕೆ ಬೇಕಿತ್ತು ? ತಮ್ಮ ಅಂತರಂಗದಲ್ಲಿ ಸಂದೇಹ ಉಂಟಾದರೂ ತಮಗೇ ಖಚಿತ ಮಾಹಿತಿ, ಉತ್ತರ ಸಿಗುವ ತನಕ ಬಹಿರಂಗದಲ್ಲಿ ಹೇಳಿಕೆ ಕೊಡುವ ಆತುರ ಮಾಡಬಾರದು.

ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರ ನೀಡುವಾಗ ಗೊಂದಲಕ್ಕೀಡಾದ ಸ್ವಾಮಿಗಳು ಜಾರಿ–ಮೊದಲು ಮೊದಲು ಪತ್ರಿಕೆಗಳಲ್ಲಿ ತಪ್ಪಾಗಿ ವರದಿಯಾಗಿದೆ ಎಂದು ಹೇಳಿ ಜಾರಿ–

ಕೊಳ್ಳಲು ಪ್ರಯತ್ನಿಸಿದರು. ಆದರೆ ಬೃಹನ್ಮಠವೇ ನೀಡಿದ ಪತ್ರಿಕಾ ಪ್ರಕಟನೆಯನ್ನು ಅವರಿಗೆ ತೋರಿಸಿದಾಗ ಗೊಂದಲಕ್ಕೀಡಾಗಿ ತಾವು ಹೀಗೆ ಹೇಳಿದ್ದು ಸತ್ಯ ಎಂದು ಒಪ್ಪಿಕೊಂಡರು ಎಂದು ಪ್ರಜಾವಾಣಿಯಲ್ಲಿ ವರದಿಯಾಗಿದೆ. ಆದ್ದರಿಂದ ಇನ್ನು ಮುಂದೆ ದುಡುಕಿನ ಹೇಳಿಕೆ ಕೊಡುವ ಬಗ್ಗೆ ಪೂಜ್ಯರು ಎಚ್ಚರ ವಹಿಸಬೇಕೆಂದು ನಮ್ರವಾಗಿ ಸೂಚಿಸುತ್ತೇವೆ. ಯಾರೋ ಅಧ್ಯಯನ ಮಾಡಿ ಹೇಳುವ ಎರವಲು ಜ್ಞಾನಕ್ಕಿಂತ ಸ್ವತಂತ್ರವಾಗಿ ಸತ್ಯಾನ್ವೇಷಣೆ ಮಾಡುವ ಮನೋಭಾವ ರೂಢಿಸಿಕೊಳ್ಳಲೆಂದು ಹಾರೈಸುತ್ತೇವೆ. ಸಂಶೋಧಕ ಸಾಹಿತಿಗಳು ಯಾವಾಗಲೂ ಯಾವ ಬಗ್ಗೆಯೂ ಖಚಿತವಾಗಿ ಹೇಳದೆ ಅದು ಹೀಗೆ, ಇದು ಹಾಗೆ ಎಂದು ಚರ್ಚಿಸುತ್ತಲೇ ಹೋಗುತ್ತಿರುತ್ತಾರೆ. ಧಾರ್ಮಿಕ ಶ್ರದ್ಧಾಳುಗಳಿಗೆ ಅಂಥ ಚರ್ಚೆಗಳಲ್ಲಿ ಆಸಕ್ತಿ ಇರದು. ಆದ್ದರಿಂದ ಧಾರ್ಮಿಕ ನೇತಾರರು ಜನರಿಗೆ ಒಂದು ಖಚಿತ ನಿಲುವನ್ನು ಹೊಂದಲು ನೆರವಾಗಬೇಕೇ ಹೊರತು ಅಡ್ಡಗೋಡೆ ಮೇಲೆ ದೀಪವಿಟ್ಟಂತೆ ಮಾತನಾಡಬಾರದು.

ಧರ್ಮಪಿತರು ಲಿಂಗೈಕ್ಯರಾದ ಸ್ವಲ್ಪ ಸಮಯದಲ್ಲೇ ಧಾವಿಸಿದ ಮಡಿವಾಳ ಮಾಚಿದೇವರು ಕೊಂಡಾಡಿದ ವಚನದಿಂದ ಈ ಲೇಖನಕ್ಕೆ ಮಂಗಳಹಾಡುವೆ, ಸಹ್ಯಾದ್ರಿಯ ದುರ್ಗಮ ಅರಣ್ಯದಲ್ಲಿ ವಚನ ಸಾಹಿತ್ಯವನ್ನು ಸುರಕ್ಷಿತವಾಗಿ ಸಾಗಿಸಿ, ಬಚ್ಚಿಟ್ಟ ಮೇಲೆ ಶರಣರಿಗೆ ಅತೀವ ಸಮಾಧಾನ ದೊರೆಯಿತು. ಈ ವಿಷಯವನ್ನು ಧರ್ಮಗುರು ಬಸವಣ್ಣನವರಿಗೆ ತಿಳಿಸಬೇಕೆಂದು ಮಡಿವಾಳ ಮಾಚಿದೇವರು ಕೂಡಲ ಸಂಗಮಕ್ಕೆ ಧಾವಿಸಿದರು. ಅಷ್ಟರಲ್ಲಿ ವಿಶ್ವಗುರು ಬಸವಣ್ಣನವರು ಇಚ್ಛಾಮರಣಿಯಾಗಿ ಲಿಂಗೈಕ್ಯರಾಗಿದ್ದರು. [ಮಡಿವಾಳ ಮಾಚಿದೇವರು ಸಂಗಮಕ್ಕೆ ಬಂದಿದ್ದರು ಎಂಬುದಕ್ಕೆ ಸಾಕ್ಷಿಯಾಗಿ ಮಡಿವಾಳ ಮಾಚಿದೇವರ ಪಾದ ಎಂದು ಪಾದಸಹಿತ ಪೀಠವೊಂದು ಮಹಾದ್ವಾರದ ಎದುರಿಗೆ ಇತ್ತು. ಅಲ್ಲಿ ಈಗ ಏರಿ ಬಂದಿದೆ. ಯು.ಕೆ.ಪಿ. ಯವರು ಹಳೆಯ ಪಾದದ ಕುರುಹೆಂಬಂತೆ ಹೊಸ ಸಂಕೀರ್ಣದಲ್ಲಿ ಮಾಚಿದೇವರ ಗುಡಿಯನ್ನು ಕಟ್ಟಿದ್ದಾರೆ.] ಅದನ್ನು ಮಾಚಿದೇವರು ಹೀಗೆ ಬಣ್ಣಿಸುತ್ತಾರೆ,

ಉಟ್ಟ ಸೀರೆಯು ಹರಿದು ಹೋದಾತ ನೀನಲಾ ಬಸವಣ್ಣಾ !
ಮೆಟ್ಟಿದ ಕೆರಹ ಕಳೆದು ಹೋದಾತ ನೀನಲಾ ಬಸವಣ್ಣಾ !
ಕಟ್ಟಿದ ಮುಡಿಯು ಬಿಟ್ಟು ಹೋದಾತ ನೀನಲಾ ಬಸವಣ್ಣಾ !
ಸೀಮೆ ಸಂಬಂಧವ ತಪ್ಪಿ ಹೋದಾತ ನೀನಲಾ ಬಸವಣ್ಣಾ !
ಲಿಂಗಕ್ಕೆ ಮಾಡಿದುದ ಸೋಂಕದೆ ಹೋದೆಯಲ್ಲಾ ಬಸವಣ್ಣಾ !
ಜಂಗಮಕ್ಕೆ ಮಾಡಿದ ಮಾಟವ ಕೈಯಲ್ಲಿ ಹಿಡಿದುಕೊಂಡು
ಹೋದೆಯಲ್ಲಾ ಬಸವಣ್ಣ !
ಬೆಳಗನುಟ್ಟು ಬಯಲಾದೆಯಲ್ಲಾ ಬಸವಣ್ಣಾ
ಆ ಬಸವಣ್ಣಂಗೆ ಶರಣೆಂಬ ಪದವನೇ
ತೋರುಕಂಡಾ ಕಲಿದೇವರದೇವಾ. (ವ. ಸಾ. ಸಂ 589)

–ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಮುಂಬಯಿಯಲ್ಲಿ ಬಸವ ಜಯಂತಿ

ವರದಿ : **ಪಾರ್ವತಿ ಡಾ|| ಸಿ. ವಿ. ಶಿರೋಳ.**

ಮಹಾರಾಷ್ಟ್ರದ ರಾಜಧಾನಿ ಮುಂಬಯಿ ನಗರದ ಚೆಂಬೂರಿನ ಶ್ರೀ ಬಸವೇಶ್ವರ ಫಿಲಾಸಾಫಿಕಲ್–ಕಲ್ಚರಲ್ ಸೊಸೈಟಿಯವರು ದಿ. 15–5–1994 ರಂದು **'ಬಸವ ಜಯಂತಿ'** ಏರ್ಪಡಿಸಿದ್ದು, ಇದರಲ್ಲಿ **ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ** ಯವರೊಡನೆ ಭಾಗಿಯಾಗುವ ಸದವಕಾಶ ನನಗೂ ದೊರಕಿತು. ದಿ. 14-5-94 ರಂದು ಬೆಳಿಗ್ಗೆ 9–00 ಕ್ಕೆ ಬಿಟ್ಟ ವಿಮಾನವು ಒಂದು ಗಂಟೆ ಇಪ್ಪತ್ತು ನಿಮಿಷಗಳಲ್ಲಿ ಮುಂಬೈಯನ್ನು ತಲುಪಿದಾಗ ಸಂಸ್ಥೆಯ ಪೋಷಕರಾದ ಶರಣ. ಎಂ. ಎಂ. ಕೋರಿಯವರು, ಸಂಸ್ಥೆಯ ಅಧ್ಯಕ್ಷ ಶರಣ. ಎಸ್. ಎಂ. ಕೋಳೂರು, ಹಿಂದಿನ ಅಧ್ಯಕ್ಷ ಜಿ. ಎನ್. ಅಡಕಿಹಾಳರು, ಪ್ರಧಾನ ಕಾರ್ಯದರ್ಶಿ ಶರಣ. ದುಂಡೇಶ ಗಲಗಲಿ ಅವರು ಪೂಜ್ಯರಿಗೆ ಮಾಲಾರ್ಪಣೆ ಮಾಡಿ ಆತ್ಮೀಯವಾದ, ಭಕ್ತಿಪೂರ್ವಕ ಸ್ವಾಗತ ಕೋರಿದರು. ಕಾರಿನಲ್ಲಿ ಮನೆಯತ್ತ ಸಾಗುವಾಗ ಸಂಸ್ಥೆಯನ್ನು ಕಟ್ಟಿರುವ ಪರಿಯನ್ನು ವಿವರಿಸಿದರು, 51 ಲಕ್ಷ ರೂಪಾಯಿಗಳಿಗೆ, (ಮೊದಲು ಬಾಡಿಗೆಗೆ ಎಂದು ತೆಗೆದುಕೊಂಡು ಕಾರ್ಯಾಲಯ ಮಾಡಿದ್ದ) ಕಟ್ಟಡವನ್ನು ಈಗ ಖರೀದಿ ಮಾಡಿರುವುದನ್ನು ವಿವರಿಸಿದರು. ಅದರಲ್ಲಿಯೇ ವೀರಶೈವ ಬ್ಯಾಂಕು ಯಶಸ್ವಿಯಾಗಿ ನಡೆದಿರುವುದನ್ನು ತಿಳಿಸಿದರು.

ದಿ. 14–5–1994 ರ ಸಂಜೆ ಡೊಂಬಿವೇಲಿಯ ಶ್ರೀ ಬಸವ ಸೇವಾ ಸಂಘದವರಿಂದ "ಬಸವ ಜಯಂತಿ" ಏರ್ಪಾಡಾಗಿದ್ದಿತು. ಸರ್ವೇಶಾ ಸಭಾಗೃಹ, ತಾಯಿ ಪಿಂಗಳೆ ಚೌಕ, ಡೊಂಬಿವೇಲಿ ಇಲ್ಲಿ ಕಾರ್ಯಕ್ರಮ ; ಸಂಜೆ 5 ರಿಂದ. ಚೆಂಬೂರಿನಿಂದ ಇಲ್ಲಿಗೆ ವಾಹನ ದಟ್ಟಣೆ ಭೇದಿಸಿಕೊಂಡು ಬರಲು ಒಂದೂವರೆ ತಾಸು ಹಿಡಿದುದರಿಂದ ಕಾರ್ಯಕ್ರಮ 6 ಕ್ಕೆ ಆರಂಭವಾಯಿತು, ಬೀದರ, ಬಿಜಾಪುರ, ಶಿವಮೊಗ್ಗ, ಭದ್ರಾವತಿ ತುಮಕೂರು, ಚಿತ್ರದುರ್ಗ, ಹೀಗೆ ಎಲ್ಲ ಜಿಲ್ಲೆಗಳಿಂದಲೂ ಬಂದು ನೆಲೆಸಿದ ಜನರು ಮತ್ತು ಸ್ಥಳೀಯರಿಂದ ಪುಟ್ಟ ಭಾರತವೇ ನಿರ್ಮಾಣವಾಗಿತ್ತು. ಸಂಘದ ಅಧ್ಯಕ್ಷರಾದ ಶರಣ ಆರ್. ಬಿ. ಹೆಬ್ಬಳ್ಳಿಯವರು ಪೂಜ್ಯರನ್ನು ಸ್ವಾಗತಿಸಿದರು. ಪೂಜ್ಯ ಮಾತಾಜಿಯವರು ಆದಿಗುರು ಬಸವಣ್ಣನವರ ಪೂಜೆ ಮಾಡಿ, ದೀಪವನ್ನು ಬೆಳಗಿಸಿದರು. ಎಸ್. ಜಿ. ಲೋಣಿ ಅವರು ಸಂಘದ ಕಾರ್ಯಕಲಾಪಗಳ ವರದಿ ವಾಚನ ಮಾಡಿದರು. ಪೂಜ್ಯ ಮಾತಾಜಿಯವರು ಸಮುದಾಯ ಪ್ರಾರ್ಥನೆ ಮಾಡಿಸಿದರು. ಠಾಣಾ ಜಿಲ್ಲೆಯ ಪೋಲಿಸ್ ಕಮೀಷನರ್ ಶ್ರೀ ಬಸವರಾಜ ಆಕಾಶಿಯವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು. ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಹಿಂದಿಯಲ್ಲಿ ಧ್ವಜಗೀತೆ ಹಾಡಿ ಉಪನ್ಯಾಸ ಮಾಡಿ ಬಸವಣ್ಣನವರ ಬಹುಮುಖಿ ವ್ಯಕ್ತಿತ್ವ ಕುರಿತು ಮಾತನಾಡಿದರು.

ನೆರುಳದಲ್ಲಿ

ರಾಷ್ಟ್ರೀಯ ಬಸವ ದಳ, ನೆರುಳ–ಇದರ ಆಶ್ರಯದಲ್ಲಿ ದಿ. 15–5–94 ರಂದು ಬೆಳಿಗ್ಗೆ ಸಮುದಾಯ ಪ್ರಾರ್ಥನೆ ಮತ್ತು ಬಸವ ಜಯಂತಿ ಉತ್ಸವ ಏರ್ಪಾಡಾಗಿದ್ದಿತು. ಪಬ್ಲಿಕ್ ಸ್ಕೂಲ್, ನ್ಯೂಬಾಂಬೆ ಇದರ ವಿಶಾಲ ಸಭಾಂಗಣದಲ್ಲಿ ಕಾರ್ಯಕ್ರಮವು ಏರ್ಪಾಡಾಗಿದ್ದಿತು. ಆರಂಭದಲ್ಲಿ ಪೂಜ್ಯ ಮಾತಾಜಿಯವರಿಂದ ಧ್ವಜಾರೋಹಣ. ನಂತರ ಕರ್ನಾಟಕ ಸಂಘ, ಮಹಿಳಾ ಘಟಕದವರು ಭಕ್ತಿಪೂರ್ವಕವಾಗಿ ಭಜನೆಗಳನ್ನು ಹಾಡಿದರು. ರಾಷ್ಟ್ರೀಯ ಬಸವ ದಳದ ಗೌರವಾಧ್ಯಕ್ಷ ಶರಣ ಆರ್. ಬಿ. ಹೆಬ್ಬಳ್ಳಿಯವರು ಜ್ಯೋತಿಯನ್ನು ಹೊತ್ತಿಸಿ ಉದ್ಘಾಟನೆ ಮಾಡಿದರು. ಶರಣ. ಉಮೇಶ್ ಮಂಟಾಳೆ ಪ್ರಧಾನ ಕಾರ್ಯದರ್ಶಿ, ಎಲ್ಲರನ್ನೂ ಸ್ವಾಗತಿಸಿದರು. ಕಾರ್ಯಾಧ್ಯಕ್ಷ ಶಿವಪುತ್ರಪ್ಪ ಥರ್ಡಿಯವರು ಮಾಲಾರ್ಪಣೆ ಮಾಡಿದರು. ಧರ್ಮದ ಅಗತ್ಯ, ಪ್ರಾರ್ಥನೆಯ ಮಹತ್ವ, ಬಸವಣ್ಣನವರ ವ್ಯಕ್ತಿತ್ವ ಕುರಿತು ಪೂಜ್ಯ ಶ್ರೀ ಮಾತಾಜಿಯವರು ಮಾತನಾಡಿದರು. ನಂತರ ಪ್ರಶ್ನೋತ್ತರ ಕಾರ್ಯಕ್ರಮದಲ್ಲಿ ಹಲವಾರು ಜನರು ಪ್ರಶ್ನೆಗಳನ್ನು ಕೇಳಿ ಸಮಾಧಾನ ಪಡೆದರು.

ಚೆಂಬೂರಿನಲ್ಲಿ

ಶ್ರೀ. ಶಿವಾನಂದ ಆರ್ಟ್ ಗ್ಯಾಲರಿಯ ವಿಶಾಲವಾದ ಬೃಹತ್ ಕಲಾ ಭವನದಲ್ಲಿ ಬಸವ ಜಯಂತಿ ಏರ್ಪಾಡಾಗಿದ್ದಿತು. ಶ್ರೀ ಬಸವೇಶ್ವರ ಫಿಲಾಸಾಫಿಕಲ್ ಮತ್ತು ಕಲ್ಚರಲ್ ಸೊಸೈಟಿಯ ಪದಾಧಿಕಾರಿಗಳು ಪೂಜ್ಯ ಮಾತಾಜಿಯವರನ್ನು ಬರಮಾಡಿಕೊಂಡು ಶ್ರೀ ವೀರಶೈವಾ ಬ್ಯಾಂಕ್, ಶ್ರೀ ವೀರಶೈವ ಸಹಕಾರಿ ಬ್ಯಾಂಕ್, ಬಸವ ಮಂಟಪ ಮುಂತಾದುವುಗಳನ್ನು ತೋರಿಸಿದರು. ನಂತರ ಸಭಾಂಗಣಕ್ಕೆ ಹೋಗಲಾಯಿತು. ಸರಿಯಾಗಿ 6–30 ಕ್ಕೆ ಕಾರ್ಯಕ್ರಮ ಪ್ರಾರಂಭವಾಯಿತು. ಪೂಜ್ಯ ಮಾತಾಜಿಯವರು ದೀಪ ಹಚ್ಚಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಸೊಲ್ಲಾಪುರದ ಡಾ॥ ಭಗವಾನ್‌ದಾಸ್ ತಿವಾರಿಯವರು ಆಗಮಿಸಿದ್ದರು.

"ಬಸವ ಜಯಂತಿ ಏಕೆ ಆಚರಿಸಬೇಕು ? ಇದು ಮಹಾಪುರುಷರಿಗೆ ಕೃತಜ್ಞತೆ ಸಲ್ಲಿಸುವ ಒಂದು ವಿಧಾನ. ಜಗ ಬದುಕಲಿ, ಜನ ಬದುಕಲಿ ಎಂದು ಮಹಾಪುರುಷರು ಅಮೂಲ್ಯವಾದ ಸಂದೇಶವನ್ನು ಕೊಟ್ಟು ಹೋಗುವರು. ಅವರಿಗೆ ಮರಳಿ ಹೇಗೆ ಕೃತಜ್ಞತೆ ಸಲ್ಲಿಸಬಹುದು. ಅವರ ಜಯಂತಿ ಆಚರಿಸಿ, ಅವರನ್ನು ಸ್ಮರಿಸಿಕೊಳ್ಳುವ ಮೂಲಕ.

ಬಸವಣ್ಣನವರಂಥ ಮಹಾಪುರುಷರು ಕೊಟ್ಟ ತತ್ತ್ವ ಸಂದೇಶಗಳನ್ನು ಪರಸ್ಪರ ಸೇರಿ ಚಿಂತನೆ ಮಾಡಲು ಇಂಥ ಕಾರ್ಯಕ್ರಮವು ಬೇಕು. ಮೂರನೆಯದಾಗಿ ಸಂಘಟನೆ ಸಾಧಿಸಲೂ ಇದು ಅತ್ಯಗತ್ಯ. ಇಂಥಾ ಬೃಹತ್ ನಗರಗಳಲ್ಲಿ ಒಬ್ಬರಿಗೊಬ್ಬರು ಭೇಟಿಯಾಗಲು ಸಾಧ್ಯವಾಗದ ಪರಿಸ್ಥಿತಿ ಇರುವುದು. ಆದ್ದರಿಂದ ಬಸವ ಜಯಂತಿಯಂಥ ವಿಶೇಷ ಸಂದರ್ಭಗಳಲ್ಲಿ ಧರ್ಮಬಂಧುಗಳು ಒಂದು ಕಡೆ ಸೇರಲು ಅನುಕೂಲವಾಗುವುದು. ಸಂಘಟನೆ ಜೊತೆಗೆ ಸಂಸ್ಕಾರವೂ ಸಾಧ್ಯವಾಗುವುದು. ನಿಮ್ಮ ಮುಂದಿನ ಪೀಳಿಗೆಯವರಿಗೆ ನೀವು ಸಾಂಸ್ಕೃತಿಕ ಸಂಪತ್ತು ಧಾರ್ಮಿಕ ಪರಂಪರೆಯನ್ನು ಬಿಟ್ಟು ಹೋಗುವುದಗತ್ಯ". ಎಂದು ಪೂಜ್ಯ ಮಾತಾಜಿಯವರು ಕರೆ ನೀಡಿದರು. ನಿರರ್ಗಳವಾಗಿ ಒಂದು ಗಂಟೆಯ ಕಾಲ ಮಾತನಾಡಿದರೂ ಮಂತ್ರಮುಗ್ಧರಾಗಿ ಆಲಿಸುತ್ತಿದ್ದ ಜನರು, ಇನ್ನೂ ಬೇಕು ಎಂದಾಗ ಮುಂದೆ ನಡೆಯಬೇಕಿದ್ದ ಫಿಲಂ ಷೋ ರದ್ದುಪಡಿಸಿ ಕಾರ್ಯಕ್ರಮ ವ್ಯವಸ್ಥಾಪಕರು ಮಾತಾಜಿಯವರ ಭಾಷಣ ಮುಂದುವರಿಸಲು ಕೋರಿದರು. ಎರಡು ಗಂಟೆ ಕಾಲ ನಡೆದ ಅವರ ಭಾಷಣ ಎಲ್ಲರ ಮೇಲೆ ಅತುಳವಾದ ಪ್ರಭಾವ ಬೀರಿತು. ಅಧ್ಯಕ್ಷ ಎಸ್. ಎಂ. ಕೋಳೂರು ಸ್ವಾಗತಿಸಿದರು. ಶರಣ. ದುಂಡೇಶ ಗಲಗಲಿಯವರು ಸಂದೇಶ ವಾಚನ ಮಾಡಿದರು. ಜಿ. ಎಸ್. ಅಡಿಕ್ಯಾಳರು ವರದಿ ವಾಚನ ಮಾಡಿದರು. ಬಿ. ಎ. ಅಂಗಡಿಯವರು ಶರಣು ಸಮರ್ಪಣೆ ಮಾಡಿದರು. ಎಂ. ಎ. ಸಿದ್ನಾಳ್ ರವರು ಸಭಾ ನಿರ್ವಹಣೆ ಮಾಡಿದರು.

ಮುಂಬೈಯಲ್ಲಿ ಲಿಂಗವಂತ ಧರ್ಮದ ಸಾಹಿತ್ಯ ಲಭ್ಯ

ಮುಂಬೈ ಸರ್ವಧರ್ಮ ಸಮನ್ವಯಗಳ ನಗರ. ಎಲ್ಲ ಧರ್ಮ, ಎಲ್ಲ ಭಾಷೆಗಳ ಸಂಗಮ. ಇಂಥಲ್ಲಿ ಉದ್ಯೋಗದ ಮೇಲೆ, ಶಿಕ್ಷಣಾಕಾಂಕ್ಷಿಗಳಾಗಿ ಬಂದ ಲಿಂಗವಂತ ಧರ್ಮಿಯರು ಸಾಕಷ್ಟು ಸಂಖ್ಯೆಯಲ್ಲಿದ್ದಾರಾದರೂ ಅವರಲ್ಲಿ ಸಂಘಟನೆ ಇಲ್ಲ. ಇದೀಗ ಶ್ರೀ ಬಸವೇಶ್ವರ ಫಿಲಾಸಾಫಿಕಲ್ ಮತ್ತು ಕಲ್ಚರಲ್ ಸೊಸೈಟಿಯು ತನ್ನದೇ ಆದ ಕಟ್ಟಡವನ್ನು ಖರೀದಿಸಿ ವಿಧಾಯಕ ಕಾರ್ಯಗಳಲ್ಲಿ ತೊಡಗಿದೆ. ನನ್ನ ಭಾಷಣದಲ್ಲಿ "ಈ ಸಂಸ್ಥೆಯು ಸಾಹಿತ್ಯವನ್ನು ಮತ್ತು ಬಸವೇಶ್ವರ ಭಾವಚಿತ್ರ ಇತ್ಯಾದಿ ಧಾರ್ಮಿಕ ಸಾಮಗ್ರಿಗಳನ್ನು ಇಡುವುದು ಒಳ್ಳೆಯದು, ವಿಭೂತಿ–ರುದ್ರಾಕ್ಷಿ–ಲಿಂಗ ಇವುಗಳಿಗಾಗಿ ಲಿಂಗವಂತ ಧರ್ಮೀಯರು ಪರದಾಡಬೇಕಾಗುತ್ತದೆ. ಇಂಥಲ್ಲಿ ಸಿಗುತ್ತದೆ ಎಂದು ಗೊತ್ತಾದರೆ ಜನರು ಬರುತ್ತಾರೆ" ಎಂದು ಸೂಚಿಸುತ್ತಲೇ ಸಂಸ್ಥೆಯ ಪೋಷಕರಾದ ಶರಣ. ಎಂ. ಎಂ. ಕೋರಿಯವರು ಉಳಿದ ಶರಣ ಬಂಧುಗಳೊಡನೆ ಸಮಾಲೋಚಿಸಿ ಒಪ್ಪಿದರು. ಮಾತ್ರವಲ್ಲದೆ ಸಾಕಷ್ಟು ಸಾಮಾನು ಖರೀದಿಸಿ ಬಿಟ್ಟಿದ್ದಾರೆ. ವಿಭೂತಿ-ಇಷ್ಟ ಲಿಂಗ–ಸಾಹಿತ್ಯ ಬಸವಣ್ಣನವರ ಭಿತ್ತಿಪಟ ಇತ್ಯಾದಿ ಅಲಂಕಾರಿಕ ವಸ್ತುಗಳನ್ನು ಸಹ ಖರೀದಿಸಿದ್ದಾರೆ. ಆದ್ದರಿಂದ ಇದರ ಸದುಪಯೋಗ ಪಡೆದುಕೊಳ್ಳಬೇಕು. ಕಲ್ಯಾಣ–ಕಿರಣದ ಓದುಗರು ಮುಂಬೈಯಲ್ಲಿರುವ ತಮ್ಮ ಮಿತ್ರರು–ಬಂಧು ಬಳಗದವರಿಗೆಲ್ಲ ಒಂದು ಪತ್ರ ಬರೆದು ಸಾಮಾನು ಲಭ್ಯವಿರುವ ಸಂಗತಿ ತಿಳಿಸಬೇಕು. ಪ್ರಸ್ತುತ ಸಂಸ್ಥೆಯು ಉದಾತ್ತ ಗುರಿಯನ್ನು ಇಟ್ಟುಕೊಂಡಿರುವ ಕಾರಣ ತನು–ಮನ–ಧನಗಳಿಂದ ನೆರವು ನೀಡಬೇಕೆಂದು ಸೂಚಿಸುವೆವು.

Sri Basaveswara Philosophical and Cultural Society
Basava Mantapa, Yasho Niwas, I Floor,
Station Avenue Road, Chembur,
BOMBAY–400071.

ದೂರವಾಣಿಗಳು : ಶರಣ. ಎಂ. ಎಸ್. [illegible], ಪೋಷಕರು,
ಶರಣ. ದುಂಡೇಶ್ ಗಲಗಲಿ. ಕಾರ್ಯದರ್ಶಿ,

ಹೈದರಾಬಾದಲ್ಲಿ ಬಸವ ಧರ್ಮ ಪೀಠದ ಶಾಖಾ ಕಾರ್ಯಾಲಯ

ಬಹುಜನ ಶರಣ ಬಂಧುಗಳ ಅಪೇಕ್ಷೆಯಂತೆ ಬಸವ ಧರ್ಮ ಪೀಠದ ಶಾಖೆ– ಯನ್ನು ಹೈದರಾಬಾದ್ ನಗರದಲ್ಲಿ ತೆರೆಯಲಾಗಿದ್ದು, ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯವರು ಸಮ್ಮೇಳನಾ ನಂತರ ಅಲ್ಲಿಯೇ ವಾಸ್ತವ್ಯ ಮಾಡಿದ್ದಾರೆ. ಅವರು ಹಿಂದಿಯನ್ನು ಅಭ್ಯಸಿಸುತ್ತ, ಹಿಂದಿಯಲ್ಲಿ ಪ್ರವಚನ ಮಾಡುವುದು ರೂಢಿಸಿಕೊಳ್ಳು– ತ್ತಿದ್ದಾರೆ. ನಮ್ಮ ಸಂಸ್ಥೆಯ ಎಲ್ಲ ಪ್ರಕಟಣೆ ಹೈದರಾಬಾದಿನಲ್ಲಿ ಲಭ್ಯವಾಗುತ್ತಿವೆ.

ತಾತ್ಕಾಲಿಕ ವಿಳಾಸ :

Pujya Sri Sadguru Mate Gangadevi
C/o Sri Subhash Patil, working president
Hyderabad Rashtreeya Basava Dala
Paramount Complex, Shop No. 105.
I Floor, 5–3–835, Malakunta
Goshamahal Road, Hyderabad–500012
Phones : Res : 666876, Off : 552768, 515166

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಹೈದರಾಬಾದ್ ನಗರದಲ್ಲಿ ಅಭೂತಪೂರ್ವ ಬಸವ ಧರ್ಮ ಸಮ್ಮೇಳನ

ಆಂಧ್ರ ಪ್ರದೇಶದ ರಾಜಧಾನಿ ಹೈದರಾಬಾದ ನಗರದಲ್ಲಿ ಇದೇ ಮೇ 21 ಮತ್ತು 22ರಂದು ಅಖಿಲ ಭಾರತ ಬಸವ ಧರ್ಮ ದ್ವಿತೀಯ ಸಮ್ಮೇಳನವು ಅಭೂತ ಪೂರ್ವವಾಗಿ ನಡೆಯಿತು. ಆಂಧ್ರದ ಎಲ್ಲ ಜಿಲ್ಲೆಗಳಿಂದ ಮಾತ್ರವಲ್ಲದೆ, ಕರ್ನಾಟಕ–ಮಹಾರಾಷ್ಟ್ರ-ತಮಿಳುನಾಡು-ದೆಹಲಿ ಮುಂತಾದ ಸ್ಥಳಗಳಿಂದ ಬಸವ ತತ್ತ್ವಾನುಯಾಯಿಗಳು ಸಹಸ್ರಾರು ಸಂಖ್ಯೆಯಲ್ಲಿ ಆಗಮಿಸಿ, ಸಂಭ್ರಮದ ವಾತಾವರಣವನ್ನು ಸೃಷ್ಟಿಸಿದರು. ಕನ್ನಡ, ತೆಲುಗು, ಹಿಂದಿ, ಮರಾಠಿ, ಇಂಗ್ಲೀಷ್ ಎಲ್ಲ ಭಾಷೆಗಳನ್ನು ಮಾತನಾಡುವ ಜನರನ್ನು, ಈ ಎಲ್ಲ ಭಾಷೆಗಳಲ್ಲಿ ಭಾಷಣ ಮಾಡುವ ಉಪನ್ಯಾಸಕರನ್ನು ಕಾಣಬಹುದಿತ್ತು.

ತೆಲುಗಿನಲ್ಲಿ ಸಂಕಲ್ಪ ಗೀತೆ, ಧ್ವಜಗೀತೆ ಪ್ರತಿಜ್ಞಾಗೀತೆಗಳನ್ನು ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಹಾಡುತ್ತಲೇ ಬೆಳಿಗ್ಗೆ 10 ಗಂಟೆಗೆ ಸರಿಯಾಗಿ ಧ್ವಜಾರೋಹಣವಾಗಿ ಕಾರ್ಯಕ್ರಮವು ಮೇ 21 ರಂದು ಆರಂಭವಾಯಿತು. ಬಸವ ಧರ್ಮದ ಮಹಾಜಗದ್ಗುರು ಪೀಠದ ಪೂಜ್ಯ ಶ್ರೀ ಲಿಂಗಾನಂದ ಮಹಾಸ್ವಾಮಿಗಳು ಧ್ವಜಾರೋಹಣವನ್ನು ಮಾಡಿ, ಜ್ಯೋತಿಯನ್ನು ಉದ್ದೀಪಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಭಾರತದ ಮೊಟ್ಟ ಮೊದಲ ಸ್ವತಂತ್ರ ವಿಚಾರವಾದಿ, ಸಮಾಜ ಸುಧಾರಕ ಬಸವಣ್ಣನವರ ತತ್ತ್ವಗಳ ಪ್ರಸಾರವು ವ್ಯಷ್ಟಿ-ಸಮಷ್ಟಿಗಳ ದೃಷ್ಟಿಯಿಂದ ಇಂದಿನ ಅಗತ್ಯವಾಗಿದ್ದು ಈ ದೃಷ್ಟಿಯಿಂದ ಸಮ್ಮೇಳನವನ್ನು ಸಂಯೋಜಿಸಲಾಗಿದೆ ಎಂದು ವಿವರಿಸಿದರು. ಜಾತಿ-ಧರ್ಮಗಳ ವ್ಯತ್ಯಾಸವನ್ನು ವಿವರಿಸಿ ಪೂಜ್ಯರು ಇಂದು ಜಾತಿ ಪ್ರಜ್ಞೆ ತೊಲಗಿ, ಧರ್ಮಪ್ರಜ್ಞೆ ಅಳವಡಬೇಕು ಎಂದು ವ್ಯಾಖ್ಯಾನಿಸಿದರು.

ತೆಲುಗಿನ ಸುಪ್ರಸಿದ್ಧ ಬರಹಗಾರರಾದ ಡಾ॥ ಮುದಿಗೊಂಡ ಶಿವಪ್ರಸಾದ ಅವರು "ವಿಶ್ವವಿಭೂತಿ ಬಸವಣ್ಣ" ಕುರಿತು ಮಾತನಾಡಿ ಬಸವಣ್ಣನವರ ಬಗೆಗೆ ಇರುವ ಮೊಟ್ಟ ಮೊದಲ ಆಕರ ಗ್ರಂಥ ತೆಲುಗಿನಲ್ಲಿ ರಚಿತವಾದ ಪಾಲ್ಕುರಿಕೆ ಸೋಮನಾಥನ ಬಸವ ಪುರಾಣಮು ಎಂದು ಹೇಳಿ, ವಿವಿಧ ದಿಕ್ಕುಗಳಿಂದ ಬಸವಣ್ಣನವರನ್ನು ಅರ್ಥ ಮಾಡಿಕೊಂಡು ಸೋಮನಾಥನು ಅಸಂಖ್ಯಾತ ಕೃತಿಗಳನ್ನು ರಚಿಸಿದ್ದಾನೆ ಎಂದು ಬಣ್ಣಿಸಿದರು.

ಪಶು ಸಂಗೋಪನಾ ಮಂತ್ರಿ ಶ್ರೀ ರಘುವೀರರೆಡ್ಡಿಯವರು, ಜಹಿರಾಬಾದದ ಲೋಕಸಭಾ ಸದಸ್ಯ ಬಾಗಾರೆಡ್ಡಿಯವರು, ಶಾಸಕರಾದ ನರಸಿಂಹರೆಡ್ಡಿಯವರು ಭಾಗವಹಿಸಿ ಬಸವಣ್ಣನವರ ವ್ಯಕ್ತಿತ್ತ್ವ ಕುರಿತು ಮಾತನಾಡಿದರು. ಉತ್ತರ ಕರ್ನಾ ಟಕ ಪತ್ರಿಕೆಯ ಸಂಪಾದಕ ಶಿವಶರಣಪ್ಪ ವಾಲಿಯವರು ಬಸವ ವಚನಾಮೃತ ಎಂಬ ಹಿಂದಿ ಧ್ವನಿಸುರುಳಿಯನ್ನು ಅಡಿವೆಪ್ಪ ಚಂದ್ರೆಯವರು ತೆಲುಗು ಧ್ವನಿಸುರುಳಿಯನ್ನು ಬಿಡಂಗಡೆ ಮಾಡಿ ಬಸವ ಧರ್ಮಪೀಠದಿಂದ ಕನ್ನಡೇತರ ಭಾಷೆಗಳಲ್ಲಿ ವಚನಗಳನ್ನು ಧ್ವನಿಮುದ್ರಿಸಿ ಕೊಟ್ಟಿರುವುದು ಅಭಿನಂದನಾರ್ಹ ಕೊಡುಗೆ ಎಂದು ಪ್ರಶಂಸಿಸಿದರು.

ಲಂಡನ್ನಿನಲ್ಲಿ ಬಸವ ಇಂಟರ್‌ನ್ಯಾಷನಲ್ ಸಂಸ್ಥೆಯನ್ನು ನಡೆಸುತ್ತಿರುವ ಡಾ॥ ಎಸ್. ಮಹದೇವಯ್ಯನವರು ವಿಶೇಷ ಆಹ್ವಾನಿತರಾಗಿ ಬಂದಿದ್ದು, ಅವರು ಮಾಡು ತ್ತಿರುವ ಧರ್ಮ ಪ್ರಚಾರ ಕಾರ್ಯಕ್ಕಾಗಿ ಅವರನ್ನು ಶಾಲು ಹೊದ್ದಿಸಿ ಸತ್ಕರಿಸಲಾಯಿತು.

ಕಡೆಯಲ್ಲಿ ಆಶೀರ್ವಚನ ನೀಡಿದ ಪ್ರಥಮ ಮಹಿಳಾ ಜಗದ್ಗುರು ಮಾತೆ ಮಹಾದೇವಿಯವರು ಸಮ್ಮೇಳನದ ಧ್ಯೇಯ ಕುರಿತು ವಿವರಿಸಿದರು. ಮುಸಲೀಮರಿಗೆ ಮೆಕ್ಕಾ ಧರ್ಮಕ್ಷೇತ್ರವಾದಂತೆ ಬಸವ ತತ್ತ್ವಾನುಯಾಯಿಗಳಿಗೆ ಧರ್ಮಕ್ಷೇತ್ರವಾಗಿ ರುವ ಕೂಡಲ ಸಂಗಮದಲ್ಲಿ ನಡೆಯುವ ಶರಣ ಮೇಳದಲ್ಲಿ ಒಂದು ಮಹತ್ವಪೂರ್ಣ ವಾದ ನಿರ್ಣಯ ತೆಗೆದುಕೊಳ್ಳಲಾಯಿತು. ಕರ್ನಾಟಕದ ಹೊರಗಿನ ರಾಜ್ಯಗಳಲ್ಲಿ ಬಸವ ಧರ್ಮ ಸಮ್ಮೇಳನವನ್ನು ಪ್ರತಿವರ್ಷವೂ ನಡೆಸಬೇಕೆಂದು ನಿರ್ಣಯಿಸಿದ ಪ್ರಕಾರ ಮೊದಲ ಸಮ್ಮೇಳನವನ್ನು 1993 ರ ಮೇ 8–1 ರಂದು ಸುಪ್ರಸಿದ್ಧ ಗಿರಿ ಧಾಮ ತಮಿಳುನಾಡಿನ ನೀಲಗಿರಿಯ ಊಟಿಯ ಪರಿಸರದಲ್ಲಿ ನಡೆಸಲಾಯಿತು. ಇದು

ಎರಡನೆಯ ಸಮ್ಮೇಳನ. ಇದರಿಂದ ಸಂಸ್ಕಾರ ಮತ್ತು ಸಂಘಟನೆ ಎರಡೂ ಸಾಧ್ಯ-ವಾಗಿವೆ, ಧರ್ಮವು ಮಾನವ ಸಮಾಜವನ್ನು ಬೆಸೆಯುವ ಭಾವೈಕ್ಯತೆಯ ಸಾಧನವಾಗಬೇಕು ; ಮತಾಂಧತೆಯಾಗಿ-ಒಡೆಯುವಿಕೆಗೆ ಕಾರಣವಾಗಬಾರದು. ಇವನಾರವ ಎಂದು ಪ್ರಶ್ನಿಸಿ, ಯಾರನ್ನೂ ದೂರಮಾಡದೆ, ಇವನಮ್ಮವ ಎಂದು ಎಲ್ಲರನ್ನೂ ಆದರಿಸುವ ಮನೋಭಾವ ಬೆಳೆಸಿಕೊಳ್ಳಲು ಬಸವಣ್ಣನವರು ಆದೇಶಿಸಿದ್ದಾರೆ. ಆಗ ಮಾತ್ರ ಸೃಷ್ಟಿಕರ್ತನ ಮಹಾಮನೆಯಾದ ಈ ಮರ್ತ್ಯಲೋಕದ ಮಕ್ಕಳಾಗಲಿಕ್ಕೆ ಸಾಧ್ಯ" ಎಂದು ವಿವರಿಸಿದರು.

ಮೆರವಣಿಗೆ ಮತ್ತು ಪಥ ಸಂಚಲನ

ಬಸವ ಧರ್ಮ ದ್ವಿತೀಯ ಸಮ್ಮೇಳನದ ಅಧ್ಯಕ್ಷರಾದ ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳ ಮೆರವಣಿಗೆ ಅಭೂತಪೂರ್ವವಾಗಿ ನಡೆಯಿತು, ವಿಶ್ವಗುರು ಬಸವಣ್ಣನವರ ಭಾವಚಿತ್ರವನ್ನು ವಿಶೇಷವಾದ ಕುದುರೆ ಗಾಡಿಯಲ್ಲಿಟ್ಟು, ಪೂಜ್ಯ ಶ್ರೀಗಳನ್ನು ತೆರೆದ ಕಾರಿನಲ್ಲಿ ಕುಳ್ಳಿರಿಸಿ ಮೆರವಣಿಗೆ ಮಾಡಲಾಯಿತು. ಬಿಳಿಯ ಬಟ್ಟೆಯುಟ್ಟು ಕಾವಿಯ ಸ್ಕಾರ್ಫ್ ಹೊದ್ದು, ಬಸವ ಲಿಂಗ ಮುದ್ರೆಯ ಟೋಪಿ ಹಾಕಿಕೊಂಡು ಅಸಂಖ್ಯಾತ ಶರಣರು ಮತ್ತು ಶರಣೆಯರು ಜಯಘೋಷ ಮಾಡುತ್ತ ಪಥ ಸಂಚಲನ ನಡೆಸಿದುದು ರೋಮಾಂಚಕಾರಿಯಾದ ದೃಶ್ಯವಾಗಿತ್ತು. ಜನದಟ್ಟಣೆಯ ನಗರವಾದ ಹೈದರಾಬಾದಿನ ಪ್ರಮುಖ ಬೀದಿಗಳಲ್ಲಿ ಷಟ್‌ಕೋನ ಹಿಡಿದು ಶರಣ ಬಂಧುಗಳು ಶಿಸ್ತಿನಿಂದ ಎರಡು ಕಿಲೋಮೀಟರ್‌ವರೆಗೆ ಪಥ ಸಂಚಲನ ಮಾಡಿದದು ಎಲ್ಲರನ್ನು ಮಂತ್ರಮುಗ್ಧಗೊಳಿಸಿತು, ಅಭೂತಪೂರ್ವ ಘಟನೆ ಎಂಬ ಭಾವ ಮೂಡಿಸಿತು.

ಸಾಮೂಹಿಕ ಲಿಂಗಪೂಜೆ

ಲಿಂಗವಂತ ಧರ್ಮದ ಜೀವಾಳವಾದ ಇಷ್ಟಲಿಂಗ ಪೂಜೆಯ ಮಹತ್ವ ಮನಗಾಣಿಸಲೋಸುಗ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ವೇದಿಕೆಯ ಮೇಲೆ ಇಷ್ಟಲಿಂಗ ಪೂಜೆಯನ್ನು ಮಾಡಿ ತೋರಿಸಿದರು. ಸರಳವಾದರೂ ಅಧ್ಯಾತ್ಮಿಕ ಸಿರಿ-ಯಿಂದ ಕೂಡಿದ ಲಿಂಗಪೂಜೆಯ ಮಹತ್ವವನ್ನು ತಿಳಿದು ನೆರೆದ ಜನತೆ ಆಶ್ಚರ್ಯ ಚಕಿತರಾದರು, ಭಾಲ್ಕಿಯ ಹಿರೇಮಠದ ಪೂಜ್ಯ ಶ್ರೀ ಬಸವಲಿಂಗ ಪಟ್ಟಾಧ್ಯಕ್ಷರು ಸಂಜೆ 7 ಕ್ಕೆ ಸರಿಯಾಗಿ ದೀಪವನ್ನು ಹಚ್ಚಿ ಪೂಜಾ ಕಾರ್ಯಕ್ರಮವನ್ನು ಉದ್ಘಾಟಿಸಿ, ಇಷ್ಟಲಿಂಗ ಪೂಜೆಯ ಮಹತ್ವವನ್ನು ಬಣ್ಣಿಸಿದರು. ಇದೇ ಸಮಯದಲ್ಲಿ ತೆಲುಗಿನಲ್ಲಿ ಪ್ರಕಟವಾದ ಇಷ್ಟಲಿಂಗಾರ್ಚನಾ ಎಂಬ ಪುಸ್ತಕವನ್ನು ಬಿಡುಗಡೆ ಮಾಡಲಾಯಿತು.

ಮಕ್ಕಳ ಕಾರ್ಯಕ್ರಮ

ಕೆ. ಎಂ. ಶೃತಿ ಭಟ್ಟಳ "ಪತಿತೋದ್ಧಾರಕ ಬಸವಣ್ಣ" ಎಂಬ ನೃತ್ಯ ರೂಪಕ-ದೊಡನೆ ಮಕ್ಕಳ ಗೋಷ್ಠಿ ಆರಂಭವಾಯಿತು. ಕುಮಾರಿ ಬಸವಶ್ರೀ ಮತ್ತು ಬಸವೇಶ್ವರಿ ಉಭಯತರ ಅಲ್ಲಮ ಪ್ರಭು-ಅಕ್ಕಮಹಾದೇವಿ ಸಂವಾದವು ಎಲ್ಲರ ಮನಸ್ಸನ್ನು ಸೆಳೆಯಿತು. ಕುಮಾರಿ ಬಸವಶ್ರೀಯ ಇಂಗ್ಲೀಷ್ ಭಾಷಣ, ಉಮಾದೇವಿ ಬಿರಾದಾರ ಮತ್ತು ಜಯಶ್ರೀ ಪಾಟ್ನೆ ಅವರ ಹಿಂದಿ ಭಾಷಣಗಳು ಸಭಿಕರನ್ನು ಮಂತ್ರಮುಗ್ಧಗೊಳಿಸಿದವು. ಕುಮಾರಿ ಆರತಿ ಅಡಕಿಹಾಳ ಅವರ "ಹೇ ಶರಣ ಬಂಧುಗಳೇ"ನೃತ್ಯ ಮತ್ತು ಕುಮಾರಿ ಶೃತಿಯ ಭಾಷಣಗಳು ಜನರನ್ನು ಹರ್ಷದಲ್ಲಿ ತೇಲಿಸಿದವು.

ಸಮುದಾಯ ಪ್ರಾರ್ಥನೆ

ಹಿಂದಿಯಲ್ಲಿ ಧ್ವಜಗೀತೆ, ಪ್ರತಿಜ್ಞಾ ಗೀತೆ ಹಾಡುವ ಮೂಲಕ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಮಾರ್ಗದರ್ಶನ ಮಾಡಿದಂತೆ ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯವರು ಮೇ 22 ರಂದು ಬೆಳಿಗ್ಗೆ 10 ಗಂಟೆಗೆ ಸರಿಯಾಗಿ ಧ್ವಜಾರೋಹಣ ಮಾಡಿದರು. ಪೂಜ್ಯ ಮಾತೆ ಮಹಾದೇವಿಯವರು ಹಿಂದಿ ಭಾಷೆಯಲ್ಲಿ ಸಮುದಾಯ ಪ್ರಾರ್ಥನೆ ಮಾಡಿಸಿದರು. ಸಾಮೂಹಿಕ ಪ್ರಾರ್ಥನೆಯ ಮಹತ್ವ ತಿಳಿಸಿ, ಎಲ್ಲರೂ ತಮ್ಮ ತಮ್ಮ ಊರುಗಳಿಗೆ ತೆರಳುತ್ತಲೇ ತಮ್ಮ ತಮ್ಮ ಕ್ಷೇತ್ರಗಳಲ್ಲಿ ರಾಷ್ಟ್ರೀಯ ಬಸವ ದಳ ರಚಿಸಿ, ಸಾಮೂಹಿಕ ಪ್ರಾರ್ಥನೆ ಆರಂಭಿಸಲು ಕರೆ ಕೊಟ್ಟರು. ಷಟ್ ಸೂತ್ರ ಘೋಷಣೆ-ಪ್ರತಿಜ್ಞಾ ಸ್ವೀಕಾರದ ನಂತರ ಸಾಮೂಹಿಕ ಪ್ರಾರ್ಥನಾ, ವಿಶ್ವಜ್ಯೋತಿ ಬಸವಣ್ಣ ಎಂಬ ಹಿಂದಿ ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು.

ಲಿಂಗಾಯತ ಧರ್ಮ ದರ್ಪಣಮು ಎಂಬ ತೆಲುಗು ಕೃತಿಯ ಬಿಡುಗಡೆ ನೆರವೇರಿತು. ಪ್ರಸಿದ್ಧ ತೆಲುಗು ವಿದ್ವಾಂಸರಾದ ಡಾ॥ ಕೆ. ಲಲಿತಾಂಬ ಮತ್ತು ನಾಗಲಿಂಗ ಶಿವಯೋಗಿಗಳ ವಿದ್ವತ್‌ಪೂರ್ಣ ಭಾಷಣಗಳು ತೆಲುಗು ಸಾಹಿತ್ಯದಲ್ಲಿ ಬಸವಣ್ಣನವರ ಪರಿಚಯ"ದ ಮಾಹಿತಿಕೊಟ್ಟವು.

ಸಮಾರೋಪ ಸಮಾರಂಭ

ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳ ದಿವ್ಯ . ಸನ್ನಿಧಿಯಲ್ಲಿ ಸಮಾರೋಪ ಸಮಾರಂಭ, ರಾಷ್ಟ್ರಿಯ ಬಸವ ದಳಗಳ ಮಹಾಧಿವೇಶನ ಜರುಗಿದವು. ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಗೋಷ್ಠಿಯನ್ನು ಉದ್ಘಾಟಿಸಿದರು, ಸುಭದ್ರ ರಾಷ್ಟ್ರ ನಿರ್ಮಾಣಕ್ಕೆ ಯುವಜನತೆಯ ಶಕ್ತಿ ಎಷ್ಟು ಅಗತ್ಯ ಎಂಬ ಬಗ್ಗೆ ಕರ್ನಾಟಕ ರಾಜ್ಯ ರಾಷ್ಟ್ರೀಯ ಬಸವ ದಳದ ಕಾರ್ಯಾಧ್ಯಕ್ಷ ಬಸವ ಕುಮಾರ್ ಪಾಟೀಲರು ಮಾತನಾಡಿದರು. ರಾಷ್ಟ್ರ ನಿರ್ಮಾಣಕ್ಕೆ ಬಸವಣ್ಣನವರು ಕೊಟ್ಟ ಐದು ಸೂತ್ರಗಳೇ ಪಂಚ ಆಚಾರಗಳು ಎಂದು ಪೂಜ್ಯ ಲಿಂಗಾನಂದ ಸ್ವಾಮಿಗಳು ಅಮೋಘವಾಗಿ ಮಾತನಾಡಿದರು. ಕರ್ನಾಟಕ ರಾಜ್ಯ ರಾಷ್ಟ್ರೀಯ ಬಸವ ದಳದ ಗೌರವಾಧ್ಯಕ್ಷರು, ಜನಪ್ರಿಯ ವೈದ್ಯರು, ರಾಜ್ಯ ಪ್ರಶಸ್ತಿ ವಿಜೇತರೂ ಆದ ಡಾ॥ ನಿತಿನ ಚಂದ್ರು ಹತ್ತೀಕಾಳರು ಹಿಂದಿಯಲ್ಲಿ ಉಪನ್ಯಾಸ ಮಾಡಿ ಎಲ್ಲರ ಗಮನ ಸೆಳೆದರಲ್ಲದೆ ಪ್ರಸ್ತುತ ಸಮ್ಮೇಳನ ಸಾಧಿಸಿದ ಭಾವೈಕ್ಯತೆಯನ್ನು ಕೊಂಡಾಡಿದರು. ವಿವಿಧ ರಾಜ್ಯಗಳ ಜನರನ್ನು ಹೀಗೆ ಹತ್ತಿರ ತರುತ್ತಿದೆ ಎಂದು ಬಣ್ಣಿಸಿದರು.

"ಬಸವ ಜ್ಯೋತಿ" ಶೀರ್ಷಿಕೆಯ ಹಿಂದಿ ಮತ್ತು ತೆಲುಗು ಧ್ವನಿ ಸುರುಳಿಗಳನ್ನೂ

ಬಸವಕುಮಾರ್ ಪಾಟೀಲ ಬಿಡುಗಡೆ ಮಾಡಿದರು. ಈಚಲಕರಂಜಿಯ ಮಾಲೂತಾಯಿ ಮುರಾರಿಯಲ್ಲಿ ಮಾತನಾಡಿದರೆ ಗುಲಾಬ್ ನಜೀಫ್ "ಬಸವ ಚರಿತ್ರೆ" ಲಾವಣಿಯನ್ನು ಹಿಂದಿಯಲ್ಲಿ ಸ್ವತಃ ರಚಿಸಿ ಹಾಡಿದರು.

ನಿರ್ಣಯಗಳು

ಸಮಾರೋಪ ಸಮಾರಂಭದಲ್ಲಿ ಮಹತ್ವಪೂರ್ಣ ನಿರ್ಣಯಗಳನ್ನು ಕೈಗೊಳ್ಳಲಾಯಿತು. ಆಂಧ್ರ ಪ್ರಭುತ್ವವು ಈಗ ಕೆ. ವಿ. ಪುಟ್ಟಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ಆಯೋಗವೊಂದನ್ನು ರಚಿಸಿದ್ದು, ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಹಿಂದುಳಿದಿರುವ ಲಿಂಗಾಯತರನ್ನು ಸೇರಿಸಲು ಆಗ್ರಹಿಸಬೇಕೆಂದು ನಿರ್ಣಯಿಸಲಾಯಿತು.

ಬರ್ಕಲ್‌ಪುರಾ ಸರ್ಕಲ್ಲಿನಲ್ಲಿ ವಿಶ್ವಗುರು ಬಸವಣ್ಣನವರ ಬೃಹತ್ ಕಂಚಿನ ಪುತ್ಥಳಿಯನ್ನು ಆಂಧ್ರ ಸರ್ಕಾರವು ಸ್ಥಾಪಿಸಬೇಕೆಂದು ನಿರ್ಣಯಿಸಲಾಯಿತು.

ಶಿವಕವಿ ಪಾಲ್ಕುರಿಕೆ ಸೋಮನಾಥನ ಹೆಸರನ್ನು ಟ್ಯಾಂಕ್ ಬಂಡ್ ರಸ್ತೆಗೆ ಇಟ್ಟು, ಅಲ್ಲಿ ಕಂಚಿನ ಪುತ್ಥಳಿಯನ್ನು ನಿಲ್ಲಿಸಿ ಸೋಮನಾಥನನ್ನು ಗೌರವಿಸಲು ಆಂಧ್ರ ಸರ್ಕಾರ ಯತ್ನಿಸಬೇಕೆಂದು ನಿರ್ಣಯಿಸಲಾಯಿತು. ಬಸವ ಜಯಂತಿ ನಿಮಿತ್ತ ವೈಶಾಖ ಮಾಸದ ಅಕ್ಷಯ ತೃತೀಯಾದಂದು ಆಂಧ್ರ ಸರ್ಕಾರವು ಐಚ್ಛಿಕ ರಜಾ ದಿನವನ್ನು ಕೊಟ್ಟಿರುವುದಕ್ಕಾಗಿ ಅಭಿನಂದಿಸಿ, ಇದನ್ನು ಕಡ್ಡಾಯ ಮತ್ತು ಸಾರ್ವತಿಕ ರಜೆಯನ್ನಾಗಿ ಪರಿವರ್ತಿಸಬೇಕೆಂದು ಕೋರಲಾಯಿತು. ಕೇಂದ್ರ ಸರ್ಕಾರದಿಂದ ಪ್ರಕಟವಾಗುವ ನೇಶನಲ್ ಕ್ಯಾಲೆಂಡರಿನಲ್ಲಿ ಬಸವ ಜಯಂತಿ–ಬಸವ ಪಂಚಮಿಯ ವಿವರ ನೀಡಬೇಕೆಂದು ಆಗ್ರಹಿಸಿ ನಿರ್ಣಯ ಕೈಗೊಳ್ಳಲಾಯಿತು.

ವರದಿ : **ನಿಜಗುಣಾನಂದ ಸ್ವಾಮಿ**

ಇಳಕಲ್ ಶ್ರೀಗಳ ಹೇಳಿಕೆ ಮತ್ತು ಮೂಜಗಂ ವರ್ತನೆ

ಸೂಕ್ತ ದಲಿತ ಶಿಷ್ಯ ಸಿಕ್ಕರೆ, ಅವನನ್ನು ತಮ್ಮ ಮಠಕ್ಕೆ ಉತ್ತರಾಧಿಕಾರಿಯನ್ನಾಗಿ ಮಾಡಬಹುದು ಎಂದು, ಇಳಕಲ್ಲ ಮಹಾಂತ ಶ್ರೀಗಳು ಹೇಳಿದ್ದು ; ತದ್ವಿರುದ್ಧ, ಹುಬ್ಬಳ್ಳಿ ಮೂಜಗಂ ಅವರು, ತಮ್ಮ ಶಿಷ್ಯರೊಂದಿಗೆ, ಇಳಕಲ್ಲ್‌ಗೆ ಧಾವಿಸಿ, ಒತ್ತಾಯದಿಂದ ಅವರ ಹೇಳಿಕೆ ಪಡೆದದ್ದು. ತತ್ಪರಿಣಾಮ, ಶ್ರೀ ನಿಜಲಿಂಗಪ್ಪ ಮೊದಲ್ಗೊಂಡು ಅನೇಕ ಜನ ಜಗದ್ಗುರುಗಳು ಮತ್ತು ದೊಡ್ಡ ದೊಡ್ಡ ಮಠಾಧೀಶರು, ಮೂಜಗಂರವರ ವರ್ತನೆಯನ್ನು ಖಂಡಿಸಿದ್ದು, ಈಗಾಗಲೇ ಪ್ರಮುಖ ಪತ್ರಿಕೆಗಳಲ್ಲಿಯೂ ಸಹ ಸಾಕಷ್ಟು ವರದಿಯಾಗಿದೆ.

ಈ ಘಟನೆಯನ್ನು ಸ್ಮರಿಸಿಕೊಂಡಾಗ, ಒಂದು ಸಣ್ಣ ದೃಷ್ಟಾಂತ ಅಂದರೆ ಒಂದು ಎಮ್ಮೆಯ ಸಣ್ಣ ಕಥೆ ನೆನಪಾಗುತ್ತದೆ. ಒಂದ ಊರಲ್ಲಿ ಇಬ್ಬರು ಗಂಡ ಹೆಂಡರಿದ್ದರಂತೆ. ಗಂಡ ತಾನೊಂದು ಎಮ್ಮೆ ತರುವದಾಗಿ ಹೇಳಿದನಂತೆ, ಎಮ್ಮೆ ತಂದರೆ, ತನ್ನ

ತವರಿಗೂ ಮಜ್ಜಿಗೆ ಕೊಡ[illegible] ಮಾತಿಗೆ ಮಾತು ಬೆಳೆದು, ಕೋಪಗೊಂಡ ಗಂಡ, ನಿನ್ನ ತವರಿಗೆ ಮಜ್ಜಿಗೆ ಕೊಡುತ್ತಿಯಾ ?–ಎಂದು ಅವಳನ್ನು ಹಿಗ್ಗಾಮುಗ್ಗಿ ಬಡದೇ ಬಿಟ್ಟನಂತೆ. ಅವಳು ಅಳುತ್ತ ಕರೆಯುತ್ತ ಅಲ್ಲಿಯೇ ಇದ್ದ ತನ್ನ ತವರ ಮನೆಗೆ ಹೋಗಿ, ತನ್ನ ಗಂಡ ಎಮ್ಮೆ ತರುವ, ತಾನು ಮಜ್ಜಿಗೆ ಕೊಡುವ ಇತ್ಯಾದಿ ಎಲ್ಲ ರಾದ್ಧಾಂತವನ್ನು ಸವಿಸ್ತಾರವಾಗಿ ಹೇಳಿದಳಂತೆ. ಸಿಟ್ಟಿಗೆದ್ದ ಅವಳ ಸಹೋದರರು, ಆಗಿಂದಾಗ ಇವನ ಮನೆಗೆ ಧಾವಿಸಿ, ಅವನನ್ನು ಹೊರಗೆಳೆದು ಸಿಕ್ಕಾಪಟ್ಟೆ ಥಳಿಸಿದರಂತೆ. ಈ ಗಲಭೆ ಕಂಡ ಅಲ್ಲಿಯ ನೆರೆಹೊರೆಯವರು, ಆ ಸಹೋದರರನ್ನು ತಡೆದು, ಯಾಕೆ ಬಡಿತಾ ಇದ್ದೀರಿ ಎಂದು ಕಾರಣ ಕೇಳಿದರಂತೆ. ಅದಕ್ಕೆ ಅವರು "ಇವ ಎಂಥವಾ ? ಮಜ್ಜಿಗೆ ಕೊಡಾಕು ಬ್ಯಾಡ ಅಂತಾನಲ್ಲ." ಎಂದರಂತೆ.

ಇಲ್ಲಿ ವಿಚಾರ ಮಾಡುವ ಸಂಗತಿಯೆಂದರೆ, ಎಮ್ಮೆ ತರುವದೆಲ್ಲಿ ? ಹೈನ ಮಾಡುವದೆಲ್ಲಿ ? ಮಜ್ಜಿಗೆ ಕೊಡುವದೆಲ್ಲಿ ? ಇದೆಲ್ಲ ರಾದ್ಧಾಂತ ಕೇಳಿದ ಆ ಜನಗಳು, ಈ ಗಂಡ–ಹೆಂಡತಿ ಅಳುವದಕ್ಕಿಂತ ಬಲವಾಗಿ ನಕ್ಕರಂತೆ. ಹೀಗೆ ಆ ಎಮ್ಮೆಯ ಕತೆಯೂ ಮತ್ತು ಈ ಮೂಜಗಂ ಅವರ ಕತೆಯೂ, ಎರಡೂ ಒಂದೇಯಾಗಿವೆ ಎಂಬುದನ್ನು ಇಲ್ಲಿ ಕಂಡುಕೊಳ್ಳಬಹುದು.

ಯಾಕೆಂದರೆ, ಇಳಕಲ್ಲ ಶ್ರೀಗಳಿಗೆ, ಇನ್ನೂ 30–40 ವರ್ಷ ಆಯುಷ್ಯ. ಅವರಿಗೆ ಅಂಥ ಸೂಕ್ತ ದಲಿತ ಶಿಷ್ಯ ಸಿಗುವದೆಂದು ? ಅವರ ಆಯುಷ್ಯ ಮುಗಿಯುವದೆಂದು ? ಆ ದಲಿತನನ್ನು ತಮ್ಮ ಮಠಕ್ಕೆ ಉತ್ತರಾಧಿಕಾರಿಯನ್ನಾಗಿ ಮಾಡುವದೆಂದು ? ವಸ್ತುಸ್ಥಿತಿ ಹೀಗಿರುವಾಗ ಮತ್ತು ಇಂದಿನ ಆಧುನಿಕ ಯುಗದಲ್ಲೆ, "ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರೆಲ್ಲ ಒಂದೇ"-ಎಂಬ ಬಸವನ ಗಾಳಿ ರಭಸದಿಂದ ಬೀಸುತ್ತಿರುವಾಗ, ಮತ್ತು ಇಂದಿನ ಬಹುತೇಕ ಜಾತಿ ಜಂಗಮರೆಲ್ಲರೂ, ತಮ್ಮ ಸ್ಥಾನಮಾನ, ನೀತಿನೇಮ, ಮೌಲ್ಯಗಳೆಲ್ಲವನ್ನೂ ಗಾಳಿಗೆ ತೂರಿ, ತಾವು ಹರಿ-ಜನ, ಗಿರಿಜನ, ದಲಿತ ಕೋಮಿಗೆ ಸೇರಿದ ಬೇಡ ಜಂಗಮರೆಂದು, ಢಣಾಡಂಗುರ ಮಾಡಿ ಸಾಧಿಸುತ್ತ, ಪಾಪ ಆ ದಲಿತರ, ಆ ಅಸ್ಪೃಶ್ಯರ ಎಲ್ಲ ಸೌಲಭ್ಯ ಮತ್ತು ಮೀಸಲಾತಿಗಳನ್ನು ಗಿಟ್ಟಿಸುತ್ತಿರುವಾಗ, ಪೂರ್ಣಜ್ಞರಾದ ಮೂಜಗಂ ಅವರು, ತಮ್ಮ ಈ ಜಾತೀಯತೆಯ ಪ್ರದರ್ಶನ ಮಾಡಲು, ಇಷ್ಟೊಂದು ಆತುರ, ಇಷ್ಟೊಂದು ಅವಸರ ಮಾಡಬಾರದಾಗಿತ್ತು. ಇವರ ಈ ವರ್ತನೆ ನಿಜವಾಗಿಯೂ ಖಂಡನೀಯ.

ಬಿಜಾಪೂರ
5–6–1994

ಕುಮಾರ ಕಕ್ಕಯ್ಯ ಪೋಳ

ಕಲಿದೇವರ ದೇವನು (ಪರಮಾತ್ಮನು)
ಕಾಯಗೊಂಡಿಪ್ಪುದ ನಿಮ್ಮಿಂದ ಕಂಡೆನು ಕಾಣಾ
ಸಂಗನ ಬಸವಣ್ಣಾ

—ಮಡಿವಾಳ ಮಾಚಿದೇವ

ಚೆಂಬೂರಿನಲ್ಲಿ ಬಸವಣ್ಣನವರ 862 ನೇ ಜಯಂತಿ ಉತ್ಸವ

ವಿಶ್ವ ಶಾಂತಿಗೆ ಬಸವಣ್ಣನವರ ತತ್ತ್ವ ಒಂದೇ ಮಂತ್ರ: ಮಾತೆ ಮಹಾದೇವಿ

ಮುಂಬಯಿ, ಮೇ. 15–ವಿಶ್ವ ಶಾಂತಿ ಹಾಗೂ ಸದ್ಯದ ಪರಿಸ್ಥಿತಿಯಲ್ಲಿ ಸಮಾಜ ಪರಿವರ್ತನೆಗೆ ಬಸವಣ್ಣನವರ ತತ್ತ್ವ ಸಂದೇಶಗಳು ಒಂದೇ ತಾರಕ ಮಂತ್ರ ಎಂದು ಜಗದ್ಗುರು ಮಾತೆ ಮಹಾದೇವಿ ಇಂದಿಲ್ಲಿ ಹೇಳಿದರು.

ಅವರು ಚೆಂಬೂರಿನ ಬಸವೇಶ್ವರ ಫಿಲೋಸೋಫಿಕಲ್ ಮತ್ತು ಕಲ್ಚರಲ್ ಸೊಸೈಟಿ ವತಿಯಿಂದ ದಿ ಫೈನ್ ಆರ್ಟ್ಸ್ ಕಲ್ಚರಲ್ ಕೇಂದ್ರದ ಶಿವಸ್ವಾಮಿ ಸಭಾ ಗೃಹದಲ್ಲಿ ಜರುಗಿದ 862 ನೇ ಬಸವ ಜಯಂತಿಯನ್ನು ದೀಪ ಬೆಳಗಿಸುವ ಮೂಲಕ ಉದ್ಘಾಟನೆ ಮಾಡಿ ಅಧ್ಯಕ್ಷ ಸ್ಥಾನದಿಂದ ಅವರು ಮಾತನಾಡುತ್ತಿದ್ದರು. ಕ್ರಾಂತಿ ಪುರುಷನಾಗಿ ಮೆರೆದು ದೀನದಲಿತರ ದನಿಯಾಗಿ ಸಮತಾಭಾವವನ್ನು ಜಗಕ್ಕೆ ಸಾರಿದ ಬಸವಣ್ಣನವರ ತ್ಯಾಗ ಪರಿಶ್ರಮ ಹಾಗೂ ದೈವಿದತ್ತ ಜ್ಞಾನೋದಯದ ಫಲವಾಗಿ ಹೊರಬಂದ ವಚನ ಸಾಹಿತ್ಯ ಜನರನ್ನು ಅಂಧಕಾರದಿಂದ ಬೆಳಕಿನೆಡೆಗೆ ಒಯ್ಯಬಲ್ಲವು. ಅವರ ವಚನಗಳು ಜನಸಾಮಾನ್ಯರಿಗೆ ಅರ್ಥವಾಗುವ ವೇದ ಮಂತ್ರದಂತಿದ್ದು, ಅವುಗಳ ಪಠಣ ಹಾಗೂ ಅಳವಡಿಕೆಯಿಂದ ಪಾವನರಾಗಬೇಕು ಎಂದು ಕರೆಯಿತ್ತರು. ಬಸವಣ್ಣನವರ ವಚನ ಹಾಗೂ ತತ್ತ್ವಗಳು ಕಾಲಾತೀತವಾಗಿವೆ ಎಂದೂ ಹೇಳಿದರು.

ಮುಖ್ಯ ಉಪನ್ಯಾಸಕರಾಗಿ ಬಂದಿದ್ದ ಡಾ॥ ಭಗವನ್‌ದಾಸ್ ತಿವಾರಿ, ಬಸವೇಶ್ವರ ಒಬ್ಬ ಮಹಾ ಸಂತರಲ್ಲದೇ ಸಮಾಜದ ಎಲ್ಲಾ ವರ್ಗದವರನ್ನು ಉದ್ಧರಿಸಲೆಂದು ಅವತರಿಸಿ ಬಂದ ಕ್ರಾಂತಿ ವೀರ. ಉದಾತ್ತ ಮಾನವತಾವಾದಿಯಾಗಿದ್ದ ಅವರು ಜಾತಿ, ಸಂಪ್ರದಾಯ, ವರ್ಗ ಮೀರಿದ ಮಹಾನ್ ಸಮಾಜ ಸುಧಾರಕ, ಕೆಳವರ್ಗದವರಿಗೆ ದಾರಿ ದೀಪವಾಗಿ ಜಾತಿ ಸಂಪ್ರದಾಯಗಳನ್ನು ಕಿತ್ತೆಸೆದು ಭಾವೈಕ್ಯತೆ ಸಾಧಿಸಿದ ಉದಾತ್ತ ಮಹಾನ್ ಮಾನವತಾವಾದಿ ಎಂದು ವರ್ಣಿಸಿದರು.

ಸಮಾಜದಲ್ಲಿನ ಅಂಧಶ್ರದ್ಧೆ, ಗೊಡ್ಡು ಸಂಪ್ರದಾಯ ಹಾಗೂ ಮೇಲು ಕೀಳು ಆಚರಣೆಯನ್ನು ತಮ್ಮ ದಿವ್ಯ ಸಂದೇಶ ಹಾಗೂ ವಚನಗಳ ಮೂಲಕ ವಿಚಾರಧಾರೆ ಮತ್ತು ಹೊಸ ಆದರ್ಶಗಳಿಂದ ಭ್ರಾತೃತ್ವ ಸಮಾಜ ನಿರ್ಮಿಸಿದ ಪವಾಡ ಪುರುಷ, ಅವರ ಧ್ಯೇಯ ಮತ್ತು ಆದರ್ಶಗಳು ಇಂದು ಅಪಾಯದ ಕಡೆ ಸಾಗುತ್ತಿರುವ ಸಮಾಜವನ್ನು ಉದ್ಧರಿಸಲು ಸಾಧ್ಯವಾಗುತ್ತದೆ. ಜನರು ಬಸವಣ್ಣನವರ ಧ್ಯೇಯ ಆದರ್ಶಗಳನ್ನು ಅನುಸರಿಸಿ ತಾವೂ ಸುಧಾರಣೆಗೊಂಡು ಸಮಾಜ ಪರಿವರ್ತನೆಗೆ ಮುಂದಾಗಬೇಕು ಎಂದು ಸೂಚಿಸಿದರು. ಪ್ರಾರಂಭದಲ್ಲಿ ಸ್ವಾಗತಿಸಿದ ಚೆಂಬೂರಿನ ಬಸವೇಶ್ವರ ಫಿಲೋಸೋಫಿಕಲ್ ಮತ್ತು ಕಲ್ಚರಲ್ ಸೊಸೈಟಿಯ ಅಧ್ಯಕ್ಷ ಎಸ್. ಎಂ. ಕೋಳೂರು ತಮ್ಮ ಸಂಸ್ಥೆಯ ಧ್ಯೇಯೋದ್ದೇಶಗಳನ್ನು ವಿವರಿಸಿದರು.

ಸೊಸೈಟಿಯ ಟ್ರಸ್ಟಿ ಎಂ. ಎಂ. ಕೋರಿ ಡಾ॥ ಭಗವಾನ್‌ದಾಸ್‌ಗುಪ್ತಾ ತಿವಾರಿಯವರಿಗೆ ಮಾಲಾರ್ಪಣೆ ಮಾಡಿದರು. ಸಿದ್ನಾಳ್ ಕಾರ್ಯಕ್ರಮ ನಿರೂಪಿಸಿದರು. ಸಂಘದ ಗೌರವ ಕಾರ್ಯದರ್ಶಿ ದುಂದೇಶ್ ಬಿ. ಗಲಗಲಿ ಗಣ್ಯರ ಸಂದೇಶ ವಾಚನ ಮಾಡಿದರು.

ಸಂಘದ ಉಪಾಧ್ಯಕ್ಷೆ ಮಾಯಾ ಪಾಟೀಲ, ಸಂಘದ ಪ್ರತಿಭಾನ್ವಿತ ವಿದ್ಯಾರ್ಥಿ–ವಿದ್ಯಾರ್ಥಿನಿಯರ ಪರಿಚಯ ಮಾಡಿದರು.

ಜಗದ್ಗುರು ಮಾತೆ ಮಹಾದೇವಿ ಅವರು ಪ್ರತಿಭಾನ್ವಿತರಿಗೆ ಬಹುಮಾನ ಮತ್ತು ಪಾರಿತೋಷಕ ವಿತರಿಸಿದರು.

ಬಸವ ಜಯಂತಿಯ ಅಂಗವಾಗಿ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮ, ಯೋಗ ಹಾಗೂ ಉಪನ್ಯಾಸಗಳು ಜರುಗಿದವು, ಕಾರ್ಯಕ್ರಮದ ನಂತರ ಕನ್ನಡ ಚಲನ ಚಿತ್ರ "ಕ್ರಾಂತಿಯೋಗಿ ಬಸವಣ್ಣ" ಚಿತ್ರ ಪ್ರದರ್ಶಿಸಲಾಯಿತು.

(ದಿ. 16–5–1994, ಕರ್ನಾಟಕ ಮಲ್ಲ, ಮುಂಬಯಿ ಇದರ ವರದಿಯಿಂದ ಆಯ್ದುದು)

ಉಮರ್ಗಾದಲ್ಲಿ ರಾಷ್ಟ್ರೀಯ ಬಸವ ದಳ ಪ್ರಾರಂಭ

—ಸೋದರಿ ನಾಗರತ್ನಮ್ಮ

ಮಹಾರಾಷ್ಟ್ರ ರಾಜ್ಯದ ಉಸ್ಮಾನಾಬಾದ್ ಜಿಲ್ಲೆಯ ಉಮರ್ಗಾದಲ್ಲಿ ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯವರು 1994 ರ ಮಾರ್ಚ್ 28 ರಂದು ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಪ್ರವಚನವನ್ನು ಆರಂಭಿಸಿದರು. ಅವ್ಯಾಹತವಾಗಿ 52 ದಿವಸಗಳ ಕಾಲ ನಡೆದು 18–5–1994 ರಂದು ಮಂಗಲಗೊಂಡಿತು.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ ಅವರು ಮುಂಬೈಯಿಂದ ಬಸವ ಜಯಂತಿ ಕಾರ್ಯಕ್ರಮ ಮುಗಿಸಿಕೊಂಡು ಹೈದರಾಬಾದ್ ಮೂಲಕ ಉಮರ್ಗಾಕ್ಕೆ ಆಗಮಿಸಿದರು.

ಅತ್ಯಂತ ವೈಭವದಿಂದ ಭಕ್ತಿಪೂರ್ಣ ಸ್ವಾಗತ ನೀಡಲಾಯಿತು. ತೆರೆದ ಅಲಂಕೃತ ಜೀಪಿನಲ್ಲಿ ಇಬ್ಬರೂ ಮಾತಾಜಿಯವರನ್ನು ಕುಳ್ಳಿರಿಸಿ, ವಾದ್ಯ ಸಮೇತ ಮೆರವಣಿಗೆ ಮೂಲಕ ವೇದಿಕೆಗೆ ಕರೆತರಲಾಯಿತು.

ಸಂಜೆ ಏಳೂಕಾಲಿಗೆ ಆರಂಭವಾದ ಮೆರವಣಿಗೆ ವೇದಿಕೆಗೆ ಹೋದಾಗ ರಾತ್ರಿ ಹತ್ತೂವರೆ ಅಂದಿನ ಕಾರ್ಯಕ್ರಮ ಮುಗಿದಾಗ ರಾತ್ರಿ ಒಂದು ಗಂಟೆಯಾದರೂ ತುಂಬಿದ ಸಭೆಯಿಂದ ಒಬ್ಬರೂ ಎದ್ದಿರಲಿಲ್ಲ. "ಬಸವಣ್ಣ ನಮ್ಮ ಧರ್ಮಗುರು" ಎಂದಷ್ಟೆ ಗೊತ್ತಿದ್ದು ಇನ್ನಾವ ಸಂಸ್ಕಾರವನ್ನೂ ಹೊಂದಿರದಿದ್ದ ಇಲ್ಲಿಯ ಜನ ಅವ್ಯಾಹತವಾಗಿ 50 ದಿವಸ ಕಾಲ ಪ್ರವಚನ ಕೇಳಿ ಬಸವ ತತ್ತ್ವದ ಮಹತ್ವವನ್ನರಿತು ಬೆಕ್ಕಸ ಬೆರಗಾ-

ದಿದ್ದರು, ... ಉಪಾಧ್ಯಕ್ಷ ಬಸವರಾಜ್ ಪಾಟೀಲರು ಪೂಜ್ಯ ಮಾತಾಜಿಯವರು ಹಿಂದಿಯಲ್ಲಿ ಹಾಡಿದ ಧ್ವಜ ಗೀತೆ ಸಂಕಲ್ಪ ರೀತಿ ಕೇಳಿ ಅಚ್ಚರಿಪಟ್ಟು ಭಾಷಣದಲ್ಲಿ ಹೇಳಿದರು, "ನಮ್ಮ ಧರ್ಮ ಇಷ್ಟು ಶ್ರೇಷ್ಠವೆ ? ಕಲ್ಯಾಣ ರಾಜ್ಯ ನಿರ್ಮಾಣ ಇದರ ಗುರಿಯೆ ? ರಾಮರಾಜ್ಯ ಎಂಬ ಪದ ಮಾತ್ರ ಕೇಳಿದ್ದೆವು. ಇಂದು ಕಲ್ಯಾಣರಾಜ್ಯ ಎಂಬ ಪದ ಕೇಳಿ ರೋಮಾಂಚನಗೊಂಡೆ" ಎಂದು ಉದ್ಗರಿಸಿದರು.

ಉಮರ್ಗಾದಲ್ಲಿ ರಾಷ್ಟ್ರೀಯ ಬಸವ ದಳ ಸ್ಥಾಪಿಸಲಾಗಿದ್ದು ಪೂಜ್ಯ ಶ್ರೀ ನೀಪ್ರ ಮೃಗೇಂದ್ರ ಸ್ವಾಮಿಗಳವರ ನೇತೃತ್ವದಲ್ಲಿ ಶರಣ. ಡಾ॥ ಎಂ. ಎಸ್. ಮೂಲಂಗ್ ಅವರು ಕಾರ್ಯಾಧ್ಯಕ್ಷರಾಗಿದ್ದಾರೆ, ಡಾ॥ ಅಶೋಕ್ ಏಳಾಪುರೆ ಅವರು ಕಾರ್ಯಾಧ್ಯಕ್ಷರಾಗಿದ್ದಾರೆ, ಶರಣ–ಸುಭಾಷ್ ಮಾಶಾಳಕರ ಅವರು ಪ್ರಧಾನ ಕಾರ್ಯದರ್ಶಿಯಾಗಿದ್ದು, ಶರಣ ಕಲ್ಯಾಣಿ ಪತಕಿ ಗುರೂಜಿ ಪ್ರಧಾನ ಸಂಚಾಲಕರಾಗಿದ್ದಾರೆ. ಶರಣ. ಮಲ್ಲಿನಾಥ ಶರಣಯ್ಯ ಸ್ವಾಮಿ ಅವರು ಕೋಶಾಧ್ಯಕ್ಷರಾಗಿದ್ದಾರೆ. ರಾಷ್ಟ್ರೀಯ ಬಸವ ದಳದ ಮಹಿಳಾ ವಿಭಾಗ ರಚಿಸಲಾಗಿದ್ದು, ಶರಣೆ. ಸುಗ್ಗಲಾಬಾಯಿ ಇಂಡೆ ಅವರು ಗೌರವಾಧ್ಯಕ್ಷರಾಗಿ, ಶರಣೆ ಹೀರಾಬಾಯಿ ಏಳಾಪುರೆ ಅವರು ಉಪಾಧ್ಯಕ್ಷೆಯರಾಗಿ, ಮಹಾನಂದ ಸುಭಾಷ್ ಮಾಶಾಳಕರ್ ಅವರು ಕಾರ್ಯಾಧ್ಯಕ್ಷೆಯರಾಗಿದ್ದಾರೆ. ಶರಣೆ. ಸುರೇಖಾ ಮೂಲಂಗ್ ಪ್ರಧಾನ ಕಾರ್ಯದರ್ಶಿಯರಾಗಿದ್ದು, ಶರಣೆ. ಸರೋಜಿನಿ ಎಂ. ಸ್ವಾಮಿ ಪ್ರಧಾನ ಸಂಚಾಲಕರಾಗಿದ್ದಾರೆ. ಸಹ ಕಾರ್ಯದರ್ಶಿಗಳಾಗಿ ಶರಣೆ. ನೀಲಮ್ಮ ದಳಗಡೆ ಶರಣೆ, ಸರೋಜಿನಿ ಉಪಾಸೆ, ಸಹ ಸಂಚಾಲಕರಾಗಿ ಶರಣ ಸುನಂದಾ ವಿಜಯಪಾಟೀಲ ನೇಮಕವಾಗಿದ್ದಾರೆ.

ಭೂಕಂಪದಿಂದ ಮಾನಸಿಕವಾಗಿ ಹತಚೇತನರಾಗಿದ್ದ ಉಮರ್ಗಾ ಜನರು ಪ್ರವಚನವನ್ನು ಕೇಳಿ ಆನಂದ–ಆತ್ಮ ವಿಶ್ವಾಸ ಪಡೆದರು.

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

ಬಸವ ತತ್ತ್ವ ಪರೀಕ್ಷೆಗಳು-1993 ಪರಿಣಾಮ

ಬಸವ ತತ್ತ್ವ ಪ್ರವೇಶ

ಮೊದಲ ವರ್ಗ :

101 ಶರಣಮ್ಮ ಎಸ್. ಎಮ್ (ಹುಬ್ಬಳ್ಳಿ ಕೇಂದ್ರ)
151 ಎಸ್. ಬಿ. ಹೇಮಲತಾ (ಸರ್ಜಾಪುರ ಕೇಂದ್ರ)

ಎರಡನೆಯ ವರ್ಗ :

106 ಬಸವರಾಜ ಎಂ. ತಡಸ (ಹುಬ್ಬಳ್ಳಿ ಕೇಂದ್ರ)
105 ಉಮಾ ಅಶೋಕ ಗುಳೇದಗುಡ್ಡ (" ")
115 ಸದಾನಂದ ಗುರುಸಿದ್ಧಪ್ಪ ಎಳ್ಳೂರ (ಧಾರವಾಡ ಕೇಂದ್ರ)

123 ಸಂಗಯ್ಯ ಗುರುಸಿದ್ಧಯ್ಯ ಹಿರೇಮಠ (ತ. ಹೊನ್ನಿಹಳ್ಳಿ ಕೇಂದ್ರ)
130 ಪ್ರಭುಲಿಂಗ ಬಸವಣ್ಣೆಪ್ಪ ಮಿರ್ಜಿ (")
152 ಎನ್. ಜಾನಕಿ (ಸರ್ಜಾಪುರ ಕೇಂದ್ರ)
153 ಮಂಜುಳಾ ತಂದೆ ನಂಜುಂಡಪ್ಪ (")
154 ಎಸ್. ಎನ್. ಮಮತಾ (")
156 ಭುವನೇಶ್ವರಿ ಎಸ್. ಎನ್ (")

ಪಾಸ್ ವರ್ಗ :

104 ಜ್ಯೋತಿ ಗುರುಸಿದ್ಧಪ್ಪ ಕುಪ್ಪಸದ (ಹುಬ್ಬಳ್ಳಿ ಕೇಂದ್ರ)
131 ಚಂಪಾವತಿ ನಿಂಗಪ್ಪ ಮಿರ್ಜಿ (ತ. ಹೊನ್ನಿಹಳ್ಳಿ ಕೇಂದ್ರ)

ಬಸವ ತತ್ತ್ವ ಪರಿಚಯ

ಎರಡನೆಯ ವರ್ಗ :

201 ಸದಾನಂದ ಗುರುಸಿದ್ಧಪ್ಪ ಎಳ್ಳೂರ (ಧಾರವಾಡ ಕೇಂದ್ರ)
203 ಪ್ರಭುಲಿಂಗ ಬಸವಣ್ಣೆಪ್ಪ ಮಿರ್ಜಿ (ತ. ಹೊನ್ನಿಹಳ್ಳಿ ಕೇಂದ್ರ)
204 ಸಂಗಯ್ಯ ಗುರುಸಿದ್ಧಯ್ಯ ಹಿರೇಮಠ (")

ಬಸವ ತತ್ತ್ವ ಪ್ರವೀಣ

ಮೊದಲನೆಯ ವರ್ಗ :

301 ಸೋದರಿ ಕಸ್ತೂರಿ (ಬೆಂಗಳೂರು ಕೇಂದ್ರ)

ಶರಣೆ. ಶೋಭಾದೇವಿ ಪರನಾದಿ
ನಿರ್ದೇಶಕರು, ಶ್ರೀ ಬಸವ ಭಾರತಿ
ದಿವ್ಯಜ್ಞಾನ ವಿದ್ಯಾಲಯ, ಹುಬ್ಬಳ್ಳಿ

ವಿ. ಸೂ : 1994ನೇ ಇಸ್ವಿ ಅಗಸ್ಟ ತಿಂಗಳಲ್ಲಿ ಬಸವತತ್ತ್ವ ಪ್ರವೇಶ, ಪರಿಚಯ ಹಾಗೂ ಪ್ರವೀಣ ಪರೀಕ್ಷೆಗಳನ್ನು ನಡೆಸಲಾಗುವುದು. ಆಸಕ್ತರು 1 ರೂ. ಅಂಚೆ ಚೀಟಿ ಇಟ್ಟು, ನಿರ್ದೇಶಕರು, ಶ್ರೀ ಬಸವ ಭಾರತಿ ದಿವ್ಯಜ್ಞಾನ ವಿದ್ಯಾಲಯ, ಬಸವ ಚೈತನ್ಯ ನಂ 16, ಶ್ರೀ ಬಸವ ನಗರ, ಹೆಗ್ಗೇರಿ ಹತ್ತಿರ, ಹುಬ್ಬಳ್ಳಿ–580024 ಇವರೊಂದಿಗೆ ವ್ಯವಹರಿಸಬೇಕು.

ಶುಭ ಹಾರೈಕೆಗಳು

ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಎಲ್ಲರಿಗೂ ಶುಭ ಹಾರೈಕೆಗಳು. ಪರೀಕ್ಷೆಗೆ ಕೂರಿಸಬೇಕೆಂದು ರಾಷ್ಟ್ರೀಯ ಬಸವ ದಳ ದವರು ಹೆಚ್ಚು ಜನರನ್ನು ಪರೀಕ್ಷೆಗೆ ಕೂರಿಸಬೇಕೆಂದು ಸೂಚಿಸುತ್ತೇವೆ.

—ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷರು, ಬಸವ ತತ್ತ್ವ ಪರಿಷತ್,

ಹೈದರಾಬಾದ್ ನಗರದಲ್ಲಿ
ರಾಷ್ಟ್ರೀಯ ಬಸವ ದಳ ಪ್ರಾರಂಭ

ತೆಲುಗು ನಾಡಿನ ರಾಜಧಾನಿ ಹೈದರಾಬಾದ ನಗರದಲ್ಲಿ ದಿ. 23-5-1994 ರಂದು ರಾಷ್ಟ್ರೀಯ ಬಸವ ದಳವನ್ನು ಆರಂಭಿಸಲಾಯಿತು.

ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮೀಜಿಯವರ ದಿವ್ಯ ಸನ್ನಿಧಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಶರಣ ಅಡಿವೆಪ್ಪ ಚಂದ್ರಯವರು ಗೌರವಾಧ್ಯಕ್ಷರಾಗಿಯೂ, ಶರಣ ಸುಭಾಷ್ ಪಾಟೀಲರು ಕಾರ್ಯಾಧ್ಯಕ್ಷರಾಗಿಯೂ ನೇಮಕ ಮಾಡಲ್ಪಟ್ಟರು. ಮಹಬೂಬ ನಗರದ ಕೊಂಡಾ ಬಸವರಾಜ್ ಹೈದರಾಬಾದಿನ ನಾಗನಾಥ ಮಾಶೆಟ್ಟಿ, ಶರಣೆ. ಕಲಾವತಿ ಸ್ವಾಮಿ ಉಪಾಧ್ಯಕ್ಷರಾಗಿ ನೇಮಿಸಲ್ಪಟ್ಟರು. ಪ್ರಧಾನ ಕಾರ್ಯದರ್ಶಿಯಾಗಿ ಶರಣ ಸುಭಾಷ್ ಕೋರೆಯವರು, ಸಹ ಕಾರ್ಯದರ್ಶಿಯಾಗಿ ವಿಜಯಕುಮಾರ್ ಪಾಟ್ನೆಯವರು, ಪ್ರಧಾನ ಸಂಚಾಲಕರಾಗಿ ವೈಜನಾಥ ಹಿರೋಡೆಯವರು, ಸಹ-ಸಂಚಾಲಕರಾಗಿ ಶಿವರಾಜ್ ಪಾಟೀಲ, ಕಾಶೀನಾಥ ಪಾಟೀಲ, ಶಂಕರಪ್ಪ ಪಾಟೀಲ್ ನೇಮಿಸಲ್ಪಟ್ಟರು. ಕೋಶಾಧ್ಯಕ್ಷರಾಗಿ ಧನರಾಜ ಜೀರಿಗೆ ಅವರು ನೇಮಕವಾದರು.

ಸಲಹಾ ಮಂಡಳಿಯನ್ನು ರಚಿಸಿ ಶರಣ. ಶಿವರಾಜ ಶೆಟಕಾರ, ಶರಣ. ಶೆಟ್ಟಿ ಚಂದ್ರಶೇಖರ್, ಶರಣ. ಮಾಣಿಕ್ಯಪ್ಪ ಮುರುಡಾ ಅವರ ಮಾರ್ಗದರ್ಶನ ಪಡೆಯಲು ಸೂಚಿಸಲಾಯಿತು.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಆಶೀರ್ವಚನ ನೀಡುತ್ತ, ಬಸವ ಧರ್ಮದ ಎರಡನೆಯ ಸಮ್ಮೇಳನದಲ್ಲಿ ಆಂಧ್ರಪ್ರದೇಶ ವೀರಶೈವ-ಲಿಂಗಾಯತ ಒಕ್ಕೂಟದವರೊಡನೆ ಸಕ್ರಿಯವಾಗಿ ಸಹಕರಿಸಿದ ಜಿಯಾಗುಡ-ನಯಾಬಸ್ತಿಯ ರಾಷ್ಟ್ರೀಯ ಬಸವ ದಳದವರನ್ನು ಅಭಿನಂದಿಸಿ ನಗರದ ವಿವಿಧ ಬಡಾವಣೆಗಳಲ್ಲಿ ರಾಷ್ಟ್ರೀಯ ಬಸವ ದಳದ ಘಟಕಗಳನ್ನು ತೆರೆಯಬೇಕೆಂದು, ವಾರದ ಪ್ರಾರ್ಥನೆ, ಬಸವ ಜ್ಯೋತಿ ಕಾರ್ಯಕ್ರಮಗಳನ್ನು ಏರ್ಪಡಿಸಬೇಕೆಂದು, ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯವರು ಇಲ್ಲೇ ವಾಸ್ತವ್ಯ ಮಾಡುತ್ತಿದ್ದು, ಅವರ ಇರುವನ್ನು ಉಪಯೋಗಿಸಿ ಸಂಘಟನೆ ಮಾಡಬೇಕೆಂದು ಕರೆ ನೀಡಿದರು.

ಕಾರ್ಯಾಧ್ಯಕ್ಷ ಸುಭಾಷ್ ಪಾಟೀಲರು ಎಲ್ಲ ಸಹಕಾರದಿಂದ ಯಶಸ್ವಿಯಾಗಿ ರಾಷ್ಟ್ರೀಯ ಬಸವ ದಳ ನಡೆಸುವ ಭರವಸೆ ನೀಡಿದರು. ನಿಜಗುಣ ಸ್ವಾಮಿಯವರು ಶರಣು ಸಮರ್ಪಣೆ ಮಾಡಿದರು.

ನ್ಯಾಯ ನಿಷ್ಠುರಿ ದಾಕ್ಷಿಣ್ಯಪರ ನಾನಲ್ಲ
ಲೋಕವಿರೋಧಿ ಶರಣನಾರಿಗಂಜುವನಲ್ಲ
ಕೂಡಲ ಸಂಗಮದೇವರ ರಾಜ ತೇಜದಲಿಪ್ಪನಾಗಿ

ವಿಶ್ವಧರ್ಮ ಪ್ರವಚನದ ಸಂದೇಶ ಸಾರ

- **ವೈಜ್ಞಾನಿಕ ಯುಗದಲ್ಲಿ ಧರ್ಮದ ಆವಶ್ಯಕತೆ ಏನು ?**

ಮಾನವನು ಹಿಂದಿಗಿಂತಲೂ ಹೆಚ್ಚಾಗಿ ಇಂದು ಹಲವಾರು ಬಗೆಯ ಮಾನಸಿಕ ಒತ್ತಡಗಳಿಗೆ ಈಡಾಗುತ್ತಿದ್ದಾನೆ. ಜೀವನದ ವಿವಿಧ ಏರಿಳಿತಗಳ ಪ್ರಸಂಗದಲ್ಲಿ ಮಾರ್ಗದರ್ಶನ ಮಾಡಬಲ್ಲ ದಿವ್ಯ ಸಂಜೀವಿನಿಯಾಗಿ ಧರ್ಮವು ಕೆಲಸ ಮಾಡಬಲ್ಲದು.

- **ಧರ್ಮವು- ರಾಷ್ಟ್ರ ಸಮಾಜಗಳಲ್ಲಿ ಒಡಕು ಹುಟ್ಟಿಸುವುದೆ ?**

ಧರ್ಮದ ನಿಜವಾದ ಅರ್ಥವನ್ನು ತಿಳಿದುಕೊಂಡು ನಡೆದುದೇ ಆದರೆ ಅದು ಒಡಕು ಹುಟ್ಟಿಸದು, ವಿಶಾಲ ಮನೋಭಾವವನ್ನು ಬೆಳೆಸುವುದು.


- **ಹಿಂದುತ್ವವು ಸಂಕುಚಿತತೆಯ ಮನೋಭಾವ ಬೆಳೆಸುವುದೆ ?**

ಹಿಂದುತ್ವವು ಒಂದು ಮಹಾನ್ ಪರಂಪರೆಯನ್ನು ಪ್ರತಿನಿಧಿಸುವ ಪದ. ಭಾರತ ದೇಶದ ವಿವಿಧ ಸಂತರು, ಪ್ರವಾದಿಗಳು ಕೊಟ್ಟ ಧರ್ಮ ಮತ ಪಂಥಗಳು ಹಿಂದೂ ಕಕ್ಷೆಯಲ್ಲೇ ಬರುವ ಕಾರಣ, ಹಿಂದೂತ್ವದ ಪ್ರಜ್ಞೆಯು ವಿಶಾಲ ಸಮನ್ವಯ ದೃಷ್ಟಿಯನ್ನು ಬೆಳೆಸುವ ಭಾವೈಕ್ಯತೆಯ ಸಾಧನವೇ ವಿನಾ ಅನೈಕ್ಯತೆ, ವಿಘಟನೆಗೆ ಕಾರಣವಾಗುವ ಮತಾಂಧತೆಯಲ್ಲ.

"ಸ್ವಧರ್ಮದಲ್ಲಿ ಅಭಿಮಾನ ಪರಧರ್ಮ ಸಹಿಷ್ಣುತೆ
ವೈವಿಧ್ಯತೆಯಲ್ಲಿ ಐಕ್ಯತೆ, ಭಿನ್ನತೆಯಲ್ಲಿ ಸಮರಸ
ವಿಚಾರ ಭಿನ್ನಾಭಿಪ್ರಾಯವಿದ್ದರೂ, ಹೃದಯ ಭಿನ್ನಾಭಿಪ್ರಾಯ ಸಲ್ಲದು"
ಈ ಮಹಾನ್ ಸೂತ್ರಗಳೇ ಹಿಂದು ಪರಂಪರೆಯ ಚಿರಂತನ ಘೋಷಣೆಗಳು.

- **ಹಲವಾರು ಧರ್ಮಗಳ ಅಸ್ತಿತ್ವ ದೇಶದ ಪ್ರಗತಿಗೆ ಮಾರಕವೆ ?**

ಭಾರತ ಭೂಮಿಯ ಅಭಿವೃದ್ಧಿ ಎಂಬ ವಾದ್ಯ ವೃಂದದ ಗಾಯನದಲ್ಲಿ ವಿವಿಧ ಧರ್ಮ, ಮತ, ಪಂಥಗಳು ವಿವಿಧ ವಾದ್ಯಗಳಿದ್ದಂತೆ. ಎಲ್ಲ ವಾದ್ಯಗಳೂ ಶ್ರುತಿಯೊಡನೆ ಕೂಡಿ ಸುಸ್ವರವ ಹಾಡುವಂತೆ, ರಾಷ್ಟ್ರಭಕ್ತಿ ಎಂಬ ಶ್ರುತಿಯ ಗತಿಯನ್ನು ಅನುಸರಿಸಿ ಎಲ್ಲ ಧರ್ಮ ಮತ ಪಂಥಗಳವರೂ ವಿಶ್ವಕಲ್ಯಾಣದ ಹಾಡು ಹಾಡಬೇಕು.



KALYANA KIRANA • monthly magazine Printed and Published by B. Shambhulingaiah, at Prabhudeva Printing Press, Basava Gangotri, Kumbalgod, Bangalore-560 074.
Phone : 8437234